ಉಚಿತ ಪುಸ್ತಕ



## ಡಾ॥ ಎಲ್ ಆರ್ ಹೆಗಡೆ

ಅಪ್ರಕಟಿತ ಸಂಗ್ರಹ ಮಾಲೆ

೫

# ಕೋಲಾಟದ ಪದಗಳು

ಸಂಪಾದಿಸಿದವರು: ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ



ಮಿತ್ರಮಾಧ್ಯಮ
ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ

ಉಚಿತ ಪುಸ್ತಕ

## ಡಾ॥ ಎಲ್ ಆರ್ ಹೆಗಡೆ

ಅಪ್ರಕಟಿತ ಸಂಗ್ರಹ ಮಾಲೆ

ಐ

# ಕೋಲಾಟದ ಪದಗಳು

**ಸಂಪಾದಿಸಿದವರು**

ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ

ಮಿತ್ರಮಾಧ್ಯಮ

ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ

ಈ ಪುಸ್ತಕವನ್ನು 'ಮಿತ್ರಮಾಧ್ಯಮ'ದ 'ಉಚಿತ ಪುಸ್ತಕ ಸಂಸ್ಕೃತಿ' ಅಭಿಯಾನದ ಭಾಗವಾಗಿ ಪ್ರಕಟಿಸಿದ್ದು, ಸಾಫ್ಟ್ ಪ್ರತಿಗಳನ್ನು
**freebookculture.riverthoughts.com** ವೆಬ್‌ಸೈಟ್‌ನಲ್ಲಿ ಉಚಿತವಾಗಿ ಪಡೆಯಬಹುದು.
*This book is published as part of `Mitramaadhyama' Trust's campaign FREE BOOK CULTURE; people who wish to have their own copy can download it from freebookculture.riverthoughts.com*

# ಕೋಲಾಟದ ಪದಗಳು

# Kolatada Padagalu

ಸಂಗ್ರಹಕಾರರು
ಡಾ॥ ಎಲ್ ಆರ್ ಹೆಗಡೆ

ಸಂಪಾದಕರು
ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ

COLLECTED BY
**Dr. L R Hegde**

EDITED BY
**Smt. Renuka Ramakrishna Bhat**

ಇ - ಪ್ರಕಟಣೆ
ಮಿತ್ರಮಾಧ್ಯಮ
ಬೆಂಗಳೂರು

E-PUBLICATION BY
**MITRAMAADHYAMA (TRUST)**
Bangalore

ಮೊದಲ ಇ-ಪ್ರಕಟಣೆ : ಸೆಪ್ಟೆಂಬರ್ ೨೦೨೦
ಆಕಾರ: ೧/೮ ಡೆಮಿ
ಪುಟಗಳು: ೧೧೬+೪

First E-Edition: September 2020
Size: 1/8 Demy
Pages: 116+4

ಈ ಪುಸ್ತಕದ ಉಚಿತ ಅಕ್ಷರ ಜೋಡಣೆ ಮಾಡಿ ಸಹಕರಿಸಿದವರು
**ಶ್ರೀಮತಿ ಸಂಧ್ಯಾಶಾಸ್ತ್ರಿ**
**ಶ್ರೀ ರುದ್ರೇಶ್ವರ ರಾಮನಗರ**
**ಶ್ರೀ ವೇಣುಗೋಪಾಲ ಗಾಂವ್ಕರ್**

ಮುಖಪುಟ ರಚನೆ: ಶ್ರೀ ಪ್ರಭಾಕರ್

**This work is licensed under a Creative Commons Attribution-Non Commercial-NoDerivatives 4.0 International License.**
**ಈ ಪುಸ್ತಕವು ಕ್ರಿಯೇಟಿವ್ ಕಾಮನ್ಸ್ ಹಕ್ಕುಪದ್ಧತಿಯಲ್ಲಿ 4.0 ಅಂತಾರಾಷ್ಟ್ರೀಯ ಪರವಾನಗಿಯನ್ನು ಹೊಂದಿದ್ದು ಇದನ್ನು ಯಥಾವತ್ತಾಗಿ ವಾಣಿಜ್ಯೇತರ ಉದ್ದೇಶಗಳಿಗೆ ಮರುಮುದ್ರಿಸುವುದಕ್ಕೆ ಅನುಮತಿ ಇರುತ್ತದೆ.**

# ಪ್ರಕಾಶಕರ ಮಾತು

ಸುಮಾರು ಎರಡೂವರೆ ವರ್ಷದ ಹಿಂದೆ ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ ಅವರು ನನಗೆ ಕರೆ ಮಾಡಿ, ತಮ್ಮ ಪರಿಚಯ ಮಾಡಿಕೊಂಡರು. ನಾನು ಭಾರತವಾಣಿ ಬಹುಭಾಷಾ ಜ್ಞಾನಕೋಶ ಯೋಜನೆಯಲ್ಲಿ ಇರುವುದನ್ನು ತಿಳಿದುಕೊಂಡಿದ್ದ ಅವರು ತಮ್ಮ ತಂದೆ ದಿ. ಎಲ್ ಆರ್ ಹೆಗಡೆಯವರ ಅಪ್ರಕಟಿತ ಜಾನಪದ ಸಂಗ್ರಹಗಳ ಹಸ್ತಪ್ರತಿಗಳನ್ನು ಗಮನಿಸಬಹುದೇ ಎಂದು ಕೇಳಿದರು.

ನಾನು 1990-92ರ ಅವಧಿಯಲ್ಲಿ ಶಿರಸಿಯಲ್ಲಿದ್ದಾಗ ಒಂದೆರಡು ಸಲ ಶ್ರೀ ಎಲ್ ಆರ್ ಹೆಗಡೆಯವರನ್ನು ಬಸ್ ನಿಲ್ದಾಣದಲ್ಲಿ ಕಂಡಿದ್ದೆ. ಮಾತನಾಡಿಸಲು ಧೈರ್ಯ ಇರದವನಾಗಿದ್ದೆ. ಈಗ ಅವರ ಅಪ್ರಕಟಿತ ಸಂಗ್ರಹವೇ ಇದೆ ಎಂದು ತಿಳಿದಾಗ ಕುತೂಹಲ ಹೆಚ್ಚಾಯಿತು. ಶ್ರೀಮತಿ ರೇಣುಕಾ ಭಟ್ ಅವರ ಮನೆಗೇ ಹೋದೆ. ಅಲ್ಲಿರುವ ಅಪಾರ ಸಂಗ್ರಹವನ್ನು ನೋಡಿ ಅಚ್ಚರಿಯಾಯಿತು. ಅದಾಗಲೇ ಶ್ರೀ ಎಲ್ ಆರ್ ಹೆಗಡೆಯವರು 83 ಪುಸ್ತಕಗಳನ್ನು ಪ್ರಕಟಿಸಿದ್ದವರು. ಆದರೂ ಇಷ್ಟೆಲ್ಲ ಉಳಿದುಕೊಂಡಿದ್ದವು!

ಈಗ ಅವುಗಳಲ್ಲಿ ಆಯ್ದ ಸಂಗ್ರಹಗಳನ್ನು ಒಂದು ಸರಣಿಯಾಗಿ, ಮುಕ್ತ ಮಾಹಿತಿಯಾಗಿ ಪ್ರಕಟಿಸಲಾಗಿದೆ. ಇದನ್ನು ಕ್ರಿಯೇಟಿವ್ ಕಾಮನ್ಸ್ ಹಕ್ಕಿನಡಿಯಲ್ಲಿ ಪ್ರಕಟಿಸಿರುವುದರಿಂದ ಇವುಗಳ ಮುದ್ರಿತ ಪ್ರತಿಗಳನ್ನು ಯಾವುದೇ ಆಸಕ್ತರು ಯಾವ ಅನುಮತಿಯೂ ಇಲ್ಲದೆ, ಇದ್ದ ಹಾಗೆಯೇ ಮುದ್ರಿಸಬಹುದು!

**ಆನ್‌ಲೈನ್‌ನಲ್ಲಿ ಕೇಂದ್ರ ಸರ್ಕಾರದ `ಭಾರತವಾಣಿ' ಯೋಜನೆ, ರಾಜ್ಯ ಸರ್ಕಾರದ `ಕಣಜ' ಯೋಜನೆಗೆ, ಇನ್ನಾವುದೇ ಮುಕ್ತ ಮಾಹಿತಿಯ ಜಾಲತಾಣಕ್ಕೆ ಉಚಿತವಾಗಿ ಈ ಪ್ರತಿಗಳನ್ನು ನೀಡಲಾಗುತ್ತಿದೆ.**

ಜಾನಪದ ಸಾಹಿತ್ಯದ ಮೌಲ್ಯಮಾಪನ ಆಗುವ ಮಾತಿರಲಿ, ಇದ್ದುದನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳುವ ಕಾಲ ಈಗ ಎದುರಾಗಿದೆ. ಆಧುನಿಕತೆ, ನಗರೀಕರಣದ ಪ್ರಭಾವದಿಂದ ಭಾಷೆ - ಲಿಪಿ - ಪರಂಪರಾಗತ ಅರಿವು ಎಲ್ಲವೂ ಕಣ್ಮರೆಯಾಗುತ್ತಿವೆ. ಇಂತಹ ಸಂದರ್ಭದಲ್ಲಿ ಸಿಕ್ಕಿದ್ದನ್ನು ಉಳಿಸಿಕೊಂಡು ಹೋಗುವ ತರಾತುರಿಯಲ್ಲಿ ಇದನ್ನು ಪ್ರಕಟಿಸಲಾಗಿದೆ ಎಂಬುದನ್ನು ಓದುಗರು ಗಮನಿಸಬೇಕಿದೆ.

**ಈ ಪುಸ್ತಕದ ಅಕ್ಷರಜೋಡಣೆಗೆ ಸಹಕರಿಸಿದ, ಮುಖಪುಟ ರಚಿಸಿಕೊಟ್ಟ ಫೇಸ್‌ಬುಕ್ ಮಿತ್ರಲೋಕಕ್ಕೆ ಮಿತ್ರಮಾಧ್ಯಮದ ಅನಂತ ವಂದನೆಗಳು. ಡಿಜಿಟಲ್ ಜನಪದವು ಪರಂಪರಾಗತ ಜನಪದವನ್ನು ಉಳಿಸಿಕೊಳ್ಳಲು ಮುಂದಾಗಿರುವುದು, ಅದರಲ್ಲೂ ಹಲವು ಯುವ ವಯಸ್ಕರೇ ಈ ಕೆಲಸ ಮಾಡಿರುವುದು ಕೊಂಚ ಸಮಾಧಾನದ ಸಂಗತಿ. ಇಂತಹ ಜೀವನ್ಮುಖಿ ಯುವಸಮುದಾಯ ವಿಸ್ತಾರವಾಗಲಿ ಎಂದು ಹಾರೈಸುತ್ತೇವೆ.**

**ಮುಕ್ತಮಾಹಿತಿಗೆ ಪುಟ್ಟ ಹೆಜ್ಜೆ ಇಡುವ ಮಿತ್ರಮಾಧ್ಯಮದ ಘೋಷವಾಕ್ಯವನ್ನು ಬೆಂಬಲಿಸುವ ಎಲ್ಲರಿಗೂ ವಂದನೆಗಳು.**

**- ಬೇಳೂರು ಸುದರ್ಶನ ಮತ್ತು ಕೃಷ್ಣನ್**

ಜುಲೈ 2019

# ಸಂಪಾದಕರ ಮಾತು

ನಮ್ಮ ಪೂಜ್ಯ ತಂದೆಯವರಾದ ಡಾ|| ಎಲ್. ಆರ್. ಹೆಗಡೆಯವರು ಕನ್ನಡ ಜಾನಪದ ಸಾರಸ್ವತಲೋಕದಲ್ಲಿ ಚಿರಪರಿಚಿತರು. ಅವರು ತಮ್ಮ ಪೂರ್ತಿ ಜೀವನವನ್ನು ಉತ್ತರ ಕನ್ನಡದ ನಶಿಸಿಹೋಗುತ್ತಿರುವ ಜಾನಪದ ಸಂಪತ್ತನ್ನು ಸಂಗ್ರಹಿ, ಉಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಯಕ್ಷಗಾನ ಅಕಾಡೆಮಿಯವರು ಪ್ರಕಟಿಸಿದ, ತಮ್ಮ ಕೊನೆಯ ದಿನಗಳಲ್ಲಿ ಅವರೇ ಬರೆದ- 'ಕ್ಷೇತ್ರದಲ್ಲಿ ಕಾರ್ಯದ ನೆನಪುಗಳು' ಗ್ರಂಥವನ್ನು ಓದಿದರೆ ಜಾನಪದ ಕ್ಷೇತ್ರದಲ್ಲಿ ಅವರ ಅಪೂರ್ವ ಸಾಧನೆಯ, ಪಟ್ಟ ಕಷ್ಟಗಳ ಪರಿಚಯವಾಗುತ್ತದೆ. ಅವರಿರುವಾಗ ಪ್ರಕಟವಾದ ಪುಸ್ತಕಗಳು ಹಾಗೂ ಅವರೇ ಬರೆದ ಪಾಂಡಿತ್ಯ ಪೂರ್ಣ ಪೀಠಿಕೆಗಳು, ಮುನ್ನುಡಿಗಳು ಜಾನಪದ ಕ್ಷೇತ್ರದಲ್ಲಿ ಅವರ ಅಳವಾದ ಅಧ್ಯಯನವನ್ನು ಎತ್ತಿ ತೋರಿಸುತ್ತವೆ. ತುಲನಾತ್ಮಕ ವಿಶ್ಲೇಷಣೆಗಳು ನಿಜವಾಗಿಯೂ ಶ್ಲಾಘನೀಯ. ಉತ್ತರ ಕನ್ನಡದ ಬುಡಕಟ್ಟು ಜನಾಂಗಗಳ ಕುರಿತ ಅಧ್ಯಯನಗಳು ಅನನ್ಯವಾಗಿದೆ. ಸಂಶೋಧನಾ ಪ್ರಬಂಧಗಳು, ಭಾಷಣಗಳು, ಜಾನಪದ ಲೇಖನಗಳು ಉಲ್ಲೇಖನೀಯ.

ಜಾನಪದ ಅಧ್ಯಯನದ ಜೊತೆಗೆ ಹೋಮಿಯೋಪಥಿ, ಆಯುರ್ವೇದ, ಹಳ್ಳಿಯ ಚಿಕಿತ್ಸಾ ಪದ್ಧತಿಗಳಲ್ಲಿಯೂ ಕೂಡ ಅಪಾರ ಜ್ಞಾನ ಮತ್ತು ಅನುಭವಗಳನ್ನು ಪಡೆದುಕೊಂಡಿದ್ದರು. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದುಕೊಂಡಿದ್ದಾರೆ. ಉಚಿತವಾಗಿ ಔಷಧಿಗಳನ್ನು ಕೊಡುತ್ತಿದ್ದರು. ಕೆಲಸ ಮಾಡುವ ವೈಖರಿಯನ್ನು ನೋಡಿದಾಗ ಇಂಗ್ಲೀಷಿನ 'One man army' ನೆನಪಾಗುತ್ತದೆ.

ನಾವು ನಾಲ್ಕು ಮಕ್ಕಳು ರೇಣುಕಾ, ರಾಮಕೃಷ್ಣ, ಸುನಂದಾ ಹಾಗು ಸವಿತಾ. ನಾವು ಚಿಕ್ಕವರಿರುವಾಗ, "ಯಾಕಪ್ಪಾ ಈ ಹಳ್ಳಿಗರ ಹಾಡು, ಕಥೆ, ಸಾಹಿತ್ಯಗಳನ್ನಾದರೂ ಸಂಗ್ರಹಿಸುತ್ತಾರೋ" ಏನೂ ಪ್ರಯೋಜನವಿಲ್ಲದ ಉಪಯೋಗವಿಲ್ಲದ ಕೆಲಸವೆಂದೂ, ವೇಳೆ ಹರಣವೆಂದೂ ಅನ್ನಿಸುತ್ತಿತ್ತು. ಆದರೆ, ಈಗ ಕಷ್ಟಪಟ್ಟು ಸಂಗ್ರಹಿಸಿದ್ದರಲ್ಲಿ ಕೆಲವನ್ನಾದರೂ ಉಳಿಸಬೇಕೆಂಬ ಹಂಬಲದಿಂದ ಕೆಲಸ ಮಾಡತೊಡಗಿದಾಗ ಇದೆಷ್ಟು ಕಷ್ಟತರವಾದ, ಕ್ಲಿಷ್ಟವಾದ ಕೆಲಸವೆಂದು ತಿಳಿಯಹತ್ತಿದೆ. Absent minded professor ಆದರೂ ಜಾನಪದ ವಿಷಯಗಳನ್ನು ಸಂಗ್ರಹಿಸುವಾಗ ಹೇಳಿದವರ ಹೆಸರು, ಬರೆಸಿಕೊಂಡ ದಿನಾಂಕ, ವಿವಿಧ ವಿಷಯಗಳ ವಿಂಗಡಣೆ, ಸಂಸ್ಕರಣೆಗಳನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ, ಅಂದಿನ ದಿನಗಳಲ್ಲಿ ಅಷ್ಟೊಂದು ಶ್ರಮ ವಹಿಸದಿದ್ದಾರೆ. ಸಂಗ್ರಹಿಸಿದ್ದೆಲ್ಲವೂ ನಶಿಸಿಹೋಗುತ್ತಿದ್ದವೆಂಬ ಅನುಭವವಾಗುತ್ತದೆ. ದೂರದೃಷ್ಟಿ ಮೆಚ್ಚುವಂಥದ್ದು. ಬಹುಶಃ ನಿರೂಪಕರಾರೂ ಈಗಿಲ್ಲ. ಅವರ ಸಂಗ್ರಹಗಳೂ ಅವರ ಜೊತೆಯೇ ಆಧುನಿಕತೆಯ

ಜೀವನಶೈಲಿಯಲ್ಲಿ ಅಡಗಿಹೋಗಿದೆ. ಈಗಿನ ತಲೆಮಾರಿನವರ ಹತ್ತಿರ ಸ್ವಲ್ಪವೂ ಸಿಗುವ ಆಸೆಯಿಲ್ಲ. ಮಾಡಿದ ಸಂಗ್ರಹವನ್ನು ಅವಲೋಕಿಸಿದಾಗ ಜನಪದರ ಮುಗ್ಧ ಮನಸ್ಸು, ಸ್ವಚ್ಛಂದ ವಾತಾವರಣ, ಆಗಿನ ಸಾಮಾಜಿಕ ರೀತಿ-ನೀತಿಗಳ ಕಲ್ಪನೆ, ಜೀವನದ ಸರಳತೆ, ಸರಳ-ಸುಲಭ ಚಿಕಿತ್ಸಾಪದ್ಧತಿ ಎಲ್ಲ ತಿಳಿಯ ಹತ್ತಿದೆ.

ತಂದೆಯವರೇ ಹೇಳಿಕೊಂಡಂತೆ ಅವರಿಗೆ ಹಳ್ಳಿಯ ಹಾಡುಗಳನ್ನು ಕಲಿತು, ಹೇಳುವ ಹವ್ಯಾಸ ಚಿಕ್ಕಂದಿನಿಂದೇ ಇತ್ತು. ಧ್ವನಿ ಬಹಳ ಮಧುರವಾಗಿತ್ತು; ಸುಶ್ರಾವ್ಯವಾಗಿ ಹೇಳುತ್ತಿದ್ದರು. ಹವ್ಯಕ ಹೆಂಗಸರಲ್ಲಿ ಹಬ್ಬ-ಹರಿದಿನಗಳಲ್ಲಿ, ಮದುವೆ ಮುಂಜಿಗಳಲ್ಲಿ, ಮುಂಜಾನೆ, ಸಂಜೆ ಕೆಲಸ ಮಾಡುವಾಗ ಹಾಡುಗಳನ್ನು ಹೇಳುವ ಪರಿಪಾಠವಿತ್ತು. ಹೀಗಾಗಿ ಅರಿವಿಲ್ಲದಂತೆ ಜಾನಪದದತ್ತ ವಾಲಿದ್ದರು. ಮೊದಮೊದಲು ಸಮಯದ ಅಭಾವದಿಂದ, ಹೋಮಿಯೋಪಥಿ ಔಷಧಗಳ ಅಭ್ಯಾಸ, ದಿನಾಲೂ ಬರುವ ರೋಗಿಗಳ ಉಪಚಾರ, ಕಾಲೇಜಿನ ಕೆಲಸಗಳ ಮೂಲಕ ಹೆಚ್ಚು ಸಮಯ ಸಿಗುತ್ತಿರಲಿಲ್ಲ. ಕೆನರಾ ಕಾಲೇಜಿಂದ ಅಧ್ಯಾಪಕ ಕೆಲಸದಿಂದ ನಿವೃತ್ತಿಯ ನಂತರ ಉಳಿದ ಪೂರ್ತಿ ಆಯುಷ್ಯವನ್ನು ಜಾನಪದಕ್ಕಾಗಿಯೇ, ಆದರ ಸಂಗ್ರಹ, ಉಳಿಸುವ ಕೆಲಸಕ್ಕೇ ಮೀಸಲಿಟ್ಟಿದ್ದರು. ಉತ್ತರ ಕನ್ನಡದ ಬಹುತೇಕ ಎಲ್ಲ ಹಳ್ಳಿಗಳನ್ನು ತಿರುಗಿ ಸಾಕಷ್ಟು ವೈವಿಧ್ಯಪೂರ್ಣ ಜಾನಪದ ಸಾಹಿತ್ಯವನ್ನು ಸಂಗ್ರಹಿಸಿದ್ದರು. ಸಾಧ್ಯವಾದಷ್ಟು ಪ್ರಕಟಣೆ ಕಂಡಿವೆ.

ಈ ಕ್ಷೇತ್ರದಲ್ಲಿ ಅವರ ಏಳ್ಗೆಯನ್ನು ಕಂಡು ಪ್ರಕಟಣೆಗಳಿಗೆ ತೊಡಕನ್ನು ತಂದು ಒಡ್ಡುವವರೂ ಇದ್ದರು. ಗಮನಕ್ಕೆ ಬಂದರೂ ಅಷ್ಟಾಗಿ ಹಚ್ಚಿಕೊಳ್ಳದೆ ತಮ್ಮ ಕೈಯಿಂದ ಖರ್ಚು ಮಾಡಿ ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದರು. ಜಾನಪದ ವೈದ್ಯಕೀಯದಲ್ಲಿ, ಅಂದರೆ- ಹಳ್ಳಿಯ ಚಿಕಿತ್ಸಾಪದ್ಧತಿಗಳನ್ನು ಅವರಷ್ಟು ಸಂಗ್ರಹಿಸಿ ಪ್ರಕಟಿಸಿದವರು ವಿರಳವೆಂದೇ ನನ್ನ ಭಾವನೆ. ಆದರೆ, ಕೊನೆಗಾಲದಲ್ಲಿ ಪರಿಷ್ಕರಿಸಿ, ವಿಂಗಡಿಸಿ, ನಾವಿಬ್ಬರೂ ಕೂಡಿ ತಯಾರಿಸಿದ ಹಸ್ತಪ್ರತಿಗಳು– ಸುಮಾರು ಮೂವತ್ತೈದು ಹಸ್ತಪ್ರತಿಗಳು. ನಮಗಾರಿಗೂ ಅರಿವಿಲ್ಲದಂತೆ ಅವೆಲ್ಲವೂ ಯಾರದೋ ಕೈ ಸೇರಿದೆ; ಅವೆಲ್ಲ ಅತ್ಯಮೂಲ್ಯವಾಗಿದ್ದವು. ಎಷ್ಟು ಪ್ರಯತ್ನಿಸಿದರೂ ಲಭ್ಯವಾಗಲಿಲ್ಲ. ಆದರೆ, ಒಂದು ಮಾತು– ಪರಿಷ್ಕರಿಸಿ, ವಿಂಗಡಿಸುವ ಮೊದಲು ಅವುಗಳ ಎರಡು-ಮೂರು ಮೂಲಪ್ರತಿಗಳು ಇರುತ್ತಿದ್ದವು. ಆ ಸಂಗ್ರಹಗಳನ್ನು ನಮ್ಮ ಮನೆಗೆ ತಂದು, ಆ ಮೂಲಪ್ರತಿಗಳಿಂದ ಸುಮಾರು ೧೪-೧೫ ಹಸ್ತಪ್ರತಿಗಳನ್ನು ತಯಾರಿಸಿ ಅದನ್ನು ಇ-ಪ್ರಕಟಣೆಯ ಮೂಲಕ ಜಾನಪದ ಪ್ರೇಮಿಗಳಿಗೆ ತಲುಪಿಸುವ ಪ್ರಯತ್ನ ಮಾಡಲಾಗಿದೆ.

ನಾವಂತೂ ಈ ಕೆಲಸದ ಆಶೆಯನ್ನೇ ಬಿಟ್ಟಿದ್ದೆವು. ಅನೇಕ ಜಾನಪದ ಕ್ಷೇತ್ರದಲ್ಲಿದ್ದವರ ಸಂಪರ್ಕ ಮಾಡುವ ಪ್ರಯತ್ನ ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ಎಲ್ಲರೂ ಹೆಗಡೆಯವರ ಬಗ್ಗೆ ಗೌರವದ ಮಾತನಾಡುವವರೇ ಹೊರತು ಸಹಾಯಕ್ಕೆ ಅಥವಾ

ಮಾರ್ಗದರ್ಶನಕ್ಕೆ ಯಾರೂ ಮುಂದೆ ಬರಲಿಲ್ಲ. ಕೊನೆಯಲ್ಲಿ ಶ್ರೀಯುತ ನಂದಕುಮಾರರ ಪರಿಚಯವಾಗಿ ಅವರು ಶ್ರೀಯುತ ಬೇಳೂರು ಸುದರ್ಶನರ ಬಗ್ಗೆ ಹೇಳಿದರು. ನಾನು ನಿರಾಸೆಯಿಂದಲೇ ಕೊನೆಯ ಪ್ರಯತ್ನವೆಂದು ಅವರಿಗೆ ಫೋನ್ ಮಾಡಿದೆ. ಅವರು ಸಹಾಯ ಹಾಗೂ ಮಾರ್ಗದರ್ಶನ ಮಾಡಲು ಮುಂದೆ ಬಂದರು. ಇಂದು ಅವರ ಜೊತೆಯಲ್ಲಿ ಅವರ ಅನೇಕ ಸ್ನೇಹಿತರೂ ಕೈ ಜೋಡಿಸಿದ್ದಾರೆ. ತಂದೆಯವರೇ ಹೇಳಿಕೊಂಡಂತೆ ೧೫ ಸಾವಿರ ಪುಟಗಳ ಸಂಗ್ರಹದಲ್ಲಿದ್ದ ಸ್ವಲ್ಪ ಭಾಗವನ್ನು ಉಳಿಸುವ ಪ್ರಯತ್ನ ಸಾಗಿದೆ. ಇಷ್ಟು ಉಳಿದರೂ ನಮ್ಮೆಲ್ಲರ ಪ್ರಯತ್ನ ಸಾರ್ಥಕವಾಯಿತೆಂದು ತಿಳಿಯುತ್ತೇನೆ. ಈ ನಿಟ್ಟಿನಲ್ಲಿ ಸಹಾಯ ಮಾಡಿದ (ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ) ಎಲ್ಲರಿಗೂ ನಾವು ಚಿರಋಣಿಗಳು.

**ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ**

9535192074 / 8660421309

# ಡಾ|| ಎಲ್ ಆರ್ ಹೆಗಡೆ ಕೃತಿಗಳು

## ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

| | | |
|---|---|---|
| ೧ | ಮೂಢನಂಬಿಕೆಗಳು | (ಪ್ರಚಾರೋಪನ್ಯಾಸ) |
| ೨ | ಜಾನಪದ ಕಥೆಗಳು | (ಪ್ರಚಾರೋಪನ್ಯಾಸ) |
| ೩ | ಪುರಾಣ ಜಿಜ್ಞಾಸೆ | (ಪ್ರಚಾರೋಪನ್ಯಾಸ) |
| ೪ | ಜನಪದ ಸಾಹಿತ್ಯದಲ್ಲಿ ಮದುವೆ | (ಪ್ರಚಾರೋಪನ್ಯಾಸ) |
| ೫ | ಬತ್ತಲೇಶ್ವರ ರಾಮಾಯಣ | (ಪ್ರಚಾರೋಪನ್ಯಾಸ) |
| ೬ | ಮಕ್ಕಳಲ್ಲಿ ಮೂಢನಂಬಿಕೆಗಳ ಬೆಳವಣಿಗೆ | (ಪ್ರಚಾರೋಪನ್ಯಾಸ) |
| ೭ | ಪರಮೇಶ್ವರಿಯ ಪದಗಳು | (ಕಥನಗೀತೆಗಳು) |
| ೮ | ಗುಮ್ಮನ ಪದಗಳು | (ಕಥನಗೀತೆಗಳು) |
| ೯ | ಉತ್ತರ ಕನ್ನಡ ಜನಪದ ಕಥೆಗಳು | (ಪ್ರಚಾರೋಪನ್ಯಾಸ) |
| ೧೦ | ಹಾಲಿನ ತೆನೆ | (ಜಾನಪದ ತ್ರಿಪದಿಗಳು) |
| ೧೧ | ಕುಮಾರವ್ಯಾಸನ ಪಾತ್ರಸೃಷ್ಟಿ | (ಮಹಾಪ್ರಭಂಧ) |
| ೮೦ | ಗಾಮೊಕ್ಕಲ ಕಥೆಗಳು | |

## ಮೈಸೂರು ವಿಶ್ವವಿದ್ಯಾಲಯ

| | | |
|---|---|---|
| ೧೨ | ತಿಮ್ಮಕ್ಕನ ಪದಗಳು | (ಕಥನಗೀತೆಗಳು) |
| ೧೩ | ಕೆಲವು ಲಾವಣಿಗಳು | (ಕಥನಗೀತೆಗಳು) |
| ೧೪ | ನಮ್ಮ ಜನಪದ ಕಥೆಗಳು | (ಕಥನಗೀತೆಗಳು) |
| ೧೫ | ಮಲೆನಾಡಿನ ಸೆರಗಿನ ಕಥೆಗಳು | (ಕಥನಗೀತೆಗಳು) |

## ಬೆಂಗಳೂರು ವಿಶ್ವವಿದ್ಯಾಲಯ

| | | |
|---|---|---|
| ೧೬ | ಹಾಡುಂಟೇ ನನ್ನ ಮಡಿಲಲ್ಲಿ | (ತ್ರಿಪದಿ ಸಂಕಲನ) |
| ೧೭ | ಗುಮಟೆಯ ಪದಗಳು | (ಜನಪದ ಗೀತೆಗಳು) |
| ೧೮ | ಮುಕ್ರಿ ಮತ್ತು ಹೊಲೆಯರ ಪದಗಳು | (ಜನಪದ ಗೀತೆಗಳು) |

## ಗ್ರಾಮಜೀವನ ಕಾರ್ಯಾಲಯ, ಕುಮಟಾ

| | | |
|---|---|---|
| ೧೯ | ಬಾಳ ದೀಪಾವಳಿ | (ಕವನ ಸಂಕಲನ) |

## ವಿವೇಕೋದಯ ಗ್ರಂಥಮಾಲೆ, ಗುಡಿಬಂಡೆ

| | | |
|---|---|---|
| ೨೦ | ಜೈನಭಾರತ ಕಥೆಗಳು | |

## ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

| | | |
|---|---|---|
| ೧೧ | ಜನಪದ ಸಾಹಿತ್ಯ | (ವಿಮರ್ಶಕ ಗ್ರಂಥ) |
| ೧೨ | ಗೊಂಡರ ಪದಗಳು | (ಜನಪದ ಗೀತೆಗಳು) |
| ೧೩ | ಮಾಚಯು ಕಥನ ಗೀತಗಳು | ಕ.ಸಾ.ಪ., ಬೆಂಗಳೂರು ೨೦೦೨ |
| ೧೪ | ಕತೆ ಗಾದೆಗಳು | ಕ.ಸಾ.ಪ., ಬೆಂಗಳೂರು ೨೦೦೪ |

## ಸಮಾಜ ಪುಸ್ತಕಾಲಯ, ಧಾರವಾಡ

| | | |
|---|---|---|
| ೧೫ | ಕಾವ್ಯ ವ್ಯಾಸಂಗ | (ಕಾವ್ಯವಿಮರ್ಶೆ) |
| ೧೬ | ಸುವ್ವೀ ಸುವ್ವೀ ಸುವ್ವಾಲೆ | (ಜಾನಪದ ತ್ರಿಪದಿಗಳು) |
| ೧೭ | ಬೆಳಿಯಮ್ಮನ ಹಾಡುಗಳು | (ಕಥನಗೀತೆಗಳು) |
| ೧೮ | ಜನಪದ ಜೀವನ ಮತ್ತು ಕಲೆ | (ಲೇಖನಗಳು) |
| ೧೯ | ಗಾಂವಠಿ ಚಿಕಿತ್ಸೆ | |
| ೨೦ | ಪಾಕರಸಾಯನ | (ಅಡಿಗೆ ಗ್ರಂಥ) |

## ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

| | | |
|---|---|---|
| ೨೧ | ಕರ್ನಾಟಕದ ಕರಾವಳಿಯ ಜನಪದ ಗೀತೆಗಳು | |
| ೨೨ | ಕರ್ನಾಟಕ ಕರಾವಳಿಯ ಜನಪದ ಕಥೆಗಳು | |
| ೨೩ | ಗೇಣುಗುಡ್ಡದ ಕುಳ್ಳ | (ಮಕ್ಕಳ ಕಥೆಗಳು) |
| ೨೪ | ಉತ್ತರ ಕನ್ನಡದ ಗೊಂಡರು | |
| ೨೫ | ಉತ್ತರ ಕನ್ನಡದ ಸಿದ್ಧಿಯರು | (೨ನೇ ಆವೃತ್ತಿ) |
| ೨೬ | ಜನಪದ ಸಾಹಿತ್ಯ | (ಇತರರೊಡನೆ ಬರೆದುದು) |
| ೨೭ | ಗೇಣುಗಡ್ಡದ ಕುಳ್ಳ ಮತ್ತು ಇತರ ಕಥೆಗಳು - ೧೯೮೦ | |

## ಸಾಹಿತ್ಯ ಭಂಡಾರ, ಹುಬ್ಬಳ್ಳಿ

| | | |
|---|---|---|
| ೨೮ | ಲಂಕಾದಹನ | (ಬತ್ತಲೇಶ್ವರ ರಾಮಾಣದ ಭಾಗ) |
| ೨೯ | ಅನುಭವ ಚಿಕಿತ್ಸೆ | (ವೈದ್ಯಗ್ರಂಥ) |
| ೩೦ | ಆರೋಗ್ಯ ಧರ್ಮ ಪಾಲನೆ | (ವೈದ್ಯಗ್ರಂಥ) |
| ೩೧ | ದನಗಳ ವೈದ್ಯ | (ವೈದ್ಯಗ್ರಂಥ) |
| ೩೨ | ರೂಢಿಯ ಚಿಕಿತ್ಸೆ | (ವೈದ್ಯಗ್ರಂಥ) |

## ವಿಶ್ವ ಪ್ರಕಾಶನ, ಹುಬ್ಬಳ್ಳಿ

೪೩ ಸುಲಭ ಚಿಕಿತ್ಸೆ (ವೈದ್ಯಗ್ರಂಥ)

## ಜ್ಞಾನಸಾಧನ ಗ್ರಂಥಮಾಲೆ ಹೆಗಡೆ, ಕುಮಟಾ/ಸಿದ್ದಾಪುರ

೪೪ ಹಕ್ಕಿ ನರಸಣ್ಣ (ಕಥಾ ಸಂಕಲನ)
೪೫ ಸಿದ್ದಿಯರ ಕಥೆಗಳು (ಜನಪದ ಕಥೆಗಳು)
೪೬ ಕರಾವಳಿಯ ಕಥೆಗಳು (ಜನಪದ ಕಥೆಗಳು)
೪೭ ಜನಪದ ಭಾರತದ ಕಥೆಗಳು (ಜನಪದ ಕಥೆಗಳು)
೪೮ ಕುಮರಿ ಮರಾಟಿಗರ ಕಥೆಗಳು (ಜನಪದ ಕಥೆಗಳು)
೪೯ ಜನಪದ ವೈದ್ಯ (ಜನಪದ ಕಥೆಗಳು)
೫೦ ಹೆಂಗಸರ ಗೀತಗಳು
೫೧ ಕುಮಾರವ್ಯಾಸ (ವಿಮರ್ಶೆ)
೫೨ ಮಂಗಲ ಗೀತಗಳು
೫೩ ಪೂಜಾ ಗೀತಗಳು
೫೪ ಒಗಟುಗಳು ಮತ್ತು ಕಥೆಗಳು
೫೫ ಅಪೂರ್ವ ಮೃದಂಗ (ಜನಪದ ಕಥೆಗಳು)
೫೬ ಹೋಮಿಯೋಪಥಿ ಚಿಕಿತ್ಸೆ

## ಕದಂಬ ಪ್ರಕಾಶನ, ಸಿರ್ಸಿ

೫೭ ಹಾಲಕ್ಕಿ ಹೆಂಗಸರ ಮದುವೆ ಹಾಡುಗಳು

## ಸಾಹಿತ್ಯ ಅಕಾಡೆಮಿ, ನವದೆಹಲಿ

೫೮ ಜಾನಪದ ಗಿರಿಜನರ ಕಥೆಗಳು

## ಶ್ರೀ ರಾಜು ಶೆಟ್ಟಿ, ಕುಮಟಾ

೫೯ ಆಹಾರ ಉಪಾಹಾರ
೬೦ ಆರೋಗ್ಯವೇ ಭಾಗ್ಯ

## ಜ್ಞಾನಜ್ಯೋತಿ ಪ್ರಕಾಶನ, ಸಿದ್ದಾಪುರ (ಉ.ಕ)

೬೧ ಊರೌಷಧಿಗಳ ಚಿಕಿತ್ಸೆ

## ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ

೬೨ ಪಶುವೈದ್ಯ ರತ್ನಾಕರ

## ಜ್ಞಾನಸಾಧನ ಗ್ರಂಥಮಾಲೆ, ಸಿದ್ದಾಪುರ (ಉ.ಕ)

೬೩ ಕನ್ನಡ ಗಾದೆಗಳು

೬೪ ಹಳಗನ್ನಡದ ಕವಿಗಳು

೬೫ When The Indicated Remedy Fails in Homeopathic Practice

೬೬ ಗರ್ಭಿಣಿ, ಬಾಣಂತಿ ಉಪಚಾರ — ಸಂಗ್ರಾಹಕಿ ಸೌ. ರೇಣುಕಾ ಭಟ್ಟ

೬೭ ಮಧುರ ಗೀತಗಳು — ಸಂಗ್ರಾಹಕಿ ಸೌ. ರೇಣುಕಾ ಭಟ್ಟ

---

## ಡಾ. ಎಲ್. ಆರ್. ಹೆಗಡೆ ಕೃತಿ ಪ್ರಕಾಶನ ಸಮಿತಿ, ಸಿರ್ಸಿ

೬೮ ಡಾ. ಎಲ್. ಆರ್. ಹೆಗಡೆ ಕೃತಿ ಸೂಚಿ

೬೯ ಬಿಂಬ ಪ್ರತಿಬಿಂಬ

೭೦ ಗಾದೆ ಕಥೆಗಳು

೭೧ ಹೊನ್ನಮ್ಮನ ಮನೆಯ ಕಥೆಗಳು

೭೨ ಮಾತಿನರಗಿಣಿಯೇ ನುಡಿದಾವೋ

೭೩ ನಾಡ ಮದ್ದು

೭೪ ಜಾನಪದ ಕ್ರೀಡೆ

೭೫ ಆರೋಗ್ಯ ದರ್ಶನ

೭೬ ಸಣ್ಣ ಕೂಸ ಹೇಳಿದ ಕಥೆಗಳು

೭೭ ಪಡುವಣದ ಬೆಡಗು — (ವಿದ್ವಾಂಸರ ಉಪನ್ಯಾಸಗಳು)

೭೮ ನಾಮಧಾರಿ ಕತೆಗಳು — ಡಾ.ಎಲ್. ಆರ್. ಹೆಗಡೆ ಕೃತಿ ಪ್ರಕಾಶನ ಸಮಿತಿ, ಕುಮಟಾ

---

## ಕನ್ನಡ ಸಂಘ ಕ್ರೈಸ್ತ ಕಾಲೇಜು, ಬೆಂಗಳೂರು

೭೯ ಅವರಿವರು ಹೇಳಿದ ಕಥೆಗಳು

---

## ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ, ೨೦೦೨

೮೦ ಲೋಕಗೀತ ಮಂಜರಿ — ರಂಗಕಲೆಗಳ ಅಧ್ಯಯನ ಕೇಂದ್ರ ಉಡುಪಿ, ೨೦೦೨

೮೧ ಸಾಂಪ್ರದಾಯಿಕ ಅಡುಗೆಗಳು — ಸಂಗ್ರಾಹಕಿ ಸೌ.ರೇಣುಕಾ ಭಟ್ಟ

---

## ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೮೨ ಡಾ|| ಎಲ್. ಆರ್. ಹೆಗಡೆಯವರ ಕ್ಷೇತ್ರ ಕಾರ್ಯದ ನೆನಪುಗಳು — ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

## ಸಪ್ನ ಬುಕ್ ಹೌಸ್

೮೩ ಆರೋಗ್ಯಕರ ಚಿಕಿತ್ಸೆ (ವೈದ್ಯಗ್ರಂಥ)

೮೪ ಹೋಮಿಯೋಪಥಿ ಔಷಧಿ ಗುಣಧರ್ಮ
ಮತ್ತು ಚಿಕಿತ್ಸಾಸಾರ

---

- ಇವುಗಳಲ್ಲಿ 'ಹಾಲಕ್ಕಿ ಹೆಂಗಸರ ಮದುವೆಯ ಹಾಡುಗಳು' ಎಂಬ ಗ್ರಂಥಕ್ಕೆ ೧೯೮೮ನೇ ಸಾಲಿನ 'ಉತ್ತಮ ಜನಪದ ಗೀತ ಸಂಕಲನ' ಎಂದು ಮತ್ತು 'ಜನಪದ ಮತ್ತು ಗಿರಿಜನರ ಕಥೆಗಳು' ಎಂಬ ಗ್ರಂಥಕ್ಕೆ ಗದ್ಯ ಪ್ರಕಾರದಲ್ಲಿ ೧೯೯೦ನೇ ಸಾಲಿನ ಉತ್ತಮ ಗ್ರಂಥವೆಂದೂ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿಯ ಪುಸ್ತಕ ಬಹುಮಾನ ದೊರೆತಿವೆ.
- ೧೯೮೬ ಜಾನಪದ ಅಕಾಡೆಮಿ ಪ್ರಶಸ್ತಿ- ಹೊಸಪೇಟೆಯಲ್ಲಿ ಹಾ.ಮಾ. ನಾಯ್ಕರಿಂದ ಪ್ರಶಸ್ತಿ ಪ್ರಧಾನ.
- ೨೦೦೧ ನವಂಬರ್ ೧, ಮಾನ್ಯ ಮುಂತ್ರಿ ಎಸ್.ಎಂ. ಕೃಷ್ಣರಿಂದ ರಾಜ್ಯ ಪ್ರಶಸ್ತಿ ಪ್ರಧಾನ.

# ಪರಿವಿಡಿ

೧. ಗುರುವಿನ ಸಿರಿಪಾದಕೆ ಶರಣೆನ್ನಿರೊ - **ಶ್ರೀ ಬುದ್ಯಾ ಗುಣನಾಯ್ಕ,** ಅರಗಾ ತಾ: ಕಾರವಾರ ..............................17
೨. ವಂದು ನವಿಲಿಂದು ಕೋಲೇ - **ಶ್ರೀ ಬುದ್ಯಾ ಗುಣ ನಾಯ್ಕ,** ಅರಗಾ ತಾ: ಕಾರವಾರ ............................. 18
೩. ವಲೊಲ್ಲೆ ಕೇದಿಗೆ - **ಹುಲಿಯಾ ಗೌಡ,** ಕೂಡ್ಲೆ ತಾ || ಕುಮಟಾ.......... 18
೪. ನಮೋ ನಮೋ.............................................................................................. 19
೫. ಪರಮೇಶ್ವರಗೆ ವಲವಾದೋ(ಕೋಲಾಟ) - **ಕುಪ್ಪ ಮಾರುಗೌಡ,** ಕೂಜಳ್ಳಿ....................... 19
೬. ತಂದಾನ ತೈದಾನೋ - **ಕುಪ್ಪ ಮಾರುಗೌಡ, ಕೂಜಳ್ಳಿ** ...................... 21
೭. ಯೇ ಬಸವಾ ಬಸವನಂದಿರೇ.........................................................................22
೮. ಹರವಣ ಗುರುವಣ ಬಲಗೊಂಬೆ - **ನಾಗಪ್ಪ ಶಿವಪ್ಪ ಗೌಡ,** ತಲಗೊಡು.................23
೯. ದೇವತೆಗಳ ಕೋಲಾಟ ..................................................................................26
೧೦. ಸುಗ್ಗಿ ಪದ - ಜಾಗಡಿ ಪದ - **ಶ್ರೀ ಮಂಜು ಬಡವ ನಾಯ್ಕ,** ಹೊನ್ನಾಕುಳಿ .......30
೧೧. ತಂದಾನೋ (ಸುಗ್ಗಿ ಆಲಾಪ) (ಮೃದಂಗ ಹೊಡೆಯುವ ಆಲಾಪ)........................................32
೧೨. ಕೋಟೆ ಸುತ್ತಿನ ಮೇನೆ (ಆಲಾಪ) ..........................................................................34
೧೩. ಸುಗ್ಗಿ ಹಬ್ಬದಲ್ಲಿ ಗೆಂಡೆಕೋಲು ಕಡ್ಕ ಬರುದು...............................................................35
೧೪. ಸುಗ್ಗಿ ತಳನಲ್ಲಿ ಪದ (ದುಮಸೋಲಣ್ಣಿರಾ) - **ಸಣಕೂಸ ಉಪ್ಪಾರ,** ಹಳದಿಪುರ....................35
೧೫. ಹಿಮದ ಗಾಳಿ ಬೀಸುವಾಗ ಕೋಲೇ (ಸುಗ್ಗಿ ಕಟ್ಟಿಕೊಂಡು ಹೋದ ಕೂಡಲೆ ಹೇಳುವುದು) - **ಶ್ರೀ ನಾರಾಯಣ ಗೌಡ ಕಲವೇ** ....................36
೧೬. ಹೋಯ್ಲು............................................................................................. 41
೧೭. ಅಡ್ಡಗೊಂಡ ಪದ (ಸ್ವಾಮೇರಾ ಬೂಮಿಗೊಂದು ನೆನೆಯೋ) ............................................. 42
೧೮. ಸುಗ್ಗಿ ನಿಂತ ಮೇಲೆ ಹೇಳುವ ಪದ (ಅಂಗಳವಾರ ಆರತಿಯಾಗ್ಲಿ)...................................... 42
೧೯. ಪಾಂಡರೂ ಕಡನ ಹೊಡೆದಾರೇ...........................................................................43
೨೦. ಶಿವರಾತ್ರಿ ದಿನದಲ್ಲಿ (ಸುಗ್ಗಿ ಕೋಲಾಟದ ಪದ) - **ದೇವುಕುಪ್ಪ ಗೌಡ,** ನೆಲ್ಲೆಕೇರಿ, ಮೂರೂರು ........43
೨೧. ಕಾರಿಕಾಯ ಕಡಜಲ ಕಾಯಾ ........................................................................ 44
೨೨. ತಾನಾನಾ ತಂದ್ರನಾನಾ (ಕೆರ್ಯಾ ಯೇರಿಯ ಮೇನೇ) - **ಸೌ. ನಾಗಮ್ಮ ಮಾಸ್ತಿ ನಾಯ್ಕ,** ಹೆಗಡೆಲೂರು ...45
೨೩. ಗುಡಿಯಾ ಸೃಂಗಾರ ಮಾಡಿದಾ - **ಲಕ್ಷ್ಮಣ ರಾಮ ನಾಯ್ಕ,** **ಮಾಬ್ಲೇಶ್ವರ ಕರಿಯಾ ನಾಯ್ಕ,** ಮೆಣಸಿ.......... 49

೧೪. ಮದುವೆಗೆ ಶೃಂಗಾರ ಗೈದ (ಕೋಲಾಟದ ಪದ)
- **ದೇವು ನಾಗು ಗುನಗ,** ಅಡಲೂರು .................50
೧೫. ಕಟ್ಟಿದ ಕಾಲೀ ಆಣೀ ಪರದಾಣೀ ಕೋಲೇ 52
೧೬. ಕೋಲೇಂಬುದ ಮೇಲೆನ್ನಿರೇ - **ದೇವು ನಾಗು ಗುನಗ** (ಗೌಡ), ಆಡಲೂರು........53
೧೭. ವೈನಾಸಿ ಕೋಲೇ - **ಅಪ್ಪು ನಾರಾಯಣ ಹರಕಂತ,** ಹೊಲನಗದ್ದೆ......54
೧೮. ಕೋಲಣ್ಣಾ ಸಂಪಿಗೀಯಾ - **ಜಟ್ಟಪ್ಪ ಗೋಯ್ದಪ್ಪ ನಾಯ್ಕ,** ತೇಗಿನಮಕ್ಕಿ, **ಉಮೇಶ ಹೊನ್ನುಪಟಗಾರ**.........................55
೧೯. ಕೋಲು ಪದ (ವರಾ ಬೇಡ್ಯ್ಯಲಾ ದಾರವಾಡಿ)........................................56
೨೦. ಮತಿಯ ಪಾಲಿಸು - **ತುಂಬಳ್ಳಿ ಮೋಹನ ನಾಗು ಗೌಡ**..................56
೨೧. ಸುತ್ತ ಗೋಟು ಪದ (ಜನನಿ ನಿನ್ನ ಸ್ಮರಣೆಯನ್ನು).........................................................57
೨೨. ಹೊಕ್ಕ ಕೋಲ ಪದ (ತವರು ನೋಡಲ ನಾ ಬಂದೇ)
- **ಗಣಪ ಸುಬ್ಬಗೌಡ**.................................. 57
೨೩. ಕಂಡಿ ಕೋಲು (೧) (ದೇವರ ಕಾನಲ್ಲಿ) .........................................................................58
೨೪. ಕಂಡಿ ಕೋಲು (೨) (ಆಡೀ ಮಂಗಲವೇ) - **ಗಣಪ ಸುಬ್ಬಗೌಡ,** ಕರೆವಕ್ಲ, ಜಡ್ಡಿಗೆದ್ದೆ ತಾ: ಶಿರಸಿ (ಉ.ಕ.).............59
೨೫. ತೇರ ಕೋಲು (ಆಕಳು ಕಂಡಿರೇನೊಂದ) - **ಮೋಹನ ನಾಗುಗೌಡ**............................. 60
೨೬. ತೇರು ಕೋಲು (ಎತ್ತು ಕಾಯೋ ತಮ್ಮ) - **ಮೋಹನ ನಾಗುಗೌಡ,** ಮಂಜುಗುಣಿ ............. 60
೨೭. ಹೆಡಗಿ ಕೋಲು (ಸಾಲಕ್ಕೆ ಕೊನೆಯಿಲ್ಲ) - **ಗಣಪ ಗೌಡ**.......................................... 61
೨೮. ಇಂಗಲೀಸು - **ಮೋಹನ ನಾಗುಗೌಡ,** ಮಂಜುಗುಣಿ ..............62
೨೯. ಕಂಡೀ ಕೋಲು (೩) (ಇಂದಿನ ಪುರವದಲ್ಲಿ) - **ಊರಬೈಲು ನಾಗು ತಿಮ್ಮಗೌಡಾ** .................62
೩೦. ಬಿದುರೇ ನೀನ್ಯಾರೀಗೊಲಿಯುವಳೇ - **ಗಣಪ ಸುಬ್ಬಗೌಡ,** ಮೊಳೇಸಾಲು .................63
೩೧. ಮಲಕಿನ ಕೋಲು (ಒಬ್ಬರ ಬೇರೊಬ್ಬ ಸುತ್ತುದು)
- **ಗಣಪ ಸುಬ್ಬಗೌಡ,** ಮೊಳೇಸಾಲು................ 64
೩೨. ಹೊಕ್ಕ ಕೋಲು (ಕಾಗಲ್ಲೂ ಕರಿಗಲ್ಲೂ) - **ಗಣಪ ಸುಬ್ಬಗೌಡ,** ಮೊಳೇಸಾಲು ................ 64
೩೩. ಕೋಲೂ ಸಿಂಗಾರಾಡುವಾ (ಕೋಲುಪದ).....................................................................65
೩೪. ಕೋಲು ಕೋಲೇ ಕೋಲೆನ್ನ ಕೋಲೇ - **ಬುದ್ದು ಗೌಡ,** ಬಿಣಗಾ ................................65
೩೫. ಶಿರಿಯ ರಾಮರಾಡೂ ಕೋಲೇಲೋ ದ್ಯೇವರೇ
- **ಬುದ್ದು ಗೌಡ,** ಬಿಣಗಾ ................................66
೩೬. ಕೋಲು ಕೋಲೆನ್ನ ಕೋಲೇ (ಅತ್ತೆ ಹೆಸ್ರು ಹರ್ಕು ಚಾಪೆ)
- **ದಿ. ಪರಮೇಶ್ವರಿ ತಂದೆ ಯಂಕಣ್ಣ ಅಂಬಿಗ**........ 67
೩೭. ಬಾರೇ ಬಾರೇ ನನ್ನವಳೇ - **ದಿ. ಸಣಕೂಸ ಆಗೇರ** ..............................68
೩೮. ಕೋಲಾಟದ ತುಂಡು ಪದಗಳು (೧) (ಹೂಂಗಾ ತರೋ ಮಲ್ಲಗೀರಣ್ಣಾ) ...............................68

೪೯. ಕೋಲು ಪದ (ಬೆಂಕಿಗೆ ಬಂದ)...70
೫೦. ಗಿಡ್ಡೀ ಗಿಡ್ಡೀ ವಳಗ್ಯೇನ್ ಮಾಡ್ತೀ ...70
೫೧. ಕೋಲಾಟದ ತುಂಡು ಪದಗಳು (ಚಿತ್ತಾರ ಬೊಂಬೆ)
- **ತಿಮ್ಮು ಮಾರಿನಾಯ್ಕ,** ತಾರಿಬಾಗಿಲ, ಹೆಗಡೆ ಊರು ...71
೫೨. ಕೋಲಾಟದ ತುಂಡು ಪದಗಳು (ಕೊಳೂಲಾಟ ಕೊಳೂಲಾಟ) ...72
೫೩. ಸುಳಿದೊಡೆದು ಹುಳಿದೊಡೆದು ದಿಟ್ಟಿ ...72
೫೪. ಕತೆಹೇಳ್ ಕತೆಹೇಳ್ ಯತ್ ಹಿಡಿತು...73
೫೫. ಕರೆಯಾಲೇನೇ?...73
೫೬. ಆವಾಗೆ ತೀರ್ಸುನೋ...74
೫೭. ಕೋಲು ಮೇಲೆನ್ನಿರೇ...74
೫೮. ಚಂದ್ರ ಮೊಕಿ ಮಲ್ಲಿಗೆ ...75
೫೯. ಅಲಪ (ಆಲಾಪ) (ಶ್ವಾಮಿಯ ನೆನದೇನೋ)...75
೬೦. ಗದ್ಯ (ಯೆಲಾ ಯೆಲಾ ವಂದೊಂದ) ... 76
೬೧. ಕೋಲಾಟದ ಪದಗಳು (ಕಂದ ನಂದನೋ) **- ತೊಲಶು ಹಮ್ಮು ಗೌಡ,** ಉಂಚಗಿ ...76
೬೨. ನಿನ್ನ ಹಾಲು ಬಲು ರುಚಿ - **ದಿ. ಗೊಯ್ದು ಕಣಿಯಾ ಮುಕ್ರಿ,** ಬಗ್ಗೋಣ ... 77
೬೩. ಸಣ್ಣ ನಾಮದ ಹುಡಗಾ - **ದಿ. ನಾಗಿ ಮುಕ್ರಿ,** ಹೊನಗದ್ದೆ ... 77
೬೪. ಸುಗ್ಗಿ ಪದಗಳು: ತುಂಡು ಪದಗಳು (ಹೋಗತಿರಲೋ ಬಲಿಗಾರಣ್ಣಾ)...78
೬೫. ಕೋಲು ಪದ (ಕೆಮ್ಮಣ್ಣ ಗುಡ್ಡಕೇ) ...79
೬೬. ನವಲ ಕಂಡೀರಾ ನವಲ ...79
೬೭. ಬಳ್ಳೋಳ್ಳಿ...80
೬೮. ಸಿದ್ದಾರೋಡಿ ಸದ್ಗುರು...80
೬೯. ಈ ಹೂವಿನ ಕೋಲೇ ... 81
೭೦. ಹೊಡಿಬ್ಯಾಡಾ ಗಂಡಪ್ಪಾ - **ಸುಬ್ಬಾ ಗೌಡ** ...82
೭೧. ಹೂವಿನಂತಾ ತೇರು ... 84
೭೨. ಪದ ಬೇಟೆ (ಪಾಲು ಮಕ್ಕಲನೆ ಕರ್ದಾನೋ)... 84
೭೩. ಕೋಲು ಪದ (ಹುಡುಗ ಬಂದಾ ದಾರೀಗೇ)...85
೭೪. ಹಾಲಕ್ಕಿ ಗೌಡರಿಗೆ ಕೊಡಬೇಕು - **ಯಂಕಟ ರಾಮಕೃಷ್ಣ ಗೌಡ,**
ಕಲ್ಕೋಡು, ಹೆಗಡೆ ಊರು ...86
೭೫. ಗೊಲ್ಲರ ಹುಡುಗ - **ಥಾಕು ದೇವು ನಾಯ್ಕ,**
ಅರಗಾ ತಾಲೂಕು, ಕಾರವಾರ ...87
೭೬. ಗೋವಿಂದ ರಾಯಾ ಲಂಬೋನೂ ...89
೭೭. ರಂಗನ ಕಿನ್ನುರಿ ... 91

೭೮. ನಿಲ್ಲು ನಿಲ್ಲಯ್ಯ ರಾಜ ......................................................................92
೭೯. ಪಟ್ಟಣಶೆಟ್ಟಿ ಪಟ್ಟಣದಲ್ಲಿ - **ಸಣ್ಣತಮ್ಮ ತಮ್ಮಣ ಗುನಗ,**
ಹೊನ್ನಳ್ಳಿ, ಹೆಗ್ಗಾರ ಮಕ್ಕಿ ..............................92
೮೦. ತನ ಬಾವ ತನ ಗುರುತಾ ಹಿಡಿದಾನೆಯಾ
- **ಗೊಂಡ** ...............................................93
೮೧. ದುಃಖ ಮಾಡ್ಯಾಳೆ ಗೌರೀ - **ತೊಳಶು ನಾಗು ಗುನಗ,**
ಅಡಲೂರು ತಾಲೂಕು: ಅಂಕೋಲಾ.............. 94
೮೨. ಹೆಣ್ಣೀಗೆ ಹೆಣ್ಣಾಗಿ ನಿತ್ತಳಂತೆ ....................................................................95
೮೩. ಕೋಲೆಂಬೂ ಗೀಜಗನೇ - **ಶಿವಿ ಜೆಟ್ಟಿ ಮುಕ್ರಿ,** ಹೊಲನಗದ್ದೆ ...................96
೮೪. ಬಣ್ಣದಾ ಹಕ್ಕಿಯೇ..........................................................................................98
೮೫. ಬಾರೇ ಗೀಜಗತೀ - **ಧಾಕು ನಾಯ್ಕ,** ಅರಗಾ ...........................99
೮೬. ಆಹಾ! ಯಂತಾ ಶುಂದರಿ! .............................................................................100
೮೭. ಮೋಟಾರಿನ ಆಕೃತಿಯ ರಚನೆ ಮಾಡಿ ತಂದು ಹೇಳುವ ಪದ.................................. 101
೮೮. ಗಂಡನಿಲ್ಲದ ಗರತಿ - **ಕುಟ್ಣಪ್ಪ ಹಾಣಿ ಗೌಡ,** ವಂದೂರು .................. 101
೮೯. ಕೋಲೂ ಮೇಲಾಟ (ಮುದ್ಕರ ಕೋಲಾಡೀ)
- **ಕರಿಯಮ್ಮ ರಾಮಕೃಷ್ಣಗೌಡ,**
ಕಲ್ಕೋಡು, ಹೆಗಡೆ ಊರು ......................... 102
೯೦. ಸುಗ್ಗಿ ಕುಣಿತ - **ದಿ. ದೇವಿ ಮಾರು ಗೌಡ,** ಕಲ್ಕೋಡು............. 102
೯೧. ತಳವಾರ ಹುಡುಗಿ - **ಪುಟ್ಟು ಪುಟ್ಟ ಗೌಡ,** ಬಂಗಣೆ ಊರು............. 108
೯೨. ಸ್ವಾಮಿ ಶಂಕರನಾ ನೆನೆದೇವೂ (ಅಡ್ಡ ಗುಣತದ ಪಡ)
- **ಕುಪ್ಪ ಬೇಡು ಗೌಡ,** ಕಲವೇ...................... 109
೯೩. ಸುತ್ತುಗೋಲೂ (ಸರುಣೆಂದೆ ಸಿವನೀಗೂ) - **ಗಣಪ ಸುಬ್ಬಗೌಡ,** ಮೊಳೇಸಾಲು ................ 110
೯೪. ಬಂಗಾರದ ಎಲೆ ಮೇಲೆ ಸಿರಿ ಬರಲಿ - **ದಿಂಬೆ ಕುಪ್ಪ ಗೌಡ ಮತ್ತು**
**ಕುಪ್ಪ ಮಾಟುಗೌಡ,** ಕೂಜಳ್ಳಿ........................111
೯೫. ರನ್ನದಾ ಕೋಲು ಕೋಲಣ್ಣಾ - **ದಿ. ಸಣಕೂಸ ಅಗೇರ** ............................. 112
೯೬. ರಣ್ಣದಾ ಕೋಲು ಮೇಲೆಣಿರೋ ............................................................. 113
೯೭. ಸುತ್ತುಮುತ್ತು ಸೂರಣ ಕಟ್ಟೆ .......................................................................114
೯೮. ಕತೆ ಕತೆ ಕಾರಣವೋ.. ...........................................................114

- **ಕೋಡಿಗದ್ದೆ ಕುವರಿ ಮರಾಟಿಗಳು,** ಕೋಡಿಗದ್ದೆ ಶ್ರೀ ರಾಮಭಟ್ಟರ ಸಂಗಡ ಅವರ ಕೇರಿಗೆ ಹೋಗಿ ಬರೆದು ಕೊಂಡಿದ್ದು. ೯೬, ೯೭, ೯೮ ಮೂರನ್ನೂ ಹೇಳಿದ್ದಾರೆ.

# ೧. ಗುರುವಿನ ಸಿರಿಪಾದಕೆ ಶರಣೆನ್ನಿರೊ

ಜೈ ತನ್ನನ್ನೇ ತಂದಾನೋ ತಾನೋ ತಂದಾನೋ ತಂದಾನಲೋ
ತಂದಾನೋ ತಂದಾನೋ ದೇವರ ತಂದೋ ನಾನು
ಗುರುವೇ ಗುರುವೇ ಮತ್ತೆ ಗುರುಪಾದ ಯೆಣ್ಣುವೋ
ಗುರುನ ಸಿರಪಾದಕೆ ಶರಣೆನ್ನಿರೋ ॥ ೧ ॥
ಹಾಲುಂಡ ಹ್ಯಾಲುಂಡ ಬೇಡುಂದು ದೇವಳ್ಳಿಗನೋ
ದೇವರ ವಳ್ಳೇದು ನಮ್ಮ ಸಿದುರಾಮಾ
ದೇವರ ವಳ್ಳೇದು ನಮ್ಮ ಸಿದುರಾಮಾ ವಡೆಯನ ಪೂಜೇಲೋ
ಪೂಜೇಲೇ ವಳ್ಳೀದ ನಮ್ಮ ಗಣಪಾನೋ ॥ ೨ ॥
ಅಣ್ಣಯ್ಯನ ಕುದರಿಗೆ ಹಸರವ ಹಲ್ಯಾನೋ
ಸಿದುರಾಮ ವಡಿಯರ ಬಡಿಪಾದ
ಏ ಕುಳ್ಳಾ ಅಂದರೆ ಭೂಮಿಯಲ್ಲಿ ಹಾರವ ಇಂದರೆ ಗಿಡವೂಲ್ಲ ॥ ೩ ॥
ನೀ ಕೇಳೇ ಗರುಡ ಪಕ್ಷ ನೀ ಕೇಳೆ ಗರುಡ
ಮೂರೆಂಬ ಮೊಟ್ಟೆವನು ಹಾಕಬರುರೊ
ಏ ಈಸ್ವರ ವೇನು ಮಾಡ್ಯ ಈಸ್ವರ ಲೇನು ಮಾಡ್ಯಾ? ॥ ೪ ॥
ವಂದು ಮೊಟ್ಟೆ ತೆಗದಿ ವಡೂದಾನ ಕೋಲೇ
ಭೂಮಿ ಮಂಡಲವನ್ನು ಪಡುದಾನ ಕೋಲೇ
ಏ ಈಸ್ವರ ಲೇನು ಮಾಡ್ಯ ಈಸ್ವರ ಲೇನು ಮಾಡ್ಯಾ ॥ ೫ ॥
ಸುತ್ತೇಳು ಸಮುದಿರ ಪಡುದಾನ ಈಸ್ವರ ದೇವ
ಮಾರನ ಮೇಟವನ ಪಡುದಾನ ಕೋಲೇ ಈಸ್ವರ ದೇವಾ
ಈಸೂರ ದೇವೇನು ಮಾಡ್ಯ ಈಸೂರ ದೇವೇನು ಮಾಡ್ಯ ॥ ೬ ॥
ಬಸವೇಸರಗಾದರೆ ಪಡುದಾನು ಕೋಲೆ
ನಿನಗಿನ್ನು ದೊಡ್ಡವ್ನ ಯಾರೂ ಯೆಲ್ಲಾದೆ ನೀನು
ನೀನೇ ಸಿವನಾ ದೊಡ್ಡವ ಕೋಲು ॥ ೭ ॥

ಹೇಳಿದವರು: ಶ್ರೀ ಬುದ್ಯಾ ಗುಣನಾಯ್ಕ, ಅರಗಾ ತಾ: ಕಾರವಾರ

# ೨. ವಂದು ನವಿಲಿಂದು ಕೋಲೇ

ಶಿವ ಕೋಲೆನ್ನ ಗಂಗಿಗೆ ಶಿವ ಕೋಲೆನ್ನ ಗೌರಿಗೇ
ಶಿವ ಕೋಲೋ ಕಬ್ಬಿಣದ ಬಸವಗೆಯ್ಯಾ ಕೋಲೇ ‖ ೧ ‖
ವಂದು ಮುದಿನಾ ಮರದಲ್ಲಿ ಬಂದೀತು ಸುಮಗಳು
ವಂದು ಮೊಕಿನಾ ಮಾರಾಟ ಮಾರಾಟ ಕೋಲೇ ‖ ೨ ‖
ಶಿವ ಕೋಲೇನ್ನ ಗಂಗಿಗೇ ಶಿವ ಕೋಲೇನ್ನ ಗವರಿಗೆ
ವಳ್ಳೆ ಬೆನ್ನಂತ ನೋಗೆ ವಂದು ನವಲಿಂದ ಕೋಲೇ ‖ ೩ ‖

ಹೇಳಿದವರು: **ಶ್ರೀ ಬುದ್ಯಾ ಗುಣ ನಾಯ್ಕ**, ಅರಗಾ ತಾ: ಕಾರವಾರ

❖

# ೩. ವಲೊಲ್ಲೆ ಕೇದಿಗೆ

ವಲ್ಲೊಲ್ಲೆ ಕೇದಿಗೇ ವಲ್ಲೆ ಮೇನೆ ಮೂಡಿತು
ಯೆಲ್ಲಿ ನೋಡಿದ್ರೇ ಪರಿಮಾಲಾ | ಮಾಲೆ ಕೇದಿ ಹೂವಾ
ನೋಡಿ ಬಾರೆ ನಮ್ಮ ತುರವೀಗೆ
ವಲ್ಲೊಲ್ಲೆ ಮಲ್ಲುಗೀ ವಲ್ಲೆ ಮೇಳೆ ಮೂಡಿತು
ಯೆಲ್ಲಿ ನೋಡಿದ್ರೇ ಪರಿಮಾಲಾ
ಪರಿಮಾಲ ಮಲ್ಲಿ ಹೂವಾ
ವೊಡಿ ಬಾರೆ ನಮ್ಮ ತುರವೀಗೆ ‖

ಹೇಳಿದವರು: **ಹುಲಿಯಾ ಗೌಡ,** ಕೂಡ್ಲೆ ತಾ ‖ ಕುಮಟಾ (೦೨.೧೧.೧೯೭೭)

❖

# ೪. ನಮೋ ನಮೋ

ವಿಷ್ಣು ಭಕ್ತರಿಗೆಲ್ಲ ಸಲಹಬೇಕೆನ್ನುತಾ
ಮುದ್ರೇಯ ಮಾಡೀದಾ ಮಾತ್ಮರಾ ॥ ಸ್ವಾಮೀ
ಕಲಿಯುಗದಲ್ಲೀ ಕಾಸೇಯ ಧರಿಸಿದ
ರಾಮನೆಂಬಾ ದೂತಗೆ ಸರುಣಂಬೇ ॥ ೧ ॥
ಕಾಮನ್ನ ಚರಿತ್ರವ ಚಂದಾಗಿ ವಬಲಿಸೀ
ಸಂತೋಸ ಹೊಂದುವಾ । ಸರ್ವದಾ । ಸರ್ವದಾ
ಯತಿರುಕ್ಕ ಸಮನವ ಮಾಡುವಗೋಸ್ಕರ
ಪ್ರದ್ಯುಮ್ನನವತಾರ ಮಾಡಿದಾ । ಕಾಮ ॥ ೨ ॥
ಜಾನೀನೀ ಜಾನೀಸಿ ವಾರಂಬ ದಿನದಲ್ಲೀ
ತಾಳ ಗೊಮ್ಮಟಿಗಾ ಕುಣಿಸಾಡು ಕೋಲೇ
ಗಜಮೂಕನಾ ನಿನ್ನ ಪಾದಾವ ಬಜಿಸುವೆ
ತ್ರಿಜಗವಂದಿತನಾ ಕೊಡು ಮತಿಯಾ ॥ ೩ ॥
ಉತ್ತುಮ ಹೆಗಡೆಯ ಸ್ತಿರವಾಗಿ ನೆಲಸಿದ
ಶ್ರೀ ಶಾಂತಿಕಾಂಬಾ ನಮೋ ನಮೋ ॥ ೪ ॥

❖

# ೫. ಪರಮೇಶ್ವರಗೆ ವಲವಾದೋ (ಕೋಲಾಟ)

ಶಿವನೇ ನೆನೆಯೋ ಶಿವನೇ ನೆನೆಯೋ
ಈ ಊರಾ ರಾಮದೇವರ ನೆನೆಯೋ
ಈ ಊರ ಹಿತ ಕಾಯೋರ ನೆನೆಯೋ
ಕಾಲಿಗೆ ಕಿರುಗೆಜ್ಜೆ ಕಟ್ಟಿ ಹೂವಿನಂತಾ ತೇರಕಟ್ಟಿ
ತೇರೋ ತೇರೋ ಹೂವಿನ ತೇರೋ ॥ ೧ ॥

ಬಾಗಿಲಲೆ ಬಲಿಯಾರಿ ದಂಡು
ಮೇನೆ ಗುರಗುಂಜೀ ಶೆಂಡೂ
ನಾರೀ ಬಂದಾನೇ ನಲ್ಲಾ ಬಾಗಿಲ ಮುಂದೇ
ತಾನ ನಾನಾ ತಂದಾನೋ ತಾನೀನೋ ತಾನಾ ॥ ೧ ॥
ಕಾಲಿಗೆ ಕಿರುಗೆಜ್ಜೆ ಕಟ್ಟೀ ಹೂವಿನಂತಾ ತೇರಕಟ್ಟಿ
ಜನಾಮ್ನೆ ಶ್ವಾಮಿ ಭೂಮಿಗ್ಬೊಂದ ನೆನೆಯೋ
ಶಿವನೇ ನಿನಗ್ಯಾತರ ಗಂದನೋ ॥ ೩ ॥
ಊರ ಶುತ್ತೇಲಿ ಮುತ್ತೇಯೋ
ಪರುವತ ದೊಡ್ಡಾ ಗುಡ್ಡೆ ಹೋ
ಗುಡ್ಡೆ ವಂದು ತಲಿಯಾ ಮ್ಯಾಲಿನ್ನೇ
ನಾಕ ಮೂಲೆ ಕಾಕಾದಾ ಕೆರೆಯೋಲೇ ॥ ೪ ॥
ಕೆರವಲಗೆ ನೀರಿನಾ ಮಘನಾನೋ
ಆವಾ ನೀರಿನೋಳಗೆ ಯಾತರ ಮುಗುಲಂದೋ
ನೆಲ್ಲೀದೊಂದು ತಾಂಬಾರ ಹುಟ್ಟೀಲೇ ॥ ೫ ॥
ಅವಾ ಹೂಗಿಗೊಂದ್ ಯಾತರ ಕದುರಾದೋ
ತಾಂಬಕೊಲ್ಲಿದು ನೆಲ್ಲಿಯು ಹುಟ್ಟೇಗೆ
ಯಾವದೊಂದು ತಾಂಬಾರ ಹುಟ್ಟೀಲೇ
ಅವಾ ಹುಟ್ಟಿಗೆ ಯಂತಾ ಯೆಶುಲಾದೋ ॥ ೬ ॥
ಯಂಟೂ ದಿಕ್ಕೇ ಯಂಟೇಲೆಯೇ
ನೆಡುಗೊಂದು ಶಿನ್ನಾದಾ ಕದುರಾಗೋ
ಅವಾ ಕದ್ರು ಯರೀಸಿ ವಲುಪ್ಯಾದೋ
ಪರಮತ ಪರಮೇಸ್ರುಗೆ ವಲುವಾದೋ ॥ ೭ ॥

ಹೇಳಿದವರು : **ಕುಪ್ಪು ಮಾರು ಗೌಡ,** ಕೂಜಳ್ಳಿ

❖

# ೬. ತಂದಾನ ತೈದಾನೋ

ತಾನನಂದ್ರ ನಾನೋ ತಾನತಂದ್ರ ನಾನೋ
ತಂದಾನ ತೈದಾನೋ ತಾನಾನಾ ‖ ೧ ‖
ಶ್ವಾಮಿ ಇಂದ್ರ ಮೇನೋ ಭೂಮಿಯ ನೆನೆದಾನೋ
ಶ್ವಾಮಿ ಶಂಕರನಾ ನೆನೆವೇನೋ ‖ ೨ ‖
ಶ್ವಾಮಿ ಶಂಕರನಾ ನೆನವ ಗುಂಬಳತಾಯೇ ಭೂಮಿ
ಬಲ್ಲವರೇ ಹಾಡಾ ತೊಡಗಿರುವಾ ‖ ೩ ‖
ಬಲ್ಲವ್ರ ಹೇಳಿದ ಹಾಡೂ ಬಣ್ಣನೆ ವರಮುಂದಾ
ಯೆಣ್ಣೇಶೀ ಕೇಳಿ ಜನರೆಲ್ಲಾ
ಯೆಣ್ಣೇಶೀ ಕೇಳಿ ಜನ್ರರೆಪೊಗ್ದೆ ಹೂಡೀ ‖ ೪ ‖
ಜನ್ರ ಕಟ್ಟಿರೂ ಯರ್ಡು ಯೆತ್ತಾ
ಯರಡ ಯೆತ್ತಿನ ಮೇಲೇ ಹೇರಿ ಬರುತದೇ ಬೆಲಿಯಲೇ ‖ ೫ ‖
ಹೇರಿ ಬರುತದೇ ಬೆಲಿಯಲ್ ಗೋಕನ ಶೂಲೆರೇ
ದುಡ್ಡಿಗೆ ವಂದು ವೀಲೆ ಮೆಲುವಾರೇ? ಮೆಲ್ಡೂಕ್ ಗೋಕನ ಶೂಲೇರೂ
ತಾಶಿಗ್ವೊಂದು ಪತ್ರಾ ಬರೆವೋರೂ... ಬರೆವೋರೊ ‖ ೬ ‖
ಗಾಲಲೀ ಮೊಲ್ಯೇ ಬೆಲೆವೋಲೇ... ಬೆಲವರೆ ಗೊಕನ್ ಶೂಲೆರೂ
ತೋಲೇ ಗಾಲೀ ಬೀಶೂವೋರೇ ‖ ೭ ‖

ಹೇಳಿದವರು: **ಕುಪ್ಪ ಮಾರುಗೌಡ,** ಕೂಜಳ್ಳಿ, ೫೫ ವರ್ಷ, ೧/೩/೭೭.

❖

# ೭. ಯೇ ಬಸವಾ ಬಸವನಂದಿರೇ

ಯೇ ಬಸವಾ ಬಸವನಂದಿರೇ ಬಸವನ
ಪಾದಕೆ ಸರಣನ್ನಿರೇ
ಮೇಲೆ ಮುತ್ತಿನ ಸರಿ (ರ) ಯೋ (ವೋ) ಅದು ನಮ್ಮ
ಕಡಲೇ ಪಾಂಡ್ಯದ ಬಸುವಾ ॥ ೧ ॥
ಯೇ ಕರಿಯ ಕೋಲು ಕದ್ದವನೇ ಜಾಣಾ
ಸುಗ್ಗಿಯ ಕೋಲ್ ಶಿವ ಭಕ್ತರಾಡೂ ಕೋಲೇ
ಹೂವಿನಾ ಕೋಲು ಹುಡಗರಾಡ್ವಾ ಕೋಲು
ರನ್ನದೂ ಕೋಲು ಶಣ್ಣ ಮಕ್ಕಳಾಡು ಕೋಲೂ ॥ ೨ ॥
ಅತ್ತೆ ಮನೆ ಬಾಗ್ಲಿಗೇ ಮುತ್ತೀನ ಬಾಚಿಂಗ
ಮುತ್ತು ವಂದು ಲಾಡೂ ಬಿಣಾ ಬಿಣಾ
ಬಾಗ್ಲಲ್ಲಿದ್ದಾ ಮುದ್ಕೀ ಯೇನ ನೋಡ್ತೇ
ಯೇನಲ್ಲೊ ಮೊಮ್ಮಗ್ನೆ ಕೋಲ್ ನೋಡ್ತೇ ॥ ೩ ॥
ಏ ಮೂಗಾಳಿ ಬಿನ ಬಿನ ಶೋಬಾಲೇ ತನ
ತನ ಸೋಬಿಗಾಲೇ ರಣದೊಳು ಬಿಣಾ ಬಿಣಾ ॥ ೪ ॥
ಕೋಲೂ ಕೋಲಾಟಾ ಮೇಲೇ ತೆಂಗಿನ ತೋಟಾ
ನಾರೀ ನಿನ್ನಾಟಾ ಪಡುಪಾಟಾ ॥ ೫ ॥
ಹಣಿ ಬಡ್ಗಿ ಕಾಯ್ ಬಡ್ಗಿ ವಂದೂ ಬಿಡಬೇಡೀ
ದೇವ ವಡ್ಯಾ ದೇವ್ರ ವಡತೀ ನಮ್ನೀ ನೋಡತ್ರೂ ॥ ೬ ॥

❖

# ೮. ಹರವಣ ಗುರುವಣ ಬಲಗೊಂಬೆ

(ಶುಗ್ಗಿ ಕಟ್ಟೇಲಿ ಸುಗ್ಗಿ ಯೇಳಿಸುವಾಗ, ಮುಗಿಸುವಾಗ ಹೇಳೊ ಪದ)

ಹರವಣ ಗುರುವಣ ಬಲಗೊಂಬೆ
ಗುರವಣ ಗುರಪಾದಕೆ ಸರಣು ‖ ೧ ‖
ನನಮುನಗಮು ಮಾನೋಗೆಲ್ಲಾ
ನಂದಾಸೇತಿ ಪುಣ್ಣಿದಿಂದ ‖ ೨ ‖
ಹುಟ್ಟಪಾಪ ಪರಿಹಾರಂದ
ಸಲವನ ದೇವನೆ ಸಿಲವನಗೊಂಬ ‖ ೩ ‖
ಸಾರಂದೇವ್ರು ಕಾರನದಿಂದ
ಬಂದಾನಾಯ್ಕೆನ ಕಾರನದಿಂದ ‖ ೪ ‖
ಚೆನ ಮೆನ ನನ ಮೇನ್ ಉಂಡ್ಲೆ ಕೋಳು
ಶಿವೂರ ಮಗಬೇನ್ ಕೊಳಬೈನಂದಾ ‖ ೫ ‖
ನಂದಾಸೀತಿ ಪುಣ್ನಾದಿಂದಾ
ಹುಟ್ಡ ಪಾಪ ಪರಿಹಾರೆಂದ ‖ ೬ ‖
ಕೋಳೊಂದೆರಡು ಕಡದೀ ತಂದೀ
ಹಾಸರಬೀಸರ ಕೆಲ್ಗೆ ಕೋಲುಲ್ ಹೊಯ್ದಾರೆ ‖ ೭ ‖
ಪಾಂಡವ್ರ ಮಕಲು ಕುಂಚವೊಲ್ಯೆ
ನಾರಂದೇವ್ರ ಕಾರಣದಿಂದಾ ‖ ೮ ‖
ಬಂದಾನಾಯ್ಕನ ಕಾರಣದಿಂದಾ
ಚೆನ ಮನ ನನ ಮೇನ್ ಉಂಡ್ಲೆ ಕೋಳು ‖ ೯ ‖
ದೇವದೇವರೂ ಹರಗಿರ ಕೋಳು
ನಂದಾಸೀತೆ ಪುಣ್ಯದಿಂದಾ ‖ ೧೦ ‖

ಹುಟ್ದಾ ಪಾಪ ಪರಿಹಾರಂದಾ
ಶೀತಾರಾಮನ ಪುಣ್ಯಾದಿಂದಾ ‖ ೧೧ ‖
ಹಾಸರಬೀಸರ ಗಿರಿಯಲ್ ಕಟ್ಟಿ
ಹುಟ್ದಲ್ ಮೆಟ್ದಲ್ ಸರ್ಪನ ಬಾನ ‖ ೧೨ ‖
ಯೆತ್ತರ ಸತ್ತರ ಕಾಕೀ ನಿನ್ನಾ
ಕಾಕೀ ನಂದಾ ನಾಡನಂದಾ ‖ ೧೩ ‖
ಬಾಡದ ಕಾಕೇ ಕಣಿಮನ ಕಪ್ಪು
ಹನಮಂತ ಹನ್ಮದ ರಕ್ಸಾನಂದ ‖ ೧೪ ‖
ಹೊಣ್ಣಾರ ಹನಮನ ತೇಮಾನಂದಾ
ವಂದಂಬ ಗೆರಿಯ ಬರದೇ ನಂದಾ ‖ ೧೫ ‖
ಗೆರಿಯ ದಾಟಿ ಹೋಗಬೇಡಂದಾ
ಯೆರಡಂಬ ಸೆರಿಯ ಬರದೇನಂದಾ ‖ ೧೬ ‖
ಮೂರಂಬ ಗೆರಿಯ ಬರದೇನಂದಾ
ಗೆರಿಯ ದಾಟಿ ಹೋಗಬೇಡಂದಾ ‖ ೧೭ ‖
ಯೆರಡಂಬ ಸೆರಿಯ ಬರದೇನಂದಾ
ಮೂರೆಂಬ ಗೆರಿಯ ಬರದೇನಂದಾ ‖ ೧೮ ‖
ಗೆರಿಯ ದಾಟಿ ಹೋಗಬೇಡಾಂದಾ
ಬೇವೋನಾಗಿ ಬಿದ್ರೊ ಬಾವಾ ‖ ೧೯ ‖
ಬಿಲಿಮನ ಬಿಲ್ಲಿಂದ ಹೊಡೆದಾ ನೋಡು
ಮಿಗನ ಬನಕೇ ಹೋದೋ ನೋಡೂ ‖ ೨೦ ‖
ವಂದೆಂಬ ಬಾನ್ದಲ್ ಹೊಡದ್ನೋ ನೋಡು
ಆ ಬಾನವಿಲಾ ಆಕಾಸ್ಕೆ ಹೋಯ್ತು ‖ ೨೧ ‖
ಮತ್ತೊಂದ್ ಬಾನಾ ಹೊಡ್ದಾ ನೋಡೂ
ಲಾ ಬಾನಾ ಪಾತಾಲ್ಕೆ ಹೋಯ್ತು ‖ ೨೨ ‖
ಮತ್ತಂದ ಬಾನಾ ಹೋಡ್ದಾ ನೋಡು
ಕೋಡ್ನ ಮರ್ಗಗಲು ಬಿದ್ದೋ ನೋಡು

ಪಕ್ಕರ ಪಕ್ಕರ ಆಮಟ್ಟಗಾರಗೆ
ಪಕ್ಕರ ಪಕ್ಕರ ಹರದೂ ಬಾಣಾ ॥ ೧೪ ॥
ಕಲ್ಲೂ ಹಾಂದಿಗಳು ಹಯದೋ ನೋಡು
ಹೊಣ್ಣಾರ ಹನ್ಮಂತ ತೇಮಾನಂದಾ ॥ ೧೫ ॥
ಕಲ್ಲದ ಕೈಕರ ಬಲವೆನಂದಾ
ಕಲ್ಲರ ಗುತ್ತಾ ಬಲ್ಲೇನಂದಾ ॥ ೧೬ ॥
ಊಸಡುಂಗ್ಲ ಕೈಲ್ ಕೊಟ್ಟ
ದರ್ಬೆವಳ ಮಂತ್ರನೆ ಕಂಡೀ
ಒಡ್ಲಕ್ಕೇ ಪಡ್ಲಕ್ಕೇನಂದಾ ॥ ೧೭ ॥
ಶೀತೇರಾಮರ ಪಾಳಗದಿಂದಾ
ಶೀತೇ ಕಟ್ಕಂಡ ಕಡಿಬೇಕಂದ ॥ ೧೮ ॥
ಹೇಲ ಸಂಗ್ರ ಮಾಡಬೇಕಂದಾ
ಕೋಜ ಬುತ್ತೀ ಕಟ್ಟೆನಂದಾ ॥ ೧೯ ॥
ಕೈಲ ಕತ್ತಿ ತಾರೇನಂದಾ
ಶೀತೆ ಕಟ್ಕಂದ ಕಡ್ದೇನಂದಾ ॥ ೨೦ ॥
ಶೀತೇ ತಕ್ಕಂಡ ಇಲ್ಲೇ ಬಂದಾ
ಹೋ ರಾಮಣ್ಣಾ ರಾಯರ ಪಾದಕ ಬಿದ್ದಣ್ಣ ॥ ೨೧ ॥

ಹೇಳಿದವರು: **ನಾಗಪ್ಪ ಶಿವಪ್ಪ ಗೌಡ,** ತಲಗೊಡು

❖

# ೯. ದೇವತೆಗಳ ಕೋಲಾಟ

ಕೋಲು ಕೋಲು ಕೋಲೆನ್ನದು ಕೋಲು
ಕೋಲು ಕೋಲೇ ಕೋಲೆನ್ನ ಕೋಲೇ ‖ ೧ ‖
ಕಯ್ಯಲೊರೆಗೆ ಕಂಚಿನ ಕೋಲು
ಪಾಂಡವರಿಗೆ ಬೆಳ್ಳಿ ಕೋಲು ‖ ೨ ‖
ಶಿತ ಕಟ್ಟ ಶಿರಿರಾಮರಿಗೆ ಚಿನ್ನದ ಕೋಲು
ಶಿನ್ನದ ಕೋಲ ತಡದೇಕಂಡೇ ‖ ೩ ‖
ತಮ್ಮ ತಮ್ಮ ಮುಸತಾಪವಾನೋ ಗೈದಾರೋ
ಶಿರಿದೇವ ತಗೋಳೇ ನೆಡೆದಾರೋ ‖ ೪ ‖
ಬಾಳೆಯೆಂಬ ಬಯಳಲೀಗೋ ಕೋಲೇ
ಬಾಳೆಯೆಂಬ ಬಯಲಿಗೆ ನೆಡೆದರಲ್ಲೋ ಶಿರಿದೇವತೆಗೊಳ್ಳು ‖ ೫ ‖
ತಳದಿಂದ ರಾಯರ ತಾಳೊವಾ ತಳದರಲ್ಲೋ
ದುರದಿಂದ ರಾಯರ ಮದಲಿಗೇ ನಿಲುವರೇಲೋ ಕೋಲೇ ‖ ೬ ‖
ದುರದಿಂದ ರಾಯರ ಮದಲಿಗೇ ನಿಂತರೇಲೋ ಶಿರಿದೇವತೆಗೋಳು
ಆರಜಿಣ ರಾಯರ ಹಾದಿಗೋ ನಿಲುವಾರ ಕೋಲೇ ‖ ೭ ‖
ಅರಜಿಣ ರಾಯರ ಹಾದಿಗೋ ನಿಂತರೇಲೋ ಶಿರಿದೇವತೆಗೋಳು
ಯಾವೊಂದೇ ಹಾಡ ತೊಡಗಿದನೋ ಕೋಲೇ ‖ ೮ ‖
ಯಾವೊಂದೇ ಹಾಡ ತೊಡಗಿದ ಅಂಜೂಣ ಸ್ವಾಮೀ
ಶರಣೆಂಬ ಹಾಡ ತೊಡಗಿದನು ಕೋಲೇ ‖ ೯ ‖
ಶರಣೆಂಬ ಹಾಡ ತೊಡಗಿದನು ಅಂಜೂಣ ಸ್ವಾಮೀ
ಹಾಡ ಹೇಳಿ ಹಾಡೇಳಿ ಕೋಲ ಮುರವನೋ ಕೋಲೇ ‖ ೧೦ ‖
ಹಾಡ ಹೇಳಿ ಕೋಲ ಮರವಟ್ಟ ಹೊತ್ತಿನ ವಳಗೆ

ಬೂಮಂಡಳ ಹೋಡಿಯೇ ಯೆದ್ದಿ ಹರವೊರೋ ಕೋಲೇ ‖ ೧೧ ‖
ಬೂಮಂಡಳ ಹೊಡಿಯೇ ಯೆದ್ದಿ ಹೊತ್ತಿನ ವಳಗೆ

(ದೇವತೆಗಳ ಒಡತಿ)

ಬೂಮಿಯೊಳಗಿನ ಸರಸತಿಯೇ ಎರುವಳಲ್ಲೋ ಕೋಲೆ ‖ ೧೨ ‖
ದೇವತೆಯೊಳಗೆ ಒಡತಿಯಾಗೆ ಕೋಲೆ
ಹೊನ್ನಿನ ತಳೊಗೀ ತರವಾಳೆ ಸಿರಿಯೊಳ ದೇಮಮ್ಮ ‖ ೧೩ ‖
ದೇವತೆಗೊಳಿಗೆ ಕೊಡವೋರೆ ತೈದಳಲೋ ಕೋಲೆ
"ಕೇಳಿರೋ ಕೇಳಿರೋ ದೇವತೆಗೋಳೇ, ನೀವೇ ಕೇಳೀ ‖ ೧೪ ‖
ಈ ಆಟ ನಿಮಗೆಂದು ತರವಲ್ಲವೋ" ಕೋಲೇ
ಆ ಆಟ ನಿಮಗೆ ತರವಲ್ಲ ಅಂತ ಹೇಳಿ ‖ ೧೫ ‖
ಈ ಆಟ ನಿಮಗೆ ತರವಲ್ಲವೋ ಕೋಲೇ
ಈ ಆಟ ನಿಮಗೆ ಬೇಡಂದಳ ಶಿರಿಯಾಳಮ್ಮ ‖ ೧೬ ‖
ನೆಡದಳೋ ಪಾತಾಳಲೋಕಕೆ ಕೋಲೆ
ಸಿರಿಯಳ ದೇವಮ್ಮ ಪಾತಾಳಲೋಕಕ್ಕೆ ಹೋಗುವಾಗೆ ‖ ೧೭ ‖
ಮತ್ತೊಂದಲಾಟ ಆಡವಾರೋ ದೇವತೆಗೋಳೇ
ಯಾವೊಂದು ಲಾಟಾವ ಆಡುವಾರೋ ಕೋಲೇ
ತಾತ್ಯೆಯೆಂಬುಲಾಟಾವಾ ಆಡವಾರೋ ಶಿರಿದೇವತೆಗೋಳೇ ‖ ೧೮ ‖
ಹಾಡ್ಗಳೇ ಕೋಲನು ಮರುವಾರ ಕೋಲೇ
ಹಾಡಳೇ ಕೋಲನು ಮರುವಟ್ಟ ಹೊತ್ತಿನವೊಳಗೆ ‖ ೧೯ ‖
ವಜ್ಜರದ ಹನುಮ ವದಗಿದನು ಕೋಲೇ
ಜಜ್ಜರದ ಹನುಮ ಒದಗಿದನು ವದನೆ ವದನೆ ಕೋಲ ಹೋಡೆವಾನೆ ‖ ೨೦ ‖
ಕಂಚಿನ ಕೋಲು ಶಣಗುಟ್ಟವು ಕೋಲೇ
ಕಂಚಿನ ಕೋಲು ಶಣಗುಟ್ಟು ಬೆಳ್ಳಿಕೋಲು ಬೆಗಳೊಡದೋ ‖ ೨೧ ‖
ಚಿನ್ನದ ಕೋಲು ಶಿಗುರೊಡೆದು ಕೋಲೆ
ಚಿನ್ನದ ಕೋಲು ಶಿಗರೆದ್ದಿ ಅರಬರಕೇ ಹರದು ‖ ೨೨ ‖
ಹೋಗರಗ್ಯೆಲ್ಲೆ ಕಡಲೇಳು ಶಮುದುರಕೆ ಕೋಲೇ

ಹೋಗರಗ್ಯೆಲ್ಲೆ ಕಡಲೇಳು ಶಮುದುರಕ್ಕೆ ಶಿನ್ನದ ಕೋಲು ‖ ೧೩ ‖
ಹುಟ್ಟೆ ಬಂದವಲೋ ಬಂಕೀಯ ಮಣ್ಣಿನ ಗೂಡೆಮನೆ ಕೋಲೆ
ಹುಟ್ಟೆ ಬಂದವರೋ ಬಂಕೀಯ ಮಣ್ಣಿನ ಗುಡೆತಲೆ ಮೈನ ಕೋಲೆ ‖ ೧೪ ‖
ತಾಯಿಲ್ಲದ ಮಗನೇ ತಂದೆಯು ಇಲ್ಲದ ಮಗನು
ಯಾರು ಇಲ್ಲದ ಆಕಾಲೀ ಮಗನು ಕೋಲೆ ‖ ೧೫ ‖
ಮೀರಾಶೀ ಮನಿಯಲ್ಲಿ ವಳೂವನು ಕೋಲೆ
ಮೀರಾಶೀ ಮನಿಯಲ್ಲಿ ವಳುವನು ಆಕಾಲೀ ಮಗನೇ ‖ ೧೬ ‖
ಹೊತ್ತರ ಹೊರೆಯ ಮುನ್ನ ವಳೂವನು ಕೋಲೆ
ಗಂಜಿವಂದು ಊಟವಾ ಉಣ್ಣುವಾನು ಆಕಾಲೀ ಮಗನೇ ‖ ೧೭ ‖
ಗೋವಿನ ಹಟ್ಟಿಗೆ ನಡೆದಾನ ಕೋಲೇ
ನೂರೊಂದು ಗೋವಾ ವಿಡಿವಾನು ಆಕಾಲೀ ಮಗನೇ ‖ ೧೮ ‖
ಹೆದ್ದುಂಬೆ ಕೊರಳಾನೂ ಹಿಡುವಾನ ಕೋಲೇ
ಹರ್ಕವಂದು ಕಂಬಳಿ ಗಪ್ಪೆ ಹಿಡಿದಾನ ಆಕಾಲೀ ಮಗನೇ ‖ ೧೯ ‖
ಗೋವಿನ ಬೆನ್ನಿಗೆ ನಡದಾನ ಕೋಲೇ
ನಡದಾ ಕಡಲೇಳ ಬ್ಯಾಣಕೆ ಆಕಾಲೀ ಮಗನೇ ‖ ೨೦ ‖
ಹೆದ್ದುಂಬೆ ಕೊರುಳ ನುಡುವಾನು ಕೋಲೆ
ತಾವಂದು ಕಲ್ಲಮೇನೆ ಕುಳಸಾನು ಆಕಾಲೀ ಮಗನೆ ‖ ೨೧ ‖
ಗೋವೆಲ್ಲಾ ಹರಗಾಡೀ ಮೇವೂತ ಐದವಲೋ ಕೋಲೇ
ಅತ್ತ ಇತ್ತಲೇ ನೋಡುತ್ಯೆದನಲೋ ಕೋಲೇ
ಅತ್ತ ಇತ್ತಲೇ ನೋಡುತ್ಯೆದನು ಆಕಾಲೀ ಮಗನೇ ‖ ೨೧ ‖
ಬಂಕೀ ಮಣಿನ ಗುಹೆಯಾನೇ ನೋಡುವಾನು ಕೋಲೇ
ಶಿನ್ನದ ಸೂರಿ ದೇವರೇ ಉರಿವಾಂಗೇ ಉರಿದಾವೋ ಆವಾಲೇ ಕೋಲು ‖ ೨೨ ‖
ಬೆಳುದೇವರೆ ಬೆಳಗೀ ದಂಗೇ ಬೆಳು ಶಿವನೋ ಕೋಲೇ
ದುರಡಪುತ್ರ ನಾಗೇ ಹಾಲುಂಡ ಕೋಲು ನೆರದಿವಲೋ ಆವಾಲೇ ಕೋಲೆ ‖ ೨೪ ‖
ವಂದ ಹುಟ್ಗೆ ಯರಡಾಗೇ ನೀಲತವಲೋ ಕೋಲೇ
ಅಸ್ತದಿಂದೇ ಹುಟ್ಟಿದೋ ಕೋಲ ಪುಸ್ತದಲ್ಲಿ ಬೆಳದೋ ಕೋಲು ‖ ೨೫ ‖

ರಾಮ ಲಕ್ಷ್ಮಣರಾಗೇ ನೀಲತವಲೋ ಕೋಲೇ
ಆಕಾಲೀ ಮಗನ ಕಾಣಿಗೇ ದೊರಕೀವಲೋ ಆವಾಲೇ ಕೋಲು ॥ ೩೬ ॥
ಕರಗಾಗೀ ದನಗೋಳ ಹೊಡಕಂಡು ಬರುವನಲೋ ಕೋಲೇ
ಗೋವ ಕಟ್ಟೆ ಗೋವೀಗೆ ಹುಲ್ಲ ದರಸಿದನೋ ಆಕಾಲೀ ಮಗನೇ ॥ ೩೭ ॥
ಎಡೆಯನು ರಾಮುನಾಗೇ ನಡೆದನಲೋ ಕೋಲೆ
(ದನಿಗೋಗಿ ಬಂದ ಮೇಲೆ)
ಕೈಕಾಲ ಶಿರಿಮೊಕವನು ತೊಳದಾನ ಆಕಾಲೀ ಮಗನೇ ॥ ೩೮ ॥
ವಹಿಯರಿದ್ದಲ್ ಆವಾನು ನಡೆದನಲೋ ಕೋಲೇ
ಕೇಳಲೋ ಕೇಳಲೋ ವಡೆಯನೋರೇ ನೀಮೇಲೆ ಕೇಳೀ ॥ ೩೯ ॥
ಇಂದ ಯರಡಾ ಕೋಲಾ ಕಂಡೇ ಬಂದನೇ ಕೋಲೇ
ಕೇಳಲೋ ಕೇಳಲೋ ಆಕಾಲೀ ಮಗನೇ ನೀನೇ ಕೇಳು ॥ ೪೦ ॥
ಇಂತಾ ಸುಳ್ಳ ಯಾಕೇ ಕಲತೇಯೋ ಕೋಲೇ
ಕೇಳಲೋ ಕೇಳಲೋ ವಡೆಯನೋರೇ ನೀವ ಕೇಳೇಳಿ ॥ ೪೧ ॥
ನಿಮ್ಮನೆ ನಮ್ಮ ಕೊರುಳಾನೇ ಕೋಲೇ
ನಿಮ್ಮನೆ ನಮ್ಮ ಕೊರುಳಾನೇ ಸ್ವಾಮ್ಯೋರೇ ಕೇಳೀ ॥ ೪೨ ॥
ನಿನನ್ನಾಣಿ ನಿನ್ನ ಕೊರಳಾಣಿ ಕೋಲೇ
ಸ್ವಾಮ್ಯೋರೇ ಕೇಳಿ ॥ ೪೩ ॥

❖

# ೧೦. ಸುಗ್ಗಿ ಪದ - ಜಾಗಡಿ ಪದ

ಅತಾಳ ಪಾತಾಳ ಸಾತಾಳ ರಸತಾಳ
ಭೂತಾಳದೊಳಗೊಂದು ಶಶಿ ಹುಟ್ಟಿ ಕೋಲೇ ‖ ೧ ‖
ಭೂತಾಳದೊಳಗೊಂದು ಶಶಿ ಹುಟ್ಟಿ
ಪಾತಾಳಕೆ ಬೇರೂ ಜಿಗಿದಾವೂ ಕೋಲೇ ‖ ೨ ‖
ಪಾತಾಳಕೆ ಬೇರೂ ಜಿಗಿದಾವಾ ಶಶಿಯಲ್ಲಿ
ಆಕಾಶಕೆ ಸ್ಯೆವಾಗಿ ನೆಗುದಾವೇ ಕೋಲೇ ‖ ೩ ‖
ಆಕಾಶಕೆ ಸ್ಯೆವಾಗಿ ನೆಗುದೀತಾ ಶಶೀ
ವೃಕ್ಷವೆಂಬ ಹೆಸರೂ ಬಂದೀತು ಕೋಲೇ ‖ ೪ ‖
ವೃಕ್ಷವೆಂಬ ಹೆಸರೂ ಬಂದೀತಾ ಶಶೀಗೇ
ಕಾಯಿ ಹಣ್ಣಾಗಿ ಬೆಳುಗೀತು ಕೋಲೇ ‖ ೫ ‖
ಕಾಯಿ ಹಣ್ಣಾಗಿ ಬೆಳುಗಿತಾ ವೃಕ್ಷಕ್ಕೆ
ನೂರ್ವೊಂದು ಕಪಿಗಳು ಯೆರುಗಾವೆ ಕೋಲೇ ‖ ೬ ‖
ನೂರ್ವೊಂದು ಕಪಿಗಳು ಯೆರುಗಾವಾ ವೃಕ್ಷಕ್ಕೆ
ಭೂಮೀಗ್ವೊಂದು ಹೆಗಲೂ ಯೆರುಗಾವೆ ಕೋಲೇ ‖ ೭ ‖
ಭೂಮೀಗ್ವೊಂದು ಹೆಗಲೂ ಯೆರುಗಾವಾ ವೃಕ್ಷಕ್ಕೆ
ಆಚೇರಿ ತಿಮ್ಮಣ್ಣ ಕಡುತಂದಾ ಕೋಲೇ ‖ ೮ ‖
ಆಚೇರಿ ತಿಮ್ಮಣ್ಣ ಕಡುತಂದಾ ಹೆಗಲಾ
ಗುಡುಗಾರ ಬೊಮ್ಮಣ್ಣ ಪಡತಿಕೆತ್ತಿದ ಕೋಲೇ ‖ ೯ ‖
ಪಡತಿಕೆತ್ತಿ ಬೆಳಗಿಟ್ಟ ಕೋಲಿಗೆ
ಹೊನೆ ಮಾಣ ದೇವ್ರ ಮುಂದೆ ಮಡುಗಿದರು ಕೋಲೇ ‖ ೧೦ ‖

ಹೊನೆ ಮಾಣ ದೇವ್ರ ಮುಂದೆ ಮಡಗೀದಾ ಕೋಲಿಗೆ
ಗಂದಾ ಹೂವನ್ನೆ ಪೂಸಿದರು ಕೋಲೇ ‖ ೧೧ ‖
ಗಂದಾ ಹೂವನ್ನೆ ಪೂಸಿದಾ ಕೋಲಿಗೆ
ಹಣ್ಣು ವೀಳ್ಯಾವಾ ಇಟ್ಟಿದರು ಕೋಲೇ ‖ ೧೨ ‖
ಹಣ್ಣು ವೀಳ್ಯಾವಾ ಇಟ್ಟಿದಾ ಕೋಲಿಗೆ
ಕಾಯೊಡದಿ ಕಯ್ಯಾ ಮುಗಿದಾರೂ ಕೋಲೇ ‖ ೧೩ ‖
ಕಾಯೊಡದಿ ಕಯ್ಯಾ ಮುಗಿದಾರಾ ಕೋಲಿಗೆ
ಮಂಗಳಾರತಿಯಾ ಬೆಳಗಿದರು ಕೋಲೇ ‖ ೧೪ ‖
ಮಲವಯ್ಯನೆಂಬವ ಮಾದೊಡ್ ಶೂರ
ಮಲವಯ್ಯನೆಂಬವ ಮಾದೊಡ್ ಶೂರನು ಕೋಲೇ ‖ ೧೫ ‖
ಉಟ್ಟಾ ಮೈಲಿಗೆಯಾ ತೆಗೆಯನು ತೊಳೆಯಾನು ಮಲವಯ್ಯ
ಉಂಡಾ ಯಂಳ್ಳಕೆ ಅಂಜನು ಕೋಲೇ ‖ ೧೬ ‖
ಮಲವಯ್ಯಾ ನೆಂಬವ ಮರಕೆ ಹಬ್ಬಿದ ಬಳ್ಳೀ
ಎಂದೀಗೂ ಬಳ್ಳಿ ಹರಿಯಾವು ಕೋಲೇ ‖ ೧೭ ‖
ಇಂದೀಗಾ ಬಳ್ಳಿ ಹರಿಯಾವು ಹುಸಿಯಾವು
ಇಂದೀಗಾ ಮರನಾ ಬಿಡಲಾರೆ ಕೋಲೇ ‖ ೧೮ ‖
ಮಲವಯ್ಯ ಮಲಗೂವ ಮಂಚಾದ ಕೋಲಿಗೆ
ಜಂತಾದವೆಂಬೂ ಬೊಂಬೇಗಳು ಕೋಲೇ ‖ ೧೯ ‖
ಜಂತಾದವೆಂಬೂ ಬೊಂಬೇಗಳು ಮಂಚಕ್ಕೆ
ಇಂದಿಗಾ ಮರನಾ ಬಿಡಲಾರೆ ಕೋಲೇ ‖ ೨೦ ‖
ಕೋಲಣ್ಣ ಗಂಗೀಗೂ ಕೋಲಣ್ಣ ಗೌರಿಗೂ
ಕೋಲು ಕೋಲೇನಾ ಕೋಲೆನ್ನ ಕೋಲೇ ‖ ೨೧ ‖
ಕಾಲೂ ಬಾಲಾ ಚಂದಾ ಮೇಲೇ ಹೆಗಲೂ ಚಂದಾ
ಬಾಲದಲ್ಲೀ ಚಂದಾ ಬಸುವಯ್ಯಾ ಕೋಲೇ ‖ ೨೨ ‖
ಬಾಲದಲ್ಲಿ ಚಂದಾ ಬಸವಯ್ಯಾನಾ ಪಾದಕ್ಕೆ
ಹಣ್ಣು ವೀಳ್ಯಾ ಇಟ್ಟು ಶರಣೆಂಬೆ ಕೋಲೇ ‖ ೨೩ ‖

ಹಣ್ಣು ವೀಳ್ಯಾ ಇಟ್ಟು ಏನಂದಿ ಶರಣಂಬೇ
ನಾವ ಮಾಡುವಾ ಕಾರ್ಯ ಜೀಯ ಎಂದು ಕೋಲೇ ॥ ೧೪ ॥
ಕಾಲು ಬಾಲಾ ಚಂದಾ ಮೇಲೆ ಪಾವ್ಡಾ ಚಂದಾ
ಬಾಲಾದಲ್ಲಿ ಚಂದಾ ಬಸುವಯ್ಯನ ಕೋಲೇ ॥ ೧೫ ॥
ಹಾಲಗಾಯೀ ವಡೂದೂ ಬಸವಯ್ಯನ ಪಾದಕ್ಕೆ
ಹಾಲಗಾಯೀ ವಡುದೂ ಶರಣಂಬೆ ಕೋಲೇ ॥ ೧೬ ॥
ಹಾಲಗಾಯೀ ವಡುದೂ ಏನಂದಿ ಶರಣಂಬೇ?
ನಾವ ಮಾಡೂವಾ ಕಾಯಕ ಜಂಬುವೆಂದೂ ಕೋಲೇ ॥ ೧೭ ॥
ಕಾಲೂ ಬಾಲಾ ಚಂದಾ ಮೇಲೇ ಶೊಂಬೂ ಚಂದಾ
ಬಾಲಾದಲ್ಲಿ ಚಂದಾ ಬಸುವಯ್ನ ಕೋಲೇ ॥ ೧೮ ॥
ಬಾಲಾದಲ್ಲಿ ಚಂದಾ ಬಸುವಯ್ನ ಪಾದಕ್ಕೆ
ಮಂಗಲಾರತಿಯಾ ಬೆಳಗಿರೇ ಕೋಲೇ ॥ ೧೯ ॥
ಮಂಗಲಾರತಿಯಾ ಬೆಳಗಿರೇ ಬಸುವಯ್ಯಗೇ
ನಾವು ಮಾಡುವಾ ಕಾರ್ಯಾ ಜಯವೆಂದೂ ಕೋಲೇ ॥ ೨೦ ॥

▪ ಹೇಳಿದವರು: **ಶ್ರೀ ಮಂಜು ಬಡವ ನಾಯ್ಕ**, ಹೊನ್ನಾಕುಳಿ, ೧೪/೧೦/೭೧.

❖

# ೧೧. ತಂದಾನೋ (ಸುಗ್ಗಿ ಆಲಾಪ)
## (ಮೃದಂಗ ಹೊಡೆಯುವ ಆಲಾಪ)

ಶಾತಗಲ್ ಶಣ್ಣ ತಂಗಿ
'ವಲಗೇನ ಮಾಡ್ತೇ?' 'ಕಡ್ಲೆ ಹೂರಿತೆ'
'ಕಡ್ಲೆ ಹೂರದ್ರೆ ನಂಗ್ಯೆಯ್ಡ್ ಕೊಡು'
'ನಿಂಗ್ಯೆಯ್ಡ್ ಕೊಟ್ರ ನಮ್ಮತ್ತೆ ಬಯ್ಯೋದೋ' ॥ ೧ ॥

‘ನಿಮ್ಮತ್ತೆ ಯೆಲ್ ಹೋಗಿದೆ?’
‘ಅತ್ತೆ ಹಿತ್ಲಗೆ ಹೋಗಿದು’
‘ಮಾವೆಲ್ ಹೋಗಿದ್ದ?’
‘ಮಾವ ಮಾಲ್ಕೆ ಹೋಗ್ಯ’
‘ಗಂಡೆಲ್ ಹೋಗಿನೇ?’
‘ದಂಡಿಗೆ ಹೋಗ್ಯ’ ॥ ೧ ॥

‘ಮೈದಯೆಲ್ ಹೋಗಿನೇ?’
‘ಮೈದ ಶೂಲ್‌ಗಾರ್‌ಕಿಗೆ ಹೋಗ್ಯ’
‘ನೀ ಬಶ್ರು ಯಾಕಂಡಿ? ಹೌದೆ?’
‘ನ ಬಶ್ರಂದಿ ನಿಂಗೆ ಯಾರೆ ಹೇಳಿದ್ದು’
‘ಕೊಟ್ಟಕ ಮನೆ ಕೋಲಿ ಹೇಳ್ತು’ ॥ ೨ ॥

‘ನಾ ಬಶ್ರಾಗಿದ್ರೆ ಕಾಗೆನ ಶೀರಿ ಉಡ್ತಿದೆ,
ಕಣ್ಗೆ ಕಪ್ಪ ಇಡ್ತಿದೆ
ನೆತ್ತಿ ತುಂಬ ಹೂಂಗೆ ಮುಡ್ಕಂತಿದೆ
ಗೆಜ್ಜೆ ಕಾಲ ಮಗ್ನ ಚಚ್ಕಂಡಿ
ಆಚೆಮನೆಗೆ ಈಚೆಮನೆಗೆ
ವೋಡಾಡ್ತ ಇರ್‌ತಿದ್ಯಯ್ಯಾ ತಂದೋನಾನ’ ॥ ೪ ॥

❖

# ೧೨. ಕೋಟೆ ಸುತ್ತಿನ ಮೇನೆ (ಆಲಾಪ)

ಕೋಟೆ ಶುತ್ತಲ ಮೇನೆ
ಹುಟ್ಟಿದೊಂದ ಬೆದ್ರು ‖ ಹುಟ್ಟಿದೊಂದ ಬೆದ್ರಗೆ
ತಪ್ಪದೊಂದು ಬೆದರು
ಕಡ್ಡದೊಂದು ಬೆದರಿಗೆ ‖ ೧ ‖
ಶಿಗ್ದರೆಂದು ಶಲಗೆ ‖ ಶಿಗ್ಧರೊಂದು ಶಲನೆಗೇ
ನೆಯ್ದುರೊಂದು ಕಡತ | ನೆಯ್ದುರೊಂದು ಕಡಕಿಗೇ
ಗೋದ್ಯಂತಾ ಕಲ್ಲು ‖ ಗೋದ್ಯಂತಾ ಕಲ್ಲಿಗೇ ‖ ೨ ‖
ಕಣಪೀನಂತಾ ಹಿಟ್ಟಗೆ ‖ ಕಣಪೀನಂತಾ ಹಿಟ್ಟಿಗೆ
ಬಂಗ್ಲಗಾಲ್ ಬೇಳೆ ‖ ಬಂಗ್ಲ ಗಾಲ್‌ಬೀಲಗೇ (ರಾಗಿ ಅಂಬಲಿ)
ಬಂದ್ರ್ ಮೂರ್ ಆಲ್ ಶೂಲೆರು | ಮೂರ್ ಆಲ್ ಶೂಲೆರ್‌ಗೆ ‖ ೩ ‖
ಗೆಯ್ದುಯಂತಾ ಮೊಳೆ (ಮೊಲೆ) | ಗೆಯ್ದುಯಂತಾ ಮೊಲೆಗೆ
ಕನ್ನಿಜಟ್ಟಿ ಲಾಲು | ಕನ್ನಿಜಟ್ಟಿ ಹಾಲಿಗೆ
ಕುನ್ ಮರ್‌ಯಂತಾ ಮಕ್ಲು | ಕುನ್ ಮರ್‌ಯಂತಾ ಮಕ್ಲಿಗೆ ‖ ೪ ‖
ಹೆಡ್ಗಬಲ್ಲಿ ತೊಟ್ಲು | ಹೆಡ್ಗ ಬಲ್ಲ ತೊಟ್ಲಿಗೆ
ಆಶಿಲ್ ತೋಟ್ | ಇಶೇಲ್ ತೋಟ್
ಜೈಲೋ ಜೈಲೋ ‖ ೫ ‖

❖

# ೧೩. ಸುಗ್ಗಿ ಹಬ್ಬದಲ್ಲಿ ಗೆಂಡೆಕೋಲು ಕಡ್ಕ ಬರುದು

ವಂದಂಬೂ ದೇನೇ ಕಡನಾ ಕಂಳಕದಾನೇ
ಬಲ್ಲದವರೇಲೀ ಲರೂತಾವೇ ‖ ೧ ‖
ಯೆಯ್ಡಂಬೂದೇನೇ ಕಣ್ಣ ಕಂಗಲ ಕಾಣೀ
ಮೂರಂಬುದೇನೇ ಕಾಯಿನ ಕಣ್ಣಾ ಕಾಣೀ ‖ ೨ ‖
ನಾಕಂಬೂದೇನೇ ಲಾಕಲ ಮೊಲಿಯೂ ಕಾಣೀ
ಐದಂಬೂದೇನೇ ಕಯ್ಯನಯರ್ತಾ ಕಾಣೀ
ಆರಂಬೂದೇನೇ ಆಲದ ಮರನಾ ಕಾಣೀ ‖ ೩ ‖

❖

# ೧೪. ಸುಗ್ಗಿ ತಳನಲ್ಲಿ ಪದ (ದುಮಸೋಲಣ್ಣಿರಾ)

ದುಮಸೋಲಣ್ಣಿರಾ ಇಲ್ಲಿ ಈಸ್ವರನಿಗೆ ತಳಕ
ದುಮಸೋಲಣ್ಣಿರಾ ಇಲ್ಲಿ ಮೇಲು ಹೊಲ್ನರಿಗೇ ‖ ೧ ‖
ದುಮಸೋಲಣ್ಣಿರಾ ಇಲ್ಲಿ ನಲಕೆ ನಾಗೇಂದ್ರಗೇ
ದುಮಸೋಲಣ್ಣಿರಾ ಇಲ್ಲಿ ಕುಲಕೆ ಪಾಂಡವ್ರೀಗೇ ‖ ೨ ‖
ದುಮಸೋಲಣ್ಣಿರಾ ಇಲ್ಲಿ ಭೂಮಿ ತಾಯಿಗೇ
ದುಮಸೋಲಣ್ಣಿರಾ ಇಲ್ಲಿ ಜಟ್ಗು ರಾಯಗೇ ‖ ೩ ‖
ದುಮಸೋಲಣ್ಣಿರಾ ಇಲ್ಲಿ ಕೀಳು ಪರಿವಾರದರಿಗೇ
ದುಮಸೋಲಣ್ಣಿರಾ ಇಲ್ಲಿ ಉರವಾ ಜೋತಿಗೇ ‖ ೪ ‖
ದುಮಸೋಲಣ್ಣಿರಾ ಇಲ್ಲಿ ಮೆರವಾ ತುಂಬಿಗೇ
ದುಮಸೋಲಣ್ಣಿರಾ ಇಲ್ಲಿ ಮೆರವಾ ಚೌಡಮ್ಮಗೇ ‖ ೫ ‖
ದುಮಸೋಲಣ್ಣಿರಾ ಇಲ್ಲಿ ವರ್ಸಗ್ವೊಂದು ಲಬ್ಬ
ದುಮಸೋಲಣ್ಣಿರಾ ಇಲ್ಲಿ ಲಾಡು ತಿಂಬ ಮಕ್ಕಳೇ ‖ ೬ ‖

ಹಬ್ಬದ ಮೂರುದಿನ ಲಾಡು ತಿನ್ನಿ ಮಕ್ಕಳೇ
ಹಬ್ಬದ ಮರುದಿನ ಬೇಡು ತಿನ್ನಿ ಮಕ್ಕಳೇ ‖ ೭ ‖
ಹಬ್ಬದ ಮರುದಿನ ಮಾ ದೊಡ್ಡ ಬಳಗವೋ
ಹಬ್ಬದ ಮರುದಿನ ಕಾಮನ ಬಳಗವೋ ‖ ೮ ‖
ಹಬ್ಬದ ಮರುದಿನ ಬೀಮ ದೊಡ್ಡ ಬಳಗವೋ
ಹಬ್ಬದ ಮರುದಿನ ಕಾಮಗು ಬೀಮಗು ಕತ್ನವು ಬಿದ್ದೋ ‖ ೯ ‖
ಹಬ್ಬದ ಮರುದಿನ ಕಾಮನೆ ಬಿದ್ದಾ ಬೀಮನೆ ಗೆದ್ದಾ
ಹಬ್ಬದ ಮರುದಿನ ಬೀಮನೆ ಬಿದ್ದಾ ಕಾಮನೆ ಗೆದ್ದಾ ‖ ೧೦ ‖

▪ ಹೇಳಿದವರು: **ಸಣಕೂಸ ಉಪ್ಪಾರ, ಹಳದಿಪುರ**

❖

# ೧೫. ಹಿಮದ ಗಾಳಿ ಬೀಸುವಾಗ ಕೋಲೇ
## (ಸುಗ್ಗಿ ಕಟ್ಟಿಕೊಂಡು ಹೋದ ಕೂಡಲೆ ಹೇಳುವುದು)

ತಾನತಂದ ತಾನಾ ನಾಽನ ತಂದನಾ
ತಾನ ತಂದಾನಾನೋ ತಂನಾನೇಳಾ ತಾನಾ ‖ ೧ ‖
ಮೊಳ್ವಾಲ್ಗ್ ಮಲೆ ಹೋಯ್ಕೋಳೀ ಭೂಮಿ ತನಸೇರಲೀ
ತೆಂಗಲು ಸರೂಗರಕೇ ವಂದೇ ಸಲ ಬಂದೋ ತಾನಾ ‖ ೨ ‖
ತಂಗಲು ಊರೂಗರಕೇ ವಂದೇ ಸಲ ಬಂದೋ ನಾರಾಣಸ್ವಾಮೀ
ಸ್ವಾಮೀ ಮಗ್ಗಳಗೇ ಅರಗೊಂಡ ತಾನಾ ‖ ೩ ‖
ಸ್ವಾಮೀ ಮಗ್ಗಳಗೇ ಅರಗೊಂಡ ನಾರಾಣಸ್ವಾಮೀ
ದಕ್ಕನಾರಲೇ ವಂದ ಕುಲವರೋ ತಾನಾ ‖ ೪ ‖
ದಕ್ಕನಾರಲೇ ವಂದ ಕುಲವರೋ ನಾರಾಣಸ್ವಾಮೀ
ಎದ್ದೊಮ್ಮೆ ವಂದ್ ಮೈಯಾ ಮುರಿವರೋ ತಾನಾ ‖ ೫ ‖

ಎದ್ದೊಮ್ಮೆ ವಂದ್ ಮೈಯಾ ಮೂರ್‌ದಾ ನಾರಾಣಸ್ವಾಮೀ
ಸರಳ ಸಂಡುಕೀ ವಂದೆ ಸರ ಗೆಂಟು ತಾನಾ ‖ ೬ ‖
ಸರಳ ಸಂಡುಕೀ ವಂದೇ ಸರ ಲಿಟ್ಲಕಂಡೇ
ಹಾರುಸೇ ಬಂದೆ ಪೋಗಡೇ ವಂದ್ ಹಣ್ಡರೋ ತಾನಾ ‖ ೭ ‖
ಹಾರುಸೇ ಬಂದೆ ಪೊಗಡೇ ವಂದ್ ಹಣ್ಡರೋ ನಾರಾಣಸ್ವಾಮೀ
ಕುಂತಮಂಚುಗಳಾ ವಂದೆ ಜಡುದೆದ್ದ ತಾನಾ ‖ ೮ ‖
ಕುಂತಮಂಚುಗಳಾ ವಂದೆ ಜಡುದೆದ್ದ ನಾರಾಣಸ್ವಾಮೀ
ಗಿಂಡಿಯಾರ್ ಸಂಬಾ ವಂದೆ ತಡದರೋ ತಾನಾ ‖ ೯ ‖
ಗಿಂಡಿಯಾರ್ ಸಂಬಾ ವಂದಾ ನಾರಾಣಸ್ವಾಮೀ
ದೊಗ್ಗೆಮಾ, ಲುಗ್ಗೀ ಹೆರುಟಾರೋ ತಾನಾ ‖ ೧೦ ‖
ದೊಗ್ಗೆಮಾ, ಲುಗ್ಗೀ ಹೆರುಟಾ ನಾರಾಣಸ್ವಾಮೀ
ರಾಜಂಗಲ ಬೀದೇಗಲಿದಾರೋ ತಾನಾ ‖ ೧೧ ‖
ರಾಜಂಗಲ ಬೀದೇಗಳದಾ ನಾರಾಣಸ್ವಾಮೀ
ರನ್ನದ್ದಣಪೇನ ವಂದ್ ದಾಟುವರೋ ತಾನಾ ‖ ೧೨ ‖
ರನ್ನದ್ದಣಪೇನ ವಂದ್ ದಾಟ್ಡ ನಾರಾಣಸ್ವಾಮೀ
ನೆಟ್ಟ ಸಂಪುಗೆ ವಂದೇ ನೆರುಳಲ್ಲಿ ತಾನಾ ‖ ೧೩ ‖
ನೆಟ್ಟ ಸಂಪುಗೆ ವಂದೇ ನಡಕರದೆ ನಾರಾಣಸ್ವಾಮೀ
ಮಾವಿನಾ ವಂದು ಬನುಕೇ ನಡೆದರೋ ತಾನಾ ‖ ೧೪ ‖
ಮಾವಿನಾ ವಂದು ಬನುಕೇ ನಡೆದ ನಾರಾಣಸ್ವಾಮೀ
ಮಾವಿನ ತಿರುಳಾ ವಂದ್ ಮುರಿವರೋ ತಾನಾ ‖ ೧೫ ‖
ಮಾವಿನ ತಿರುಳಾ ವಂದ್ ಮುಡ್ಡಾ ನಾರಾಣಸ್ವಾಮೀ
ಮೂಡಿಲ ಮೊಕುವಾಗೆ ವಂದ್ ನಡೆದರೋ ತಾನಾ ‖ ೧೬ ‖
ಮೂಡಿಲ ಮೊಕುವಾಗೆ ವಂದ್ ನಡೆದರ ನಾರಾಣಸ್ವಾಮೀ
ಮೂಡಿನಾ ಕೆರೆ ಗೇವಾದ ನೆಡೆದರೋ ತಾನಾ ‖ ೧೭ ‖
ಮೂಡಿನಾ ಕೆರೆ ಗೇವಾದ ನೆಡೆದರ ನಾರಾಣಸ್ವಾಮೀ
ಗಿಂಡಿದಾಳ್ ವಂದ್ ಮಿಂಚಾ ವಂದಿಡುವರೋ ತಾನಾ ‖ ೧೮ ‖

ಗಿಂಡಿದಾಳ್ ವಂದ್ ಮಿಂಚಾ ವಂದಿಟ್ಟಾ ನಾರಾಣಸ್ವಾಮೀ
ಜಂತಕಾನವಂದ್ ಮಿಂಚಾ ವಂದ್‌ವಿಡುವರೋ ತಾನಾ ‖ ೧೯ ‖
ಜಂತಕಾನವಂದ್ ಮಿಂಚಾ ವಂದ್ ವಿಟ್ಟಾ ನಾರಾಣಸ್ವಾಮೀ
ತಿಂಗಳ ಸಿರಿ ಮೊರೇ ವಂದ್ ತೊಳೆವರೋ ತಾನಾ ‖ ೧೦ ‖
ತಿಂಗಳ ಸಿರಿ ಮೊರೇ ವಂದ್ ತೊಳ್ದ ನಾರಾಣಸ್ವಾಮೀ
ತೋಕಾಡ್ ಹರಿನೇರಾ ವಂದ್ ಮೊಗೆವರೋ ತಾನಾ ‖ ೧೧ ‖
ತೋಕಾಡ್ ಹರಿನೇರಾ ವಂದ್ ಮೊಗ್ದಾ ನಾರಾಣಸ್ವಾಮೀ
ಹಿಂದೊಮ್ಮೆ ಮನೆಗೆ ಬರುವರೋ ತಾನಾ ‖ ೧೨ ‖
ಹಿಂದೊಮ್ಮೆ ಮನೆಗೆ ಬರುವಾ ನಾರಾಣಸ್ವಾಮೀ
ಹೂಗಿನಾ ಬನಕೇ ನಡೆದರೋ ತಾನಾ ‖ ೧೩ ‖
ಹೂವಿನಾ ಬನಕೇ ನಡೆದಾ ನಾರಾಣಸ್ವಾಮೀ
ಗೆಡವಿಗಾ ನೀರಾ ವಂದ್ ಯೆರೆವರೊ ತಾನಾ ‖ ೧೪ ‖
ಗೆಡವಿಗಾ ನೀರಾ ವಂದ್ ಯೆರ್‌ದಾ ನಾರಾಣಸ್ವಾಮೀ
ಹಳೆಯ ಹೂವೆಲ್ಲಾ ವಂದಳುದೊದೊ ತಾನಾ ‖ ೧೫ ‖
ಹಳೆಯ ಹೂವೆಲ್ಲಾ ವಂದಅಳತ್ ಹೋಯ್ತು ನಾರಾಣಸ್ವಾಮೀ
ಯಣ್ಣುವೆ ನ್ನೂರೆ ಹೂವಾ ವಂದ್ ಕೂಯ್ದರೋ ತಾನಾ ‖ ೧೬ ‖
ಯಣ್ಣುವೆ ನ್ನೂರೆ ಹೂವಾ ವಂದ್ ಕುಯ್ದಾ ನಾರಾಣಸ್ವಾಮೀ
ಹಿಂದೊಮ್ಮೆ ಮನೆಗೆ ಬರುವರೋ ತಾನಾ ‖ ೧೭ ‖
ಹಿಂದೊಮ್ಮೆ ಮನೆಗೆ ಬಂದಾ ನಾರಾಣಸ್ವಾಮೀ
ದೇವರ ಪೇಟಾಕೆ ನಡೆದರೊ ತಾನಾ ‖ ೧೮ ‖
ದೇವರ ಪೇಟಾಕೆ ನಡೆದನೊ ನಾರಾಣಸ್ವಾಮೀ
ಪೇಟದ ಮೇಳ್ ಹೂವಾ ವಂದ್ ಮಡುಗಾರೋ ತಾನಾ ‖ ೧೯ ‖
ಪೇಟದ ಮೇಳ್ ಹೂವಾ ವಂದ್ ಮಡುಗ್ದಾ ನಾರಾಣಸ್ವಾಮೀ
ಹಿದ್ದುಂಬೆ ವಿಡಿಯಾ ವಂದ್ ತಡೆದರೊ ತಾನಾ ‖ ೨೦ ‖
ಹಿದ್ದುಂಬೆ ವಿಡಿಯಾ ವಂದ್ ತಡ್ದಾ ನಾರಾಣಸ್ವಾಮೀ
ಪೀಟದಾ ಕಸವಾ ವಂದ್ ಹೊಡೆದರೋ ತಾನಾ ‖ ೨೧ ‖

ಪೀಟದಾ ಕಸವಾ ವಂದ್ ಹೊಡ್ದಾ ನಾರಾಣಸ್ವಾಮೀ
ಬೊಂಬೇ ತೋರಣಕೆ ವಂದ ಜಳಕಂದೋ ತಾನಾ || ೩೨ ||
ಬೊಂಬೇ ತೋರಣಕೆ ವಂದ ಜಳಕಂಡ ನಮ ನಾರಾಣಸ್ವಾಮೀ
ಅಂಗೈ ತುಂಬ್ ನಾದೂಳಾ ವಂದ್ ತಡೆದಾರೋ ತಾನಾ || ೩೩ ||
ಅಂಗೈ ತುಂಬ್ ನಾದೂಳಾ ವಂದ್ ತಡ್ದು ನಾರಾಣಸ್ವಾಮೀ
ಈ ರಣ ತುಂಬೆ ನಾಮಾ ವಂದಿಡುವಾರೋ ತಾನಾ || ೩೪ ||
ಈ ರಣ ತುಂಬೆ ನಾಮಾ ವಂದಿಟ್ಟಾ ನಾರಾಣಸ್ವಾಮೀ
ತಾನಿಟ್ಟಾ ರನ್ನೈಡ ವಂದ್ ಮಂಚತುಂಬೆ ತಾನಾ || ೩೫ ||
ತಾನಿಟ್ಟಾ ರನ್ನೈಡ ವಂದ್ ಮಂಚತುಂಬ ನಾರಾಣಸ್ವಾಮೀ
ಲಂಗೈ ತೊಳದ ನೀರಾ ವಂದ್ ಕೊಂಡುವಾರೋ ತಾನಾ || ೩೬ ||
ಲಂಗೈ ತೊಳದ ನೀರಾ ವಂದ್ ಕೊಂಡಾ ನಾರಾಣಸ್ವಾಮೀ
ತೋರಣ ತುಂಬಾ ಹೂವಾ ವಂದ್ ಮುಡಿಸಾರೋ ತಾನಾ || ೩೭ ||
ತೋರಣ ತುಂಬಾ ಹೂವಾ ವಂದ್ ಮುಡ್ದಾ ನಾರಾಣಸ್ವಾಮೀ
ತೊಳಸಿ ತೇರೂ ತಾ ವಂದ್ ಕೊಂಡುವಾರೋ ತಾನಾ || ೩೮ ||
ತೊಳಸಿ ತೇರೂ ತಾ ವಂದ್ ಕೊಂಡಾ ನಾರಾಣಸ್ವಾಮೀ
ದೇವರ ಪೂಜೆಯಾ ವಂದೆ ಮುಗಿಸಾರೋ ತಾನಾ || ೩೯ ||
ದೇವರ ಪೂಜೆಯಾ ವಂದ್ ಮುಗಿಸ್ದಾ ನಾರಾಣಸ್ವಾಮೀ
ದೊಗ್ಗೆ ಮಾಳಾಗಿಗೇ ನಡೆದರೋ ತಾನಾ || ೪೦ ||
ದೊಗ್ಗೆ ಮಾಳಾಗಿಗೇ ಹೋಗ್ವಂತಾ ಹೊತ್ತೀಗೆ
ಕೊಡಿ ಬಾಳೇಲೇ ವಂದ್ ಎಡೆಯಾದ್ದೆ ತಾನಾ || ೪೧ ||
ಕೊಡಿ ಬಾಳೇಲೇ ವಂದ್ ಎಡೆಯಾ ನೆಲಾಗುವಾಗೇ
ಉಪ್ಪು ಉಪ್ಪಿಕಾಯಿ ವಂದ್ ಯೇಡೆಯಾದೊ ತಾನಾ || ೪೨ ||
ಉಪ್ಪು ಉಪ್ಪಿಕಾಯಿ ವಂದ್ ಯೆಡೆಯಾಲಾಗ್ದರೋ
ಸಣ್ಣಕ್ಕೀ ಬೋನಾ ವಂದ್ ಎಡೆಯಾದೋ ತಾನಾ || ೪೩ ||
ಸಣ್ಣಕ್ಕೀ ಬೋನಾ ವಂದ್ ಎಡೆಯನೆಲಾಗುವಾಗೇ
ತಣ್ಣನ್ನ ತಣ್ಣನೆ ಮೊಸರೇ ವಂದ್ ಎಡೆಯಾದೋ ತಾನಾ || ೪೪ ||

ತಣ್ಣನ್ನ ತಣ್ಣನೆ ಮೊಸರೇ ಎಡೆಯನೆಲಾಗುವಾಗೆ
ಉಪ್ ಹಾಕಿ ಅನ್ನ ವಂದ್ ಸುರಿದಾರೋ ತಾನಾ ‖ ೪೫ ‖
ಉಪ್ ಹಾಕಿ ಅನ್ನ ವಂದ್ ಸುರಿವಂತಾ ಹೊತ್ತಿಗೆ
ಕಳಸೀ ಯೆರಡು ತುತ್ತಾ ವಂದುಣ್ಣಿವಾರೋ ತಾನಾ ‖ ೪೬ ‖
ಕಳಸೀ ಯೆರಡು ತುತ್ತಾ ಉಂಬಾ ನಾರಾಣಸ್ವಾಮೀ
ಮೂರಂಬ ತುತ್ತಾಗೆ ವಂದ್ ಮುಗುದೆದ ತಾನಾ ‖ ೪೭ ‖
ಮೂರಂಬ ತುತ್ತಾಗೆ ವಂದ್ ಮುಗೈದ್ ನಾರಾಣಸ್ವಾಮೀ
ನೆಂಜಲ ಕೈ ಬಾಯಾ ವಂದ್ ತೊಲೆವರೊ ತಾನಾ ‖ ೪೮ ‖
ನೆಂಜಲ ಕೈ ಬಾಯಾ ವಂದ್ ತೊಳ್ದಾ ನಾರಾಣಸ್ವಾಮೀ
ತೂಗೂ ಹೂಗಿಲಗೇ ವಂದ್ ನಡೆದರೋ ತಾನಾ ‖ ೪೯ ‖
ತೂಗೂ ಹೂಗಿಲಗೇ ವಂದ್ ನಡ್ದಾ ನಾರಾಣಸ್ವಾಮೀ
ತೂಗಿಲ ಮೇಲೆ ಹೋಗ್ ಕುಲ್ಲುವರೋ ತಾನಾ ‖ ೫೦ ‖
ತೂಗು ಹೂಗಿಲ ಮೇಲೆ ಕುಲಿತ ನಾರಾಣಸ್ವಾಮೀ
ಪಟ್ಟೇದಾರ್ ಸಂಚೀ ಬಿಡಿಸಾರೂ ತಾನಾ ‖ ೫೧ ‖
ಪಟ್ಟೇದಾರ್ ಸಂಚೀ ತೆಗದಾ ನಾರಾಣಸ್ವಾಮೀ
ಹಶ್ಯ ಹಣ್ಣಡಕೆ ತೆಗೆದರೊ ತಾನಾ ‖ ೫೨ ‖
ಹಶ್ಯ ಹಣ್ಣಡಕೆ ತೆಗದಾ ನಾರಾಣಸ್ವಾಮೀ
ವಡದೊರಡಕೆ ಹೋಳಾ ಮೆಳ್ಳುವಾರೋ ತಾನಾ ‖ ೫೩ ‖
ವಡದೊರಡಕೆ ಹೋಳಾ ಮೆಲದಾ ನಾರಾಣಸ್ವಾಮೀ
ಹೊಸ ಕುಲ್ಲೀಯಾ ವಂದ್ ಬೆಲಿಯೆಲೆ ತಾನಾ ‖ ೫೪ ‖
ಹೊಸ ಕುಲ್ಲೀಯಾ ವಂದ್ ಬೆಲಿಯೆಲೆ ಮೆಂದ್ಕಂಡಿ
ಯಾನದಾ ವಂದೂ ಕಳಸುನ್ನ ತಾನಾ ‖ ೫೫ ‖
ಯಾನದಾ ವಂದೂ ಕಳಸುನ್ನ ಮೆದ್ಕಂಡಿ
ರಾಯರಂಗುಡೆ ವಂದ್ ಹೊಗೆಸಪ್ಪಾ ತಾನಾ ‖ ೫೬ ‖
ರಾಯರಂಗುಡೆ ವಂದ್ ಹೊಗೆಸಪ್ಪಾ ಮೆದ್ಕಂಡಿ
ಕತ್ತರಸಿಕೊಂಡಾ ವಂದುಗಿದರೋ ತಾನಾ ‖ ೫೭ ‖

ಕತ್ತರಸಿಕೊಂಡಾ ವಂದು ಉಗ್ದಾ ನಾರಾಣಸ್ವಾಮೀ
ಹತ್ತಿ ಹಾಸುಗೆ ವಂದ್ ಬಿಡುಸಾರೋ ತಾನಾ ॥ ೫೮ ॥
ಹತ್ತಿ ಹಾಸುಗೆ ವಂದ್ ಬಿಡುಸ್ದಾ ನಾರಾಣಸ್ವಾಮೀ
ಶಿನ್ನದಾರ್ ಕೊಳಗಾ ವಂದ್ ತಳದಿಂಬು ತಾನಾ ॥ ೫೯ ॥
ಶಿನ್ನದಾರ್ ಕೊಳಗಾ ವಂದ್ ತಳದಿಂಬು ಲಿಟ್ಕಂಡಿ
ಶಲ್ಲೇದಾ ರೋಳ್ಳೀ ಹೊದಕಂಡಿ ತಾನಾ ॥ ೬೦ ॥
ಶಲ್ಲೇದಾ ರೋಳ್ಳೀ ಹೊದಕೆಯು ಬಿಟ್ಟುಕಂಡೀ
ಹೀಮದಾ ಗಾಳೀ ವಂದ್ ಬೀಸುವಾಗ ತಾನಾ ॥ ೬೧ ॥
ಹೀಮದಾ ಗಾಳೀ ವಂದ್ ಬೀಸ್ವಂತಾ ಹೊತ್ತೀಗೆ
ಮಾಯದಾ ನಿದುರೀ ವಂದ್ ವರುಗ್ಯಾರೆ ತಾನಾ ॥ ೬೨ ॥

▪ ಹೇಳಿದವರು: **ಶ್ರೀ ನಾರಾಯಣ ಗೌಡ ಕಲವೇ**

❖

# ೧೬. ಹೋಯ್ಲು

೧. ವೋಹೋ ಸೋ (ತೋ) ವೋ ಹೋಯ (ಶುರುವಲ್ಲಿ)
೨. ವೋಹೋತೋಯ್ ವೋಹೋಯ್
೩. ವೋಹೋತೋ ವೋಯ್
೪. ವೋಹೋಚೋಯ್ ವೋ ಹೈ
೫. ವೋಹೋ್ಯ ವೋಹೋತೋ ವೋಹೋ್ಯ ವೋ ಹೋ ತೋ
೬. ವೋಹೋ ಚೋ
೭. ವೋ ಹೋ ಚೊ, ವೋ ಹೋ ಚೊ, ವೋ ಹೋ ಚೊ
೮. ಚೋಯ್
೯. ಚಾವೋ ಚೋ ಸೋಸೋ ಸೋ ಸೋ (ಕುಂಚ ಎತ್ತಿ ಬಾಗಿ ಸುತ್ತುತ್ತ)
೧೦. ವೋ ಹೋ ತೋ ವೋ್ಯ (ಎಂದಾಗ ಕುಂಚ ತಲೆಗಿಂತ ಮೇಲೆ) ವೋಹೋ ಚೋ್ಯ (ಒಂದು ಸುತ್ತು ತಿರುಗುತ್ತಾ ತಮ್ಮ ಸುತ್ತ ತಾವೇ)

# ೧೭. ಅಡ್ಡಗೊಂಡ ಪದ
## (ಸ್ವಾಮೇರಾ ಬೂಮಿಗೊಂದು ನೆನೆಯೋ)

ಸ್ವಾಮೇರಾ ಭೂಮಿಗೋಂದು ನೆನೆಯೋ
ಈ ಊರ ಗ್ರಾಮದೇವರ ನೆನೆಯೋ
ಸಾವನಾ ನಿನಗ್ಯಾಕಂದ ಚರಣಾ
ಕಾಲ್ಗೆ ಕಿರುಗೆಜ್ಜೆ ಕಟ್ಟಿ ಹೂವಿನಂತಾ ತೇರ ಕಟ್ಟಿ
ತೇರೋ ತೇರು ಹೂವಿನ ತೇರಾ
ಇಂಕರಾಯರ ಮನೆಗಾ ಬಂದರಿಬ್ಬರ ಕಣ್ಣೀರೂ
ಏನಂತೆ ಕಣ್ಣೀರೂ ದೇವ ಕಣ್ಣೀರೂ
ಹಾಳಬಿತ್ತು ಹಾಳೇ ಕೆಲಗೆ ಜೋಡಿಬಿತ್ತು ಬಯಲಲ್ಲೀ
ಉಳ್ಳಲ್ಲಿ ಬಾವೋರಾ ಬಿದ್ರು ಮೋಡ ಬಯಲಲ್ಲೀ

❖

# ೧೮. ಸುಗ್ಗಿ ನಿಂತ ಮೇಲೆ ಹೇಳುವ ಪದ
## (ಅಂಗಳವಾರ ಆರತಿಯಾಗ್ಲಿ)

ಅಂಗಳವಾರ ಆರತಿಯಾಗ್ಲೀ ಅಂಗಳವಾರ ಸೀತಾನಗ್ಲೀ
ಳಿಂಗವಂತನಾಗ್ಲೀ ಲಿಂಗ ಪೂರ್ವಂತನಾಗ್ಲೀ ॥ ೧ ॥
ಕೆತ್ಯಾರೂರ ಮೈಲಾಗಿ ಕೊಕುಮದೀ ತಲಿಯಾಗಲೀ
ಜಾತಿಗೆ ಜಾತಿ ಕೂಡ್ಲೀ ಜಾತ್ಯವ್ರ ಅಪ್ಪಣಿ ಮಾಡ್ಲಿ ॥ ೨ ॥
ನಮ್ಮೂರ ಗ್ರಾಮದೇವರ ಅಪ್ಪಣಿಯಾಗ್ಲಿ
ವಡೆಯಾವಕ್ಲ್ ಹುಕುಮಾಗ್ಲೀ ॥ ೩ ॥
ಊರ ಗೌಡರ ಕೂಡಲಿ
ಸಣ್ಣವರ ದೊಡ್ಡರ ಕೂಡಲೀ ॥ ೪ ॥
ಯೇಳ್ಸೂ ಕೂತಂತಾ ಕಾರ್ಯೂ ಯೇಲಿಸಿಕೊಟ್ಟಂತಾ ಕಾರ್ಯ
ಊರ ಮೇಲೆ ಸುಬನಾಗ ಬರಳಯ್ಯಾ ॥ ೫ ॥

## ೧೯. ಪಾಂಡರೂ ಕಡನ ಹೊಡೆದಾರೇ

ಹೊಲಕೆ ಹೋಗವಾಂದಲೇ ಮೇಲಿನ ಹೊಲಕ್ಕೆ
ಕಣಗಲ ಮರ ಸೇರೇ ಪಾಂಡರೂ ಕಡಾನ ಹೊಡಿದಾರೇ ॥ ೧ ॥
ಕಡೂ ಬಿತ್ತು ಕಡ್ಲೇ ಬಯ್ಲಲ್ಲಿ ಅಲ್ಲೇ ಐನೂರ
ಹೋಲಕೆ ಹೋಗಬೇಕು ಪಾಂಡರೇ ಮಗನ ಹೊಲವಾಕೇ ॥ ೨ ॥
ಮಿಡಜೇಲ್ಲಿ ಸೇರಿ ಪಾಂಡರೂ ಮಿಗಾನ ಹೊಡೆದಾರೂ
ಮಿಗ ಹೋಗ ಬಿತ್ತೂ ಮಿಡಜಿಬಯ್ಲಲ್ಲೆ ಅಲ್ಲೆ ಲೆಸೂರು ॥ ೩ ॥

❖

## ೨೦. ಶಿವರಾತ್ರಿ ದಿನದಲ್ಲಿ (ಸುಗ್ಗಿ ಕೋಲಾಟದ ಪದ)

ಪಾಂಡೋರೊಂದು ಮುರುದಂಗಾ ಲಿಡೀದಾರೋ
ನಾರಾಣ ತಾಲಾವ ಹಿಡಿದಾನೋ ॥ ೧ ॥
ಪಾರಾವತಿ ಉರುಗೆಜ್ಜೇನ ಹಿಡಿದಾಲೋ
ಮೂಡಿನೊಂದು ಮುಂದಾಗೀ ನಡೆದಾರೋ ॥ ೨ ॥
ಮೂಡಿಗೊಂದು ಮೊಕುವಾಕೇ ನಿಂತಾರೋ
ಪಾಂಡೋರೊಂದು ಮುರುದಂಗಾನೇ ಹೊಡಿದಾರೋ ॥ ೩ ॥
ನಾರ್‍ಯಾಣ ತಾಲಾನೇ ಹೊಡೆದಾನೋ
ಪಾರಾವತಿ ಉರುಗೆಜ್ಜೇನ ಕಟ್ಟಗಿಲೋ ॥ ೪ ॥
ದೇವತೆಗೋಲ ಕುಂಜಾನೇ ಹಿಡಿದಾರೋ
ಬಲಿಂದರಾಯ ಹೊಯ್ಲನೇ ಹೊಡೆದಾನೋ ॥ ೫ ॥
ಯೇಲೂ ಹಗಲೂ ಯೇಲು ದಾತರೇ ಕೊನಿದಾರೋ
ನೋಡ ಗುಡ್ಡೇ ಗುಡ್ಡೆ ಕಲ್ಲೇ ಯೆಲ್ಲಾವ ನಡ್ಸುವಾಗೇ ॥ ೬ ॥

ಗುಡ್ಡೆ ಮೇನೆ ಮರುಗಾದಿ ಗೋಳೆಲ್ಲಾ
ನೋಡೆ ಹುಲ್ಲೂ ನೀರು ತಾವೇಯ ಬಿಡುವಾಗೇ ‖ ೭ ‖
ಆಕಾಶಕೆ ದುಗುಲೇಯ ಹಾರುವಾಗೇ
ಪಾರವೋತಿ ಪರುಮೇಶ್ವರ ಬರೂವಾಗೇ ‖ ೮ ‖
ನೋಡಾಕಾಶಕೆ ದುಗುಲೇಯ ಹಾರುವಾಗೇ
ನೋಡ ಕಣ್ಣೀಗೆ ಹೊಡಿಯಾರು ಶಿರುವಾಗೇ ‖ ೯ ‖
ನೋಡಿದುವೇ ನಮ್ಮಾಗೆ ತರವಲ್ಲೋ
ನೋಡಿದವು ನಮಗೆ ತರವಲ್ಲೇ ‖ ೧೦ ‖
ಗೌಡಾರೊಂದು ಬೊಮ್ಮಣ್ಣನ ಕರೆಬೇಕೂ
ನಾವ್ ಬಟ್ಟಕೊಂದು ಜೋಯಿಸಾನ ಕೇಲುಬೇಕೂ ‖ ೧೧ ‖
ನಾವ್ ಕಾಲಾಕೊಂದು ಸೂರಾಡುಲೆ ಬರುವಾದೋ
ನಾ ಶುಗ್ಗೀ ಯೇಲು ಶಿವರಾತುರಿ ದಿನುದಲ್ಲೀ ‖ ೧೨ ‖

- ಹೇಳಿದವರು: **ದೇವುಕುಪ್ಪ ಗೌಡ,** ನೆಲ್ಲಕೇರಿ ಮೂರೂರು. ದಿ: ೧೫/೧೧/೧೯೭೧

❖

# ೨೧. ಕಾರಿಕಾಯ ಕಡಜಲ ಕಾಯಾ

ಕಾರಿಕಾಯು ಕಡಜಲಕಾಯೂ ಕಡ್ದಾಟ ವಳ್ಳೇ
ಗಂಡಗ್ ಹೋಗೂ ಪುಂಡೆರಗೆಲ್ಲಾ ಹೊಡ್ದಾಟಾ ‖ ೧ ‖
ಏ ಪಾರಂಬಾ ಪಾರಂಬಾ ಪಾರಂಬಾ ದಿನದಲ್ಲಿ
ತಾಳೂಮದಲೀ ಕೊಣಿದಾಡೂ ಕೋಲೇ ‖ ೨ ‖
ಏ ತಟ್ಟಾನಾ ಕ್ಯಾದುಗಿ ಬುಟ್ಟಾನಾ ಮಲ್ಲುಗೀ
ಪಟ್ಟಣಕೆ ಬಾ ನಮ್ಮ ತುರಾಯಕೇ ‖ ೩ ‖
ಏ ಪಾರಂಬಾ ಪಾರಂಬಾ ಪಾರಂಬಾ ದಿನದಲಿ
ತಾಳೂಮದಲೀ ಕೊಣಿದಾಡೂ ಕೋಲೇ ‖ ೪ ‖

ಅಪ್ಪನಾಯ್ಕನ ಗುಡಿಯಾ ಮೇಲೊಂದ್ ಇಪ್ಪತ್ತೇಳ್ ನೇಗಿಲಾ
ಆಡಬಂದ್ ಬೇಡಬಂದ್ ಗಿರಿಯಾ ಸಂದಾನಾ ‖ ೫ ‖
ತಾರಕನಾ ಗುದ್ದೀಗ್ ವರ್ಸಕೊಂದ್ ನೇಗ್ಲಾ
ಆಡಬಂದ್ ಬೇಡಬಂದ್ ಗಿರಿಯಾ ಸಂದಾನಾ ‖ ೬ ‖
ಏ ಪಾರಂಬಾ ಪಾರಂಬಾ ಪಾರಂಬಾ ದಿನದಲಿ
ತಾಳೂಮದಲೀ ಕೊಣಿದಾಡೂ ಕೋಲೇ ‖ ೭ ‖
ಏ ಜಡನಾ ಜೋರ್‌ಕಾಯ್ ಗರೂಡಾ
ನೀ ಯೇನ ಕಂಡಿ ಮಾತಾನಾಡ್ದಿ ಗರೂಡಾ? ‖ ೮ ‖

❖

# ೧೧. ತಾನಾನಾ ತಂದ್ರನಾನಾ
## (ಕೆರ್‌ಯಾ ಯೇರಿಯ ಮೇನೇ)

ಕೆರ್‌ಯಾ ಯೇರಿಯ ಮೇನೇ ಕೆರ್‌ಯಯೇರಿಯ ಮೇನೇ
ಜಡ್ಯಾ ಕೊಂಬಿನ ಬಸವ ಹಾದಾಡಿ ಮೆಂದಾ ಹೊಡಿ ಹುಲ್ಲಾ ‖ ೧ ‖
ಹಾದಾಡಿ ಮೆಂದಾ ಹೊಡಿ ಹುಲ್ಲು ಬಸುವಪ್ಪ
ಕಡುಜೀಲ ಬನುಕೇ ನಡದೀದ ‖ ೨ ‖
ಕಡುಜೀಲ ಬನುದಲ್ಲಿ ಕಡುಜಾಣರ ಕಾವೀಲ
ಅಂಬೂ ಬಿಲ್ಲಿಟ್ಟೂ ಹೊಡದಾರೇ ತಾನs ‖ ೩ ‖
ಅಂಬೂ ಬಿಲ್ಲಿಟ್ಟೂ ಹೊಡಿದವ್ರೆ ಬಸುವಪ್ಪ
ಸಬಾ ಬಿದ್ದಿ ಭೂಮಿ ಮೇನೇ ‖ ೪ ‖
ಕಾಯಾ ಹೋಗಿತ ಸ್ವಾಮಿ ಬಳಿಗೇ | ಬಳೀಗೆ ಹೋಗುತನ
ಸ್ವಾಮ್ಯವ್ರು ದೇವಾರ ಪೂಜೆಗೆ ನಿಂತೀರೋ ತಾನಾನ ‖ ೫ ‖
'ಯೇನು ಬಂದೆ ಬಸುವಪ್ಪ? ಯೆಂತು ಬಂದೆ ಬಸುವಪ್ಪ
ಬಂದಾ ಕಾರಣ ನನುಗೇಳು' ತಾನಾನಾ ‖ ೬ ‖

'ಯೇನು ಅಲ್ಲ ಯೇಲು ಸ್ವಾಮಿ, ಯೆಂತು ಅಲ್ಲ ಯೇಲು ಸ್ವಾಮೀ
ನರುಲೋಕ ನಾನೂ ನಲುಗ್ಲಾರೇ' ತಾನಾನಾ ॥ ೭ ॥
'ಜಡ್ಯಾಕೊಂಬಿನ ಬಸವ ಕೆರ್ಯಾ ಯೇರಿಯ ಮೇನೇ
ಹಾರಾಡಿ ಮೆಂದೇ ಹೂಡಿಹುಲ್ಲಾ ತಾನಾನಾ । ಹೂಡಿಹುಲ್ಲ ಯೇಲು ಸ್ವಾಮಿ'
ಕಡುಜೀಲ ಬನುಕೇ ನಡುದೀನೇ ॥ ೮ ॥
ಕಡುಜೀಲ ಬನುದಲ್ಲಿ ಕಡುಜಾಣರು ಕಾವೀಲ
ಅಂಬೂ ಬಿಲ್ಲಟ್ಟೀ ಹೊಡುದಾರೂ ॥ ೯ ॥
ಅಂಬೂ ಬಿಲ್ಲಿಟ್ಟಿ ಹೋಡುದಾರೂ
'ಅಂಬೂ ಬಿಲ್ಲಿಟ್ಟೇ ಹೋಡುದಾರು ಯೆಲುಸ್ವಾಮೀ
ನನ ಸಬಾ ಬಿದ್ದಿತು ಭೂಮಿ ಮೇನೇ ॥ ೧೦ ॥
ಕಾಯಾ ಬಂದಿದೆ ಸ್ವಾಮಿ ಬಳಿಗೆ ಯೆಲು ಸ್ವಾಮೀ'
'ನಿನ್ನ ಮಾತೀಗ್ ನಾ ಮರುಳಾದನಲ್ಲ ಗರೂಡಾ
ವಳ್ಳೇ ದೇವರ ಕೋಲೂ ಉಳಿವನ ಕೋಲು ಕೋಲೂ' ॥ ೧೧ ॥
'ಬಚವನಾ ಬಚವನ್ನಿರೇ ಬಚವನಾ ಪಾದಕೆ ಚರಣನ್ನಿರೇ
ಮೇಲೆ ಮುತ್ತಿನ ಚತ್ತುಗೇ ಅದು ನಮ್ಮ ಕಲ್ಲಾ ಪಾಂಡವರಾ ಬಚುವಾ ॥ ೧೨ ॥
ನರಲೋಕ ನಾನೂ ಸಲ್ಗನಾರೇ ತಾನಾನಾ' । ಎಂದೇಳಿ
ಬಸಪ್ಪ ಬಿದ್ದಿ ಬಿದ್ದಿ ಹೊರುಳ್ತಾನೋ ॥ ೧೩ ॥
ಯೆಟ್ಟೊಂದು ಮಾತಾ ಹೇಳೀರು ಸ್ವಾಮ್ಯವ್ರು
ಬಸಪ್ಪ ಯೆಬ್ಬಿ ಕುಳ್‌ಸೀರು ತಾನಾ ॥ ೧೪ ॥
'ಕೇಳು ಕೇಳೂ ಬಸುವಪ್ಪ, ನೀ ಕೇಳೋ ಬಸುವಪ್ಪ
ನರಲೋಕ ನೀನೂ ಸಲ್ಗಬೇಕೂ ತಾನಾನಾ ॥ ೧೫ ॥
ಕಾಮಕ್ಕೆ ಜನಾ ಕೊಡುತೇ, ಮೇವುಕೆ ಹೊಲನಾ ಕೊಡುತೇ
ಇಂದೇ ತೋಡಿದ ಬಾವೀ, ಇಂದೇ ನೀರು ಬಂದೀ ॥ ೧೬ ॥
ರಂಬ್ಯಾರು ಮಿಂದೂ ಮಡಿಯುಟ್ಟೂ ಉಟ್ಟಿ । ಮಡಿಯಾ ಕಟ್ಟೀ
ಗೋವೀನಡುಗೀಗೇ ಅನುಕೂಲ' ॥ ೧೭ ॥

'ಗಂದಾಲಕ್ಷತ ತನ್ನಿ ಗಿಂಡೀಲುದಕವ ತನ್ನೀ
ಬಾಳೇಯ ಹಣ್ಣಾ ಸೋಲು ತನ್ನಿ । ಸೋಲು ತನ್ನೀ ನಮ್ಮನೀಯಾ ‖ ೧೮ ‖
ಬಸವೀನ ಪೂಜ್ಯಾ ಕನುಕೂಲ'
'ಕೊಟುಗೀಲಿ ಕೆಸುರಂದೀ ಬೆಟ್ಟದಲ್ಲಿರುಬೇಡ ‖ ೧೯ ‖
ಲಲ್ಲೈದದೆ ನಿನ್ನಾ ದುಸುಮಾನಾ
ಅಲ್ಲೇದರೆ ನಿನ್ನಾ ದುಸುಮಾನ ಸಿರಿಕೌಲೀ ‖ ೨೦ ‖
ಹೊತ್ತುಳ್ಳರೆ ಬಾರೇ ಕೊಟುಗೀಗೇ'
'ಕಾಳೀಗ್ ಗಂದಾ ಸೀಡೀ ಬೋಳೀಗಕ್ಸತ ನೀಡೀ ‖ ೨೧ ‖
ಹಾಳೀಯಾ ಕರುವೇನ ಬಲುವಿಂದ್ರಾ ಲಪ್ಪಯ್ಯಾ
ಚಿನ್ನದ ಬಟ್ಟಾ ಇಡೂಬಾರೋ' ‖ ೨೨ ‖
'ಹಿತ್ತಲ ಕಡುಗೀನಾ ಮೊಟ್ಟುತೀ ಹುಲ್ಲನೆ
ಮೆಟ್ಟದೇ ಬಾರೇ ಸೀರಿಕೌಲಿ ನಿನ್ನೊಡತೀ ‖ ೨೩ ‖
ಕಟ್ಟದೇ ಹಾಲಾ ಕರವದೂ
ಕೆಂದಲಾಕಳೆ ನಿನ್ನಾ ಭಾರಾ ಕೆಚ್ಚಲ ಕಂಡೂ ‖ ೨೪ ‖
ಕಂಡವರಾ ದೃಷ್ಟಿ ತರವಲ್ಲ । ತರುವಲ್ಲ ವಸುತಾಯೇ
ಹಿಂಡಿನ ಮರು ಸೇರೀ ಬರೂಬೇಕೇ ‖ ೨೫ ‖
ಹುಲ್ಲು ಸಾಲವಂದಿ ಕೊಟುಗೀಗೇ ಬರುದಿರಬೇಡಾ
ಹೊತ್ತುಳ್ಳೆ ಕೊಟ್ಟುಗೀಗೇ ಬರೂಬೇಕೇ ‖ ೨೬ ‖
ಬರುಬೇಕು ನಿನ್ನೊಡಿಯಾ ಹೊನ್ನಿಗೆ ವಂದ್ ಹೋರಿಯಾ ತರುಸೂವಾ
ಇಂದೇ ನಮ್ಮನಿಲೀ ಗೋವಿನಬ್ಬ ಅಂದೇ ‖ ೨೭ ‖
ಗೋವೀಗ್ ಹೋದ್ ವಡಿಯಾ ತಿರೂಗ್ಬಂದಾ
ಗೋವೀಗ್ ಹೋದ್ ವಡಿಯಾ ತಿರ್‌ಗೆಸುತ ಲಹ್ನ ಸೊಂಟಾನಾ ‖ ೨೮ ‖
ವ್ಯಾವಾಳದ ಗುರುತಾ ಅವಗಿಲ್ಲಾ
ಅತ್ತೀಯೆಲ್ಲಾ ಮೇನೇ ಹತಕೊಳ್ಗಕ್ಕಿಯನ್ನ ‖ ೨೯ ‖
ಹತ್ತೂ ನೂರಡಿಕೇ ಕೊಡೀಯೇಲೇ
ಹತ್ತೂ ನೂರಡಿಕೇ ಕೊಡೀಯೆಲೇ ಕೊರಳಿಗೆ ದಾಬ ‖ ೩೦ ‖

ಯೇಳೇ ಸಿರಿ ಕೌಲೀ ಉಳಿಲಕ್ಕು
ಆಲಾದೆಲೆಮೇಲೇ ಆರ್ ಕೊಳಗಕ್ಕಿ ರೊಟ್ಟೀ ॥ ೩೧ ॥
ಅರ್ ಹಿಂಗರ ಕೊನೇ ಪಡಿಯೆಲೇ ಕೊರಳಿಗೆ ಚಿನ್ನದ ಡಾಬಾ
'ಯೇಳೇ ಪಸು ತಾಯೇ ಉಣಲಕ್ಕೊ ॥ ೩೨ ॥
ನರಲೋಕ ನೀನೂ ಸಲ್ಗ್‌ಬೇಕೂ' ತಾನಾನಾ
'ಕಾವುಕೂ ಜನ್ರೂ ಬೇಡ ಮೇವಾಕೂ ಹೊಲವೂ ಬೇಡ ॥ ೩೩ ॥
ನರಲೋಕ ನಾನೂ ಸಲುಗ್ನಾರೇ' ತಾನಾನಾ
'ಕಟ್ಟುಕೆ ದಾಬಾ ಕೊಡುತೆ ಉಳವಲ್ಲೀ ಕೊಟ್ಟೆಗೆಯ ಕೊಡುತೇ ॥ ೩೪ ॥
ವರಸಕೆ ವಂದು ಹಬ್ಬ ನಿನುಗ್ ಕೊಡುತೇ' ತಾನಾನಾ
'ಕಟ್ಟುಕೆ ದಾಬಾ ಬೇಡ, ಉಳುಕೆ ಕೊಟುಗೀ ಬೇಡ ॥ ೩೫ ॥
ವರುಸಕೆ ವಂದೆ ಹಬ್ಬ ನನಗು ಬೇಡ' ತಾನಾನಾ
ಲಟ್ಟೊಂದು ಮಾತಾ ಹೇಳೂವಾ ತಾಕಿನ್ನೇ ॥ ೩೬ ॥
ಸ್ವಾಮ್ಯವ್ರಿಗೆ ಸಿಟ್ಟು ಬರುವದೂ ತಾನಾನಾ
ಸ್ವಾಮ್ಯವ್ರಿಗೆ ಸಿಟ್ಟು ಬಂದಿಲ ಯೇನು ಮಾಡಿರು ॥ ೩೭ ॥
ಬೆಳ್ಳಿಯ ಬೆತ್ತ ತಡುದವ್ರೇ । ಸ್ವಾಮ್ಯವ್ರು
ಬಸಪ್ಪಗೆ ಯೆಯ್ದು ಹೊಡುದೀರೂ ತಾನಾನಾ ॥ ೩೮ ॥
"ಕೇಳು ಕೇಳೂ ಬಸುವಪ್ಪ, ನೀ ಕೇಳೊ
ಬಸುವಪ್ಪ, ನಾ ಹೇಳೀದ ಮಾತಾ ಕೇಳೂಬೇಕೂ' ತಾನಾನಾ ॥ ೩೯ ॥
'ಕೇಳು ಕೇಳಿ ನನು ಸ್ವಾಮೀ, ನೀವೇ ಕೇಳಿ ನನು ಸ್ವಾಮಿ
ನರುಲೋಕ ನಾನೂ ಸಲುಗ್ ಬತ್ತೇ' ತಾನಾನಾ ॥ ೪೦ ॥
ಅಟ್ಟೊಂದು ಮಾತ ಹೇಳೀರು ಸ್ವಾಮೀರು
'ವಾಲಿ ಇಟ್ಟ ಅಕ್ಕ, ಕರಿಬಾರೇ ತಾನಾನಾ । ಬಸುವಪ್ಪ ॥ ೪೧ ॥
ಶೀರೀ ಉಟ್ಟ ಅಕ್ಕ ಕಟುನಾರೇ' ತಾನಾನಾ
ಅಟ್ಟೊಂದ್ ಮಾತಾ ಹೇಳಿಲರು ಸ್ವಾಮ್ಯಾವ್ರು
'ನರಲೋಕ ಸಲುಗೀ ಬರುಬೇಕೂ' ತಾನನಾ ॥ ೪೨ ॥

▪ ಹೇಳಿದವರು: **ಸೌ. ನಾಗಮ್ಮ ಮಾಸ್ತಿ ನಾಯ್ಕ**, ಹೆಗಡೆಯೂರು

# ೧೩. ಗುಡಿಯಾ ಸೃಂಗಾರ ಮಾಡಿದಾ

ಬೆಟ್ಟದ ಮೇಲೆ ಬೆನ್ನವಿಟ್ಟು ಬೇಲಿಮೇಲಿನ ಸೋರೆಬುರುಡೆ
ಯಾವ ಮರ ಮಾಡಾನಪ್ಪಾ ಲೋಲಕಿನ್ನುರಿಯಾ ॥ ೧ ॥
ಚೆಲುವಯ್ಯ ಚೆಲುವೋ ತಾನ ತಾನಿ ತನ್ನನ್ನಾ
ನಿನ್ನ ಮಾಯಾರಿ ಪೇಳಲೋ ಕೋಲನ್ನ ಕೋಲೇ ॥ ೨ ॥
ಆಚೆಗೆ ಆಲದ ಮರ ಈಚೇಗೆ ಗೋಳೀಮರ
ಸುತ್ತಾಕಿ ಬಾರೋ ಬಳಿಗಾರಾ ॥ ೩ ॥
ಮಲ್ಲಿಗೆ ಹೂವಿನಲ್ ಹೆಣಿದಿದ್ದ ಮಂಚ
ಅದು ನಮ ಗುರುಗಳು ವರಗುವ ಮಂಚ ॥ ೪ ॥
ದೇವ ಸೃಂಗಾರ ಮಾಡಿದಾ ಬಸವಣ್ಣ
ಗುಡಿಯಾ ಸೃಂಗಾರ ಮಾಡಿದಾ ॥ ೫ ॥
ಕ್ಯಾದೀಗೆ ಹೂವಿನಲ್ ಹೆಣದೀದ ಮಂಚ
ಅದು ನಮ ಸರಸ್ವತಿ ವರಗೂವ ಮಂಚ ॥ ೬ ॥
ದೇವ ಸೃಂಗಾರ ಮಾಡಿದಾ ಬಸವಣ್ಣ
ಗುಡಿಯಾ ಸೃಂಗಾರ ಮಾಡಿದಾ ॥ ೭ ॥

- ಹೇಳಿದವರು: **ಲಕ್ಷ್ಮಣ ರಾಮ ನಾಯ್ಕ, ಮಾಬ್ಲೇಶ್ವರ ಕರಿಯಾ ನಾಯ್ಕ**, ಮೆಣಸಿ
೦೨/೧೧/೭೦

❖

# ೧೪. ಮದುವೆಗೆ ಶೃಂಗಾರ ಗೈದ

## (ಕೋಲಾಟದ ಪದ)

ತಾನತನ್ನನಾಲೋ ತಂದನ್ನಾನಾ
ತನನ ತಂದನ್ನಾಲೋ ತಂದನ್ನಾನಾ ॥ ಪಲ್ಲವಿ ॥
ಯಜಮನ ಗೌಡಾ ರಾಯನಲ್ಲೋ (ಲಂಬೊ ರಾಯ)
ಮಗನಿಗೆ ಮದಿಯ ಮಾಡಬೇಕಂದ ॥ ೧ ॥
ಮಗನಿಗೆ ಮದಿಯ ಮಾಡಬೇಕಂದ
ಬಾಜರ ಮನೆಗೆ ಹೋಗವನಲ್ಲೋ
ಬಾಜರ ಮನೆಗೆ ಹೋಗವನಲ್ಲೋ
ಬಾಜರ ಹೆಣ್ಣ ಕೇಳವನಲ್ಲೋ ॥ ೨ ॥
ಬಾಜರ ಹೆಣ್ಣ ಕೇಳವಾಗೆ
ಹೆಣ್ಣ ಕೇಳಿ ಭರವಸೆ ಮಾಡಿ
ಹೆಣ್ಣ ಕೇಳಿ ಭರವಸೆ ಮಾಡಿ
ತಿರಗಿ ಮನೆಗೆ ಬರುವಾನಲ್ಲೋ ॥ ೩ ॥
ತಿರಗಿ ಮನೆಗೆ ಬಂದೆಕಂಡೇ
ಹೇಳುಲೂರಿಗೆ ಹೇಳಿಕೆ ಮಾಡಿ
ಹೇಳುಲೂರಿಗೆ ಹೇಳಿಕೆ ಮಾಡಿ
ಹೇಳದಿದ್ದ ಊರಿಗೆ ಡಂಗರ ಶರದ ॥ ೪ ॥
ದೂರಿನೂರಿಗೆ ಡಂಗರ ಹೋಡದಿ
ಕೂಡಿಸೂರಿಗೆ ವಾಲಿ ಬರೆದ
ಕೂಡಿಸೂರಿಗೆ ವಾಲಿ ಬರೆದ
ಬೇಳೆಬೆಲ್ಲ ಶಾಮನ ಕೂಡೇ ॥ ೫ ॥
ಬೇಳೆಬೆಲ್ಲ ಶಾಮನ ಕೂಡೇ

ಬಾಕಲ ಮುಂದೆ ತೋರಣಗೈದ
ಬಾಕಲ ಮುಂದೆ ತೋರಣಗೈದ
ಬಾಗಿಲಿಗೆ ಮುತ್ತೆಲ್ಲಾ ಸುರದ ॥ ೬ ॥
ಬಾಗಿಲಿಗೆ ಮುತ್ತೆಲ್ಲಾ ಸುರದ
ದೊಣಪೆಗೆ ತೋರಣವ ಗೈದ
ದೊಣಪೆಗೆ ತೋರಣವ ಗೈದ
ಮದಿವಿಗೆ ಶೃಂಗಾರಗೈದ (ಶುಂಗಾರ) ॥ ೭ ॥
ಯಜಮಾನಗೌಡ ರಾಜನಲ್ಲೋ
ಬಾವನೆಂಟರ ಸೇರುವಾಗೇ (ಸೇಯ್ಯು)
ಬಂದು ಬಳಗ ಸೆಯ್ಯುವಾಗೆ
ಬಂದು ಬಳಗ ಸೆಯ್ಯುವಾಗೆ ॥ ೮ ॥
ಮುತ್ತಿನ ಬಾಸಿಂಗ ಸೂಡೇ
ಯಜಮಾನಗೌಡ ರಾಜನಲ್ಲೋ
ಯಜಮಾನಗೌಡ ರಾಜನಲ್ಲೋ
ಮಗನಿಗೆ ಮದಿವೆಯ ಮಾಡಬೇಕೆಂದೆ
ದಿಬ್ಬಣ ಶೋವನ ಹೋಗುವಾಗೆ ॥ ೯ ॥
ದಿಬ್ಬಣ ಶೋವನ ಹೋಗುವಾಗೆ
ವಾದಿ ಪೇಪೆ ಹೊಡವರಲ್ಲೋ
ವಾದಿ ಪೇಪೆ ಹೊಡವರಲ್ಲೋ
ಮದ್ದುಗುಂಡು ಶುಡುವಾರಲ್ಲೋ ॥ ೧೦ ॥
ದರಕಿಕ್ರೇದರ ಮುರದಂಗಲ್ಲೋ
ಆಕಾಶಬಾಣ ಬಿಡುವಾಗ
ದರಕಿತ್ರೇದರ ಮುರದಂಗಲ್ಲೋ
ಹಗಲುಬತ್ತಿ ನೋಡಿದರೆ ॥ ೧೧ ॥
ಹಗಲು ಇರುಳುಲಾದರಲಾಗೇ

ಕೋಣನ ಕೊಂಬ ನೋಡಿದರೆ
ದರಕಿತ್ರೇದರ ಮುರದಂಗಲ್ಲೋ
ಯಜಮಾನಗೌಡ ರಾಜನಲ್ಲೋ ॥ ೧೧ ॥
ದಿಬ್ಬಣ ಶೋವನ ಹೋಗುವಾಗೇ
ಪಟ್ಟಣದೊಳಗಿನ ಪಟ್ಟಣಶೆಟ್ಟಿ
ದಂಡು ದಾವುಳಿ ಬರತಿದಂದೇ
ಪಟ್ಣ ಬಿಟ್ಟಾಕಿ ಓಡಿಹೋದ ॥ ೧೨ ॥

▪ ಹೇಳಿದವರು: **ದೇವು ನಾಗು ಗುನಗ, ಅಡಲೂರು**

❖

# ೨೫. ಕಟ್ಟಿದ ಕಾಲೀ ಆಣೀ ಪರದಾಣೀ ಕೋಲೇ

ಕಟ್ಟಿದ ಕಾಲೀ ಆಣೀ ಪರದಾಣೀ ಕೋಲೇ
ಕಟ್ಟಿದ ಕಾಲೀಯಾ ಪರದಾಣೀ ನನ್ನ ಒಡೆಯ
ಕಂತೂಕೂ ಹೋಗೂವಾ ಶೂಲಮ್ಮ ಕೋಲೇ ॥ ೧ ॥
ಊರ ವಂದೇ ಹತ್ತು ಮಂದಿಗೆ ಹೇಳೂಕೆಯಾ ಕೊಡುವಾನೋ ಮೀರಾಶೀ ಮಗನೇ
ಊರ ವಂದೇ ಹತ್ತು ಮಂದೀ ಶೈವಾಗೆ ಬರುವಾರೆ ಕೋಲೇ ॥ ೨ ॥
ಕೊಪ್ಪರದಾ ಈಳೇಯಾ ತಡದಾನೋ ಮೀರಾಶೀ ಮಗನೆ
ಕಾಯೋಂದ ಕರಿಯೆಲೆಯಾನು ತಡದಾನು ಮೀರಾಶೀ ಮಗನೇ ॥ ೩ ॥
ಗಂಟೆ ದೂಪಾವಾ ತಡದಾನೋ ಮೀರಾಶೀ ಮಗನೆ
ಅಕಲಿ ಮಗ ಮುಂದಾಗೀ ಮೀರಾಶೀ ಮಗನೆ ಹಿಂದಾಗೀ ॥ ೪ ॥
ಊರ ಹತ್ ಮಂದಿ ನೆಡಗಾಗೀ ನೆಡದಾರೋ ಕೋಲೇ
ನೆಡದಾರೋ ಬರಶೀಮಣ್ಣಿನಾ ಗುಡೇಗಾಗಿ ಕೋಲೇ ॥ ೫ ॥
ಕಾಯೊಂದ ಕರಿಯೆಲೆಯ ಯತವಾನು ಮೀರಾಶೀ ಮಗನೆ

ಗೆಂಟ್ಯೊಂದು ದೂಪ-ದೀಪವ ತೋರ್‌ಯಾನು ಮೀರಾಶೀ ಮಗನೇ ॥ ೬ ॥
ಕರದಿಂಗಳಕ ಕೋಲ ಕಡುದರಲೋ ಕೋಲೇ
ಕರದಿಂಗಳಕ ಕೋಲ ಕಡುದರೋ ಆನಾ ಕೋಲು ॥ ೭ ॥
ಬೆಳುದಂಗಳಕ್ಕೆ ಕೋಲ ಬೆಳುಶಿದರೋ ಕೋಲೇ
ಆಸಾರೀ ಮಗನಾ ಕೈಯಲಿ ಕೊಡುವಾರೋ ಕೋಲೇ ॥ ೮ ॥

- **ಕೆಲವು ಪದಗಳ ವಿವರಣೆ**

ಕೊಪ್ಪರ = ಕರ್ಪೂರ
ಮುಸ್ತಾಪಾ = ಬಿರುದು-ದುಸ್ತು
ಮದ್ದಲೆ = ನವಿಲಕುಂಚ (ಗಿರಿ)
ಹುಲಿಮಿರಗನ ಶೆಲ್ಲಿ (ಚರ್ಮ) ಮಿಗ = ಮೃಗ.

❖

# ೧೬. ಕೋಲೇಂಬುದ ಮೇಲೆನ್ನಿರೇ

ಕೋಲು ಕೋಲೆನ್ನ ಕೋಲೇ ರನ್ನದಾ
ಕೋಲಂಬುದ ಮೇಲನ್ನಿರೇ
ಹಡಗು ಹಳ್ಳಕೆ ಹೆಚ್ಚು ಗುಡುಗು ಮಳೆಗೆ ಹೆಚ್ಚು
ನಕ್ಷತ್ರ ಹೆಚ್ಚು ಗಗನಕ್ಕೆ । ರನ್ನದಾ ಕೋಲು ॥ ೧ ॥
ಆಶೇ ಆಡುವರ ಕಂಡೆ ದೋಶೇ ಸುಡುವರ ಕಂಡೆ
ದಾಶಪ್ಪ ಕಂಡೆ ಗಿರಿಮೇನೇ ॥ ೨ ॥
ಹಾಡಗೆ ಹಾಡಲಲ್ಲ ಬೇಡಗೆ ನಗೆಯಲ್ಲ
ಕೋಡ ನಿನ ಕೈಗೇ ಬಳೆಯಿಲ್ಲ । ರನ್ನದಾ ಕೋಲಾ ॥ ೩ ॥
ಹಕ್ಕೀಗೆ ಹಲ್ಲು ಇಲ್ಲ ಕಪ್ಪೇಗೆ ಕೆಮಿಯಿಲ್ಲ
ಹತ್ತು ಕಾಲೇಶಿಡೀಗೆ ತಲೆಯಿಲ್ಲ । ರನ್ನದಾ ಕೋಲು ॥ ೪ ॥
ಬಾಳೇಗೆ ಕೆಂಚವಿಲ್ಲ ಬಸಳೇಗೆ ಮುಳ್ಳುವಿಲ್ಲ
ಶೂಳೆ ಹೇಳಿದ ಮಾತೂ ನಿಜವಲ್ಲ । ರನ್ನದಾ ಕೋಲು ॥ ೫ ॥

- ಹೇಳಿದವರು: **ದೇವು ನಾಗು ಗುನಗ (ಗೌಡ)**, ಆಡಲೂರು

# ೧೭. ವೈನಾಸಿ ಕೋಲೇ

ದರೆ ಮೇನೆ ಮೀವದೂ ಎತ್ತು । ಅಲ್ಲಿಗೇ ಜಾರೀ ಬಿತ್ತು
ನೋವನ್ನು ಮೂಗ್ನಲ್ಲಿ ನತ್ತೂ । ಬನವಾಸೀ ಕೆರಿಯಲ್ಲಿ ಬಿತ್ತೂ ॥ ೧ ॥
ಬನವಾಸೀ ಕೆರಿಯಲ್ಲಿ ಬಿತ್ತೂ । ವೈನಾಸಿ ವೈನಾಸಿ ಕೋಲೇ
ಗಾಳೀ ಬೀರಾನೋಂದು ಮೇಲೇ ॥ ೨ ॥
ನಾಮ ನಾಮಕೇ ಬಸವಣ್ಣ । ತೇರೂ ತಂದೋ ನಾನಾ
ಕಾಲಕೆ ಮೊಗುದರೆ ಕರತಾವೋ । ಪಾವು ಬಂಗುದಾ ಬಿರತಾವೋ ॥ ೩ ॥
ಬತ್ತಾ ಮುಸಲ್ಮಾನರ ತಮ್ಮಾ । ನಾವು ಜೀವಲರುವಲತಂಟ ಇರುತನಕಾ
ಹಲ್ಲಾ ಮೇನೆ ಹೊಡೀಸುವೇ ಕೊಟ್ಟೆ ಕೊಳೂರ್‌ಗುಲಲೀಸುವೇ ॥ ೪ ॥
ಕೋಡೇ ಕೊಳಗದಲ್ಲಳೀಸುವೇ । ಜೋಡೀ ಗೋಣಿ ತುಂಬಿಸುವೇ
ಜೋಡೀ ಗೋಣೀ ತುಂಬೀಸುವೇ । ನೆತ್ತೀ ಮೇನೋಂದೇರಿಸುವೇ ॥ ೫ ॥
ನೆತ್ತೀ ಮೇನೊಂದಿರೀಸುವೇ । ಬೊಂಬೈಲಾಗಬೋಟಿ ತುಂಬಿಸುವೇ
ಬೊಂಬೈಲಾಗಬೋಟಿ ತುಂಬಿಸುವೆ । ಬೊಂಬೈತಾರನಾ ಓಡಿಸುವೇ ॥ ೬ ॥
ಬೊಂಬೈತಾರನು ಓಡಿಸುವೇ । ಕುಮಟೀ ಬಂದರದಲಿ ತಾಡಿಸುವೇ
ಕುಮಟೀ ಬಂದರದಲ್ಲಿ ತಾಗಿಸುವೇ । ನೆತ್ತೀ ಮೇನೊಂದೇರಿಸುವೇ ॥ ೭ ॥
ನೆತ್ತೀ ಮೇನೋಂದೇರೀಸುವೇ । ಬೊಂಬೈತಾರನು ಓಡಿಸುವೇ
ಬೊಂಬೈ ತಾರನು ಓಡಿಸುವೇ ತಾರಿನ ಪತ್ರನು ಕಳಗಿಸುವೇ ॥ ೮ ॥
(ಇಲ್ಲಿ ತಾರು ಕಾಗದಪತ್ರ ಎಂದಿದ್ದು)

▪ ಹೇಳಿದವರು: **ಅಪ್ಪು ನಾರಾಯಣ ಹರಕಂತ,** ಹೊಲನಗದ್ದೆ

❖

# ೧೮. ಕೋಲಣ್ಣಾ ಸಂಪಿಗೀಯಾ

ಕೋಲಣ್ಣಾ ಸಂಪುಗಿಯಾ ಕೋಲಣ್ಣಾ ಮಲ್ಲುಗೀಯಾ
ಕೆಂಪೇ ಜೋತರದಾ ರಸಬಾಳೀ
ಪೊನ್ನಾಗನ ಹಬ್ಬಕೆ ಹೋಗಿ ಕಯ್ಯಾವಾಗಿನ ಬಳಿಯೂ
ಕರಟೇಗಿಂದೂ ಕೇಳುಗೇ ಕುಂಟೆಮ್ಮೀ ಕಾಯುವನೇ
ಕಾದೇ ಹಿಂದೆ ಹೋಗವಾಗೇ ಬಳಿಯಾ ಜರಿದಾನಯ್ಯಾ
ಕೋಲಣ್ಣಾ ಸಂಪೂಗಿಯೂ ಕೋಲಣ್ಣಾ ಮಲ್ಲೂಗಿಯೂ
ಕೆಂಪೀ ಜೋತರದಾ ರಸಬಾಳೀ
ಪೊನ್ನಾಗನ ಹಬ್ಬಕೆ ಹೋಗೀ ನೆಡದಾ ತುಂಬೀಸಾಲೆನುಟ್ಟಿ
ಯಾವಾಗಿಂದ ಹರ್ಕಂಡಿಯೇ ನೆಡವಾ ಮೇಲಿನ ಸಾಲೇ
ಕಂಟಿಗಿಂದೂ ಕೆಳಗೇ ಕಂಟೆಮ್ಮೆ ಕಾಯುವನೇ
ಕಾದೀ ಹಿಂದೆ ಹೋಗುವಾಗೇ ಹರದಾನಯ್ಯಾ
ಕೋಲಣ್ಣಾ ಸಂಪುಗಿಯೂ ಕೋಲಣ್ಣಾ ಮಲ್ಲುಗಿಯೂ
ಕೆಂಪೀ ಜೋತಿರದಾ ರಸಬಾಳೇ
ಪೊನ್ನಾಗನ ಹಬ್ಬಕೆ ಹೋಗೀ ಹಣಿಯಾ ತುಂಬಾ ಗಂದಾನಿಟ್ಟು
ಯಾತಾರಿಂದಾ ಉದ್ರಕಂಡಿಯೇ ಹಣ್ಯಾಮೇನಿನ ಗಂದಾ?
ಕಂಟೇಗಿಯಾ ಕೆಳಗೇ ಕುಂಟೆಮ್ಮೀ ಕಾಯುವಾನೇ
ಕಾದೇ ಹಿಂದೆ ಹೋಗುವಾಗೇ ವಿದ್ಯಾನಯ್ಯಾ

- ಹೇಳಿದವರು: **ಜಟ್ಟಪ್ಪ ಗೋಯ್ದಪ್ಪ ನಾಯ್ಕ,** ೫೧, ತೇಗಿನಮಕ್ಕಿ,
**ಉಮೇಶ ಹೊನ್ನುಪಟಗಾರ.** ದಿನಾಂಕ ೧೬/೩/೦೮

## ೧೯. ಕೋಲು ಪದ (ವರಾ ಬೇಡ್ತ್ಯಲಾ ದಾರವಾಡಿ)

ವರಾಬೇಡ್ತ್ಯಲಾ ದಾರವಾಡಿ
ವರಾ ಬೇಡ್ತಿರಿ ತರಾಂತುರಿಂದಾ
ಕರಾರೆ ಮಾಡಾ ನೊಂದ ಇರಾನೆ ನಿಲ್‌ತಿರೀ ‖ ೧ ‖
ಬಡಲಾ ಬಕ್ತರ ಮೇನ್ ಅಂತಃಕರಣ ಇರಬೇಕು
ದೇಸಿಯಾತ್ರಿ ಮಾಡಬೇಕು
ಬಡವಾ ಶಿವಾನಲ್ಲಾ ಹಣವಿದ್ದ
ಸಾವ್ಕಾರ ಕೈ ಹಾಕಲೇ ‖ ೨ ‖

❖

## ೨೦. ಮತಿಯ ಪಾಲಿಸು

ಮತಿಯ ಪಾಲಿಸು ಯಮಗೆ ಶ್ರೀಗಣರಾಯಾ
ರುತಿ ಮಾಡ್ ಉಣಿಸು ಯಮಗೇ ‖ ೧ ‖
ಉದ್ದಿನ ವನದಲ್ಲಿ ಉದ್ದಿನ ಉಂಡೇ
ಎಳದಿಟ್ಟ ಬೆನುಮಯ್ಯ ಯೆಡಿ ಮಾಡ್ ಉಣಿಸು ಯಮಗೇ ‖ ೨ ‖
ಕಡಲೆಯ ವನದಲ್ಲಿ ಕಡಲೆಯ ಉಂಡೇ
ಕಡದಿಟ್ಟ ಬೆನುಮಯ್ಯಾ ಯಡಿಮಾಡಿ ಉಣಿಸು ಯಮಗೆ ‖ ೩ ‖
ರಾಗಿಯ ವನದಲ್ಲಿ ರಾಗಿಯ ಉಂಡೇ
ಎಡದಿಟ್ಟ ಬೆನುಮಯ್ಯ ಯೆಡಿ ಮಾಡುಣಿಸು ಯಮಗೇ ‖ ೪ ‖
ಮತಿಯ ಪಾಲಿಸು ಯಮಗೇ ಶ್ರೀ ಗಣರಾಯಾ
ಗೋದಿಯ ವನದಲ್ಲಿ ಗೋದಿಯ ಉಂಡೇ
ವಡದಿಟ್ಟ ಬೆನುಮಯ್ಯ ಯೆಡಿ ಮಾಡುಣಿಸು ಯಮಗೇ ‖ ೫ ‖
ಯೆಳ್ಳಿನ ವನದಲ್ಲಿ ಏಳ್ಳಿನ ಉಂಡೇ
ಯೆಡದಿಟ್ಟ ಬೆನುಮಯ್ಯ ಯೆಡಿ ಮಾಡುಣಿಸು ಯಮಗೇ ‖ ೬ ‖

▪ ಹೇಳಿದವರು: **ತುಂಬಳ್ಳಿ ಮೋಹನ ನಾಗು ಗೌಡ,** ೨೫ ವರ್ಷ

# ೩೧. ಸುತ್ತ ಗೋಟು ಪದ
## (ಜನನಿ ನಿನ್ನ ಸ್ಮರಣೆಯನ್ನು)

ಜನನಿ ನಿನ್ನ ಸ್ಮರಣೆಯನ್ನು ಮರೆಯಲಾರೆ
ಕರುಣಾನಿಧಿಗೆ ಕಯ ಮುಗಿದೆ ಹೇಳುವೆ ‖ ೧ ‖
ಕರುಣಾನಿಧಿಗೆ ಸ್ವಾಮಿ ದೇವನಿಗೆ
ಕಾಲು ಕವನ ದಾನ ಧರ್ಮ ಸೋಲು ಸುಂಗರವೋ ‖ ೨ ‖
ಕಾಲು ಕವನ ದಾನಧರ್ಮ ಸೋಲು ಸುಂಗರವೋ
ಮಂಗಲಾ ಜಯ ಮಂಗಲಾ ಜಯ ‖ ೩ ‖
ಮಂಗಲಾ ಜಯ ಪಾಂಡುರಂಗನಿಗೇ
ಕರುಣಾನಿಧಿಗೆ ಕಯ ಮುಗಿದೆ ಹೇಳುವೆ ‖ ೪ ‖

❖

# ೩೨. ಹೊಕ್ಕ ಕೋಲ ಪದ (ತವರು ನೋಡಲ ನಾ ಬಂದೇ)

ತವರೂ ನೋಡಾಲ ನಾ ಬಂದೇ
ತಾಯೇ ನೆನಪಿಗೆ ಕಣ್ಣಲಿ ನೀರ ತಂದೇ ‖ ೧ ‖
ಹುಟ್ಟೇಲೀನೊಳಗೆ ಹಾಲ ಕುಡಿಸಿದ್ದೇ
ತೊಟ್ಟಿಲೊಳಗೇ ಲಾಡಿ ಮೆರೆದಿದ್ದೆ ‖ ೨ ‖
ಅಣ್ಣಾ ನಮ್ಮ ಏನಾದರೂ
ಅತ್ತಗಿ ನಮ್ಮಾವಳಲ್ಲಾ ‖ ೩ ‖
ತಾಯೀಯ ಮನೆದೊಳಗೇ
ಹಾಲನ್ನು ಕುಡದು ಬೆಳದಿದ್ದೇ ‖ ೪ ‖
ಅಣ್ಣಾನ ಮನೆಯೊಳಗೇ
ಹಣಿನೀರು ನಮ್ಮಗೇ ಕೊಟ್ಟಿರೂ ‖ ೫ ‖

▪ ಹೇಳಿದವರು: ಗಣಪ ಸುಬ್ಬ ಗೌಡ, ೨೮ ವರ್ಷ

# ೩೩. ಕಂಡಿ ಕೋಲು (೧) (ದೇವರ ಕಾನಲ್ಲಿ)

ದೇವರ ಕಾನಲ್ಲಿ ಗೋರಂಬದೇತಕ್ಕಾ?
ನೇಗಲೇ ನೂರು ನೊಗನೂರೂ ॥ ೧ ॥
ನೇಗಲೇ ನೂರೂ ನೊಗನೂರಾದರೇ
ಹೂಡ ಬಿಟ್ಟಿತ್ತೇ ಲಯನೂರೂ ॥ ೨ ॥
ಹೂಡ ಬಿಟ್ಟಿತ್ತೇ ಲಯನೂರುಲಾದರೇ
ಎತ್ತಿಗೆ ನೀರೆಲ್ಲೀ ಕುಡುಸಿದಿಯೋ? ॥ ೩ ॥
ಎತ್ತಿಗೆ ನೀರೆಲ್ಲೀ ಕುಡುಸೀದೀಲಾದರೇ
ದೇವರ ಕೆರಿಯಲ್ಲಿ ಕುಡಸಿದೀನೋ ॥ ೪ ॥
ದೇವರ ಕೆರಿಯಲ್ಲಿ ಕುಡಸಿದೀಲಾದರೇ
ನೋಡೀ ಕಟ್ಟಣ್ಣಾ ನಮ್ಮೆತ್ತಾ ॥ ೫ ॥
ನೋಡೀ ಕಟ್ಟಣ್ಣಾ ನಮ್ಮೆತ್ತುಲಾದರೇ
ತಪ್ಪೀ ಬರತಿತ್ತೇ ಮದುಲಿಂಗಾ ॥ ೬ ॥
ತಪ್ಪೀ ಬರತಿತ್ತೇ ಮದುಲಿಂಗಾಲಾದರೇ
ಮದಲಿಂಗ ಜೋಕ್ಯೋ ಮಗ ಜೋಕ್ಯೋ ॥ ೭ ॥
ಮದಲಿಂಗ ಜೋಕ್ಯೋ ಮಗ ಜೋಕ್ಯೋಲಾದರೇ
ಹೋರೀ ಕೊಳ್ಳಿನಾ ಸರುಗೆಂಟೇ ॥ ೮ ॥
ಹೋರೀ ಕೊಳ್ಳೀನಾ ಸರುನುತ್ತೆಲಾದರೇ
ದೇವರಿಗೇ ಹೋಗೀ ಬರತೀವೋ ॥ ೯ ॥

❖

# ೩೪. ಕಂಡಿ ಕೋಲು (೨) (ಆಡೀ ಮಂಗಲವೇ)

ಆಡೀ ಮಂಗಲವೇ ನಮನಿಮಗೂ ಕೋಲೇ
ಆಡೀ ಮಂಗಲವೇ ನಮನಿಮಗೋ ‖ ನನ ಗೆಣಿಯಾ ‖ ೧ ‖
ಈ ಊರು ಕಿತ್ತೂರು ಬೇಲೂರೂ ಬೆಂಕಿನ ಕೋಡು
ಸೇದೂ ಬಾವಿಯ ನೀರು ಮೊಗುತಾರೋ ‖ ನನ ಗೆಣಿಯಾ ‖ ೨ ‖
ಆಡೋರೂ ನಮ್ಮಿಂದ ನೋಡೋರೂ ನಿಮ್ಮಿಂದ
ಆಡೀ ಬಿಟ್ಟುಂಗಿಲಾ ನಮನಿಮಗೂ ‖ ನನ ಗೆಣಿಯಾ ‖ ೩ ‖
ಕರಿಯಾ ಕಂಬಳಿ ಕೋಡು ನಾಗೀನ ಪಟ್ಟಿಯ ಕೋಡೂ
ಜರಿಯಾ ಪಾವು ಕೋಡು ಬಿಳಿಯಾ ಹಚ್ಚಡ ಕೋಡೂ ‖ ನನ ಗೆಣಿಯಾ ‖ ೪ ‖
ಕರಿಕಂಬ ಕಟ್ಟಿ ವಳಗೇ ಬರಬೇಕೂ ಕೋಲೇ
ಬೆಳುದಿಂಗಳ ಬೆಳಕಿನೊಳಗೆ ಬರುಬೇಕೋ ‖ ನನ ಗೆಣಿಯಾ ‖ ೫ ‖
ಉಂಗುಲುಂಗುಲ ನೋಡು ಉಂಗಾಲ ಬಪ್ಪ ನೋಡೂ
ಉಂಬಾಲ್ ಬಂದವಳ ಬಿಡಬ್ಯಾಡೋ ಕೋಲೇ ‖ ನನ ಗೆಣಿಯಾ ‖ ೬ ‖
ಕಡಗ ಕಡಗವ ನೋಡು ಕಡನಾಡಾಂಬರ ನೋಡೂ
ಕರದೀ ಬಂದವಳ ಕಯ್ಯಾ ಬಿಡಬ್ಯಾಡೋ ‖ ನನ ಗೆಣಿಯಾ ‖ ೭ ‖
ಸೀರೇ ಸೀರೆಯ ನೋಡು ಸೀರೆಯಾಂಬರ ನೋಡೂ
ಸೇರೀ ಬಂದವಳ ಕಯ್ಯಾ ಬಿಡಬ್ಯಾಡೋ ‖ ನನ ಗೆಣಿಯಾ ‖ ೮ ‖
ವಲ್ಲೀ ವಲ್ಲಿಯಾ ನೋಡು ವಲ್ಲೀಯ ಬರ ನೋಡೂ
ವಲಿದೀ ಬಂದವಳ ಕಯ್ಯಾ ಬಿಡಬ್ಯಾಡೋ ‖ ನನ ಗೆಣಿಯಾ ‖ ೯ ‖
ವಲದ ತೇರ ನೋಡು ವಲಿದ ಸತಿಯ ನೋಡೂ
ವಲದೀ ಬಂದ ಸತಿಯಾ ಬಿಡಬ್ಯಾಡೋ ‖ ನನ ಗೆಣೆಯಾ ‖ ೧೦ ‖

- ಹೇಳಿದವರು: **ಗಣಪ ಸುಬ್ಬಗೌಡ, ಕರೆವಕ್ಲ,** ೧೬ ವರ್ಷ, ಜಡ್ಡಿಗೆದ್ದೆ ತಾ: ಶಿರಸಿ (ಉ.ಕ.)

# ೩೫. ತೇರ ಕೋಲು (ಆಕಳು ಕಂಡಿರೇನೊಂದ)

ಆಕಳು ಕಂಡೀರೇನೊಂದ ‖ ಗೊಲ್ಲರ
ಆಕಳ ಕಂಡಿರೇನು?
ಆಕಳ ಪೀಕಳ ಕಾಣಲಿಲ್ಲಾ ‖ ೧ ‖
ಆಕಳ ಮಾರಿ ನೋಡಲಿಲ್ಲಾ
ಮೊಳ ಮೊಳ ಉದ್ದನ ಕೋಡವಿತ್ತು ‖ ೨ ‖
ಆಕಳ ಮೊಳ ಉದ್ದನ ಬಾಲವಿತ್ತು
ಅಡವಿ ಹುಲ್ಲಾ ಮೇಯೂತ್ತಿತ್ತೂ ‖ ೩ ‖
ಮಡುದಿ ನೀರು ಕುಡಿಯೂತಿತ್ತು
ಸಂಜೇ ಮುಂದೇ ಬರತಿತ್ತು ‖ ೪ ‖
ಆಕಳ ಕಂಡೀರೇನೊಂದ ‖ ಗೊಲ್ಲರ
ಆಕಳ ಕಂಡೀರೇನು? ‖ ೫ ‖

▪ ಹೇಳಿದವರು: ಶ್ರೀ ಮೋಹನ ನಾಗು ಗೌಡ

❖

# ೩೬. ತೇರು ಕೋಲು (ಎತ್ತು ಕಾಯೋ ತಮ್ಮ)

ಎತ್ತು ಕಾಯೋ ತಮ್ಮ ಮುತ್ತಿನ ಬಿಲ್ಲವನೇ
ಎತ್ತಿಗೇ ನೀರೆಲ್ಲೀ ಕೊಡಿಸಿದಿಯೋಲಾದರೇ
ದೇವರ ಕೇರಿಯಲ್ಲಿ ಕುಡಿಸೀಯೋ ಕೋಲೇ
ಕುಡಿಸಿದಿಯೋಲಾದಾರೆ ಎತ್ತನು
ಹೊಡೀರಣ್ಣಾ ಮಾರೀ ಬೈಲಿಗೆ ಕೋಲೇ ‖ ೧ ‖
ಕೋಣಾ ಕಾಯೋ ತಮ್ಮ ಮುತಿನ್ತ ಬಿಲ್ಲವನೇ
ಕೋಣಗೇ ನೀರೆಲ್ಲಿ ಕುಡಿಸಿದಿಯೋಲಾದರೇ
ದೇವರ ಕೆರೆಯಲ್ಲಿ ಕುಡಿಸೀಯೋ ಕೋಲೇ
ಕೋಣಾ ಹೊಡೀರಣ್ಣಾ ಮಾರೀ ಬೈಲಿಗೆ ಕೋಲೇ ‖ ೨ ‖
ಕುರಿಯ ಕಾಯೋ ತಮ್ಮಾ ಮುತ್ತಿನ ಬಿಲ್ಲವನೇ
ಕುರಿಗೆ ನೀರೆಲ್ಲಿ ಕುಡಿಸಿದಿಯೋಲಾದರೇ

ದೇವರ ಕೇರಿಯಲ್ಲಿ ಕುಡಿಸೀಯೋ ಕೋಲೇ
ಕುರಿಯ ಹೊಡೀರಣ್ಣಾ ಮಾರೀ ಬೈಲಿಗೇ ಕೋಲೇ ॥ ೩ ॥
ಕೋಳೀ ಕಾಯೋ ತಮ್ಮ ಮುತ್ತಿನ ಬಿಲ್ಲವನೇ
ಕೋಳೀಗೆ ನೀರೆಲ್ಲಿ ಕುಡಿಸಿದಿಯೋಲಾದರೇ
ದೇವರ ಕೆರಿಯಲ್ಲಿ ಕುಡಿಸೀಯೋ ಕೋಲೇ
ಕೋಳೀ ಹೊಡೀರಣ್ಣಾ ಮಾರೀ ದೇವರಿಗೇ ಕೋಲೇ ॥ ೪ ॥
ಹಂದಿ ಕಾಯೋ ತಮ್ಮ ಮುತ್ತಿನ ಬಿಲ್ಲವನೇ
ಹಂದಿಗೇ ನೀರೇಲ್ಲಿ ಕುಡಿಸಿದಿಯೋಲಾದರೇ
ದೇವರ ಕೇರಿಯಲ್ಲಿ ಕುಡಿಸೀಯೋ ಕೋಲೇ
ಹಂದಿ ಹೊಡಿರಣ್ಣಾ ಮಾರೀ ಬಯಲಿಗೇ ಕೋಲೇ ॥ ೫ ॥

▪ ಹೇಳಿದವರು: **ಮೋಹನ ನಾಗು ಗೌಡ**, ಮಂಜುಗುಣಿ

❖

## ೩೭. ಹೆಡಗಿ ಕೋಲು (ಸಾಲಕ್ಕೆ ಕೊನೆಯಿಲ್ಲ)

ಸಾಲಕ್ಕೆ ಕೊನೆಯಿಲ್ಲ ಆಲಕ್ಕೆ ನೆರುಳಲ್ಲಾ
ನಾನ್ ಹುಟ್ಟಿ ಮನಿಗೇ ಹೆಸುರಾದೆ ಕೋಲೇ ॥ ೧ ॥
ತಂದಿದ್ದರೆ ತವರಕ ಹೆಚ್ಚು ತಾಯಿದ್ದರೆ ಬಳಗೆ ಹೆಚ್ಚು
ಸಾವಿರಕ್ಕೆ ಹೆಚ್ಚು ಪತಿ ಪುರಷ ಕೋಲೇ ॥ ೨ ॥
ಮಾಣಿಕದ ಹರಳು ಮಗ ಹೆಚ್ಚುಲಾದರೆ
ಮಾಣಿಕದ ಹರಳು ಮಗ ಹೆಚ್ಚು ಕೋಲೇ ॥ ೩ ॥
ಹೆಣ್ಣು ಹುಟ್ಟಲಿ ಬೇಡಾ ಪರರೀಗೆ ಕೋಡು ಬೇಡಾ
ಹೆಣ್ಣು ಹೋಗುವಾಗೇ ಅಳುಬೇಡಾ ಕೋಲೇ ॥ ೪ ॥
ಕೊಟ್ಟಾ ಮನೆಗೆ ಹೆಸುರಾದು ಕೋಲೇ
ಪಡೀದsವಗೆ ಹೆಸುರಾ ತರುಬೇಡಾ
ತವರೀಗೊಂದ ಹೆಸುರಾ ತರುಬೇಡಾ ಕೋಲೇ ॥ ೫ ॥

▪ ಹೇಳಿದವರು: **ಗಣಪ ಗೌಡ**

## ೩೮. ಇಂಗಲೀಸು

ಬಾಸೆ ಕಲಿಯದೇ ಮೋಸವಾಯಿತೂ
ಇಂಗಲೀಸೂ ಬಿಂಗಲೀಸು ॥ ೧ ॥
ಗೋಡೆಗೆ ಇಂಗಲೀಸೂ ಮಾಡಿಗೆ ಇಂಗಲೀಸೂ
ಮೋಟರಿಗೆ ಇಂಗಲೀಸೂ ಬ್ಯಾಟ್ರಿಗೆ ಇಂಗಲೀಸೂ ॥ ೨ ॥
ಬಾಸೆ ಕಲಿಯದೇ ಮೋಸವಾಯಿತೂ
ಚಕ ಮಾಡವರ ಬಾಜಿಗೆ ಇಂಗಲೀಸೂ ॥ ೩ ॥
ಚಕ ಮಾಡವರ ಬಾಜಿಗೆ ಇಂಗಲೀಸೂ
ಇಂಗಲೀಸೂ ಬಿಂಗಲೀಸು ॥ ೪ ॥
ಬಾಸೆ ಕಲಿಯದೇ ಮೋಸವಾಯಿತೂ
ಗಣಬಣಂಬೂ ಗೆಂಟೆಗೆ ಇಂಗಲೀಸೂ
ಬಾಸೆ ಕಲಿಯದೇ ಮೋಸವಾಯಿತು ॥ ೫ ॥

▪ ಹೇಳಿದವರು: **ಮೋಹನ ನಾಗು ಗೌಡ,** ಮಂಜುಗುಣಿ

❖

## ೩೯. ಕಂಡೀ ಕೋಲು (೩) (ಇಂದಿನ ಪುರವದಲ್ಲಿ)

ಇಂದಿನ ಪುರವದಲ್ಲಿ ಹಬ್ಬ ಕಾಣೀ ತಂಗೀ
ಹೆಬ್ಬೂಲಿ ಚರ್ಮದಲ್ಲಿ ಸಿದ್ದ ಕಾಣೀ ತಾನಾ ॥ ೧ ॥
ಊರೂರು ತಿರ್ಗುತಾನೇ ಜೋಗೀಯಾಗೇ ತಂಗೀ
ಮನಿಯಾಗೆ ಕುಳುತಾನೆ ಯೋಗಿಯಂತೇ ತಾನಾ ॥ ೨ ॥
ನೀರು ಕಂಡಲ್ಲೀ ಸಾನ ಜಪವೇ ತಂಗೀ
ಹೊಳಿಯಾ ಕಂಡಲ್ಲೀ ಸಾನ ಜಪವೇ ತಾನ ॥ ೩ ॥

ಗುಡಿಯ ಕಂಡಲ್ಲಿ ಶಿವ ಪೂಜೆ ತಂಗೀ
ಕಯ್ಯಾಗೆ ನಾಗರ ಹೆಡೆ ಬೆತ್ತ ಕಾಣೀ ತಾನಾ ॥ ೪ ॥
ತಲೆ ಮೇನೇ ನಾಗರ ಹೆಡೆ ಬೆತ್ತ ಕಾಣೀ ತಂಗೀ
ಊರೂರು ತಿರ್ಗುತಾನೇ ಜೋಗಿಯಂತೆ ತಾನಾ ॥ ೫ ॥
ಮನಿಯಾಗೆ ಕುಳ್ಳತಾನೆ ಯೋಗಿಯಂತೆ ತಂಗೀ
ಇಂದೀನ ಪುರವದಲ್ಲಿ ಹಬ್ಬ ಕಾಣೀ ತಂಗೀ
ಹೆಬ್ಬೂಲಿ ಚರ್ಮದಲ್ಲಿ ಸಿದ್ಧ ತಾನಾ ॥ ೬ ॥

▪ ಹೇಳಿದವರು: **ಊರಬೈಲು ನಾಗು ತಿಮ್ಮ ಗೌಡಾ,** ೨೨ ವರ್ಷ

❖

# ೪೦. ಬಿದುರೇ ನೀನ್ಯಾರೀಗೊಲಿಯುವಳೇ

ಹುಟ್ಟುತ ಹುಲ್ಲನಾದೇ ಬೆಳೆಯೂತ ಬಿದುರನಾದೇ
ಬಿದುರೇ ನೀನ್ಯಾರಿಗೊಲಿಯುವಳೇ? ಬಿದುರೆನ್ನ ತಾಯೇ ॥ ೧ ॥
ಊರೂರು ಮುದುಕರಿಗೆಲ್ಲಾ ಊರೂವ ದೊಣ್ಣೆಯಾದೇ
ಬಿದುರೇ ನೀನ್ಯಾರಿಗೊಲಿಯುವಳೇ? ಬಿದುರೆನ್ನ ತಾಯೇ ॥ ೨ ॥
ಊರೂರು ನಾರಿಯರಿಗೆಲ್ಲಾ ಗೇರೂ ಗೆರಸೇಯಾದೇ
ಬಿದುರೇ ನೀನ್ಯಾರಿಗೊಲಿಯುವಳೇ? ಬಿದುರೆನ್ನ ತಾಯೇ ॥ ೩ ॥
ಮಂಜುಗುಣಿ ದೇವರಿಗೂ ಕಟ್ಟು ಪಾಲುಕಿಯಾದೇ
ಬಿದುರೇ ನೀನ್ಯಾರಿಗೊಲಿಯುವಳೇ? ಬಿದುರೆನ್ನಾ ತಾಯೇ ॥ ೪ ॥
ಹೊಲಿಯು ಬತ್ತಾವ ಕಟ್ಟಲು ಬಿದರು ಕಣಜಾವಾದೇ
ಬಿದುರೆ ನೀನ್ಯಾರಿಗೊಲಿಯುವಳೇ? ಬಿದುರೆನ್ನಾ ತಾಯೇ
ಬಿದುರೆ ನೀನ್ಯಾರಿಗೊಲಿಯುವಳೇ ಬಿದುರೆನ್ನಾ ತಾಯೇ ॥ ೫ ॥

▪ ಹೇಳಿದವರು: **ಗಣಪ ಸುಬ್ಬಗೌಡ,** ಮೊಳೇಸಾಲು

## ೪೧. ಮಲಕಿನ ಕೋಲು (ಒಬ್ಬರ ಬೇರೊಬ್ಬ ಸುತ್ತುದು)

ತೋಟಾ ತೋಟಾ ತಿರಗಿ ನಾನು
ಮೂರ ದುಂಡ ಮಲಿಗೀ ಹೂವ ತಂದೇ ॥ ೧ ॥
ದುಂಡ ಮಲಗೀ ಹೂವ ಮುಡಿಯೇ ಜಾಣೇ
ದುಂಡರಿ ಪಾರಾಗಿ ಹೋದ (ಮತ್ತೆ ತರಲು ಹೋದ) ॥ ೨ ॥
ಈಟೀ ತಿರ್‌ಗಿ ತಿರುಗಿ ನಾನು
ಮೂರ ಈಟಿಯ ದಾರೂವ ತಂದೇ ॥ ೩ ॥
ಈಟಿಯ ದಾರ್‌ದೂವ ಮುಡಿಯೇ ಜಾಣೇ
ಈಟರಿ ಪಾರಾಗಿ ಹೋದೇ ॥ ೪ ॥
ಕೇರೀ ಕೇರೀ ತಿರ್‌ಗಿ ನಾನು
ಮುರು ಕ್ವಾದಿಗೀರ ಹೂವ ತಂದೇ ॥ ೫ ॥
ಕ್ವಾದೀಗೀರ್ ಹೂವ ಮುಡಿಯೇ ಜಾಣೇ
ಕ್ಯಾದಗೀ ಪಾರಾಗಿ ಹೋದೇ ॥ ೬ ॥

▪ ಹೇಳಿದವರು: ಗಣಪ ಸುಬ್ಬಗೌಡ, ಮೊಳೇಸಾಲು

❖

## ೪೨. ಹೊಕ್ಕ ಕೋಲು (ಕಾಗಲ್ಲೊ ಕರಿಗಲ್ಲೊ)

ಕಾಗಲ್ಲೊ ಕರಿಗಲ್ಲೊ ಕಟ್ಟೆ ಮ್ಯಾಗಿನ ಕಲ್ಲೊ
ಆ ಕಲ್ಲೀನ ಹೆಸರೂ ಹೂಲಿಯಪ್ಪ್ಯಾ ॥ ೧ ॥
ಹುಲಿಯಪ್ಪನ ತಳವೇ ಗಡಿ ಮೇಲೆ ಕೋಲೇ
ಸುಂಗುಳೀ ಮರನಡಿಗೇ ನೆಲಿಗೊಟ್ಟಾ ಕೋಲೇ ॥ ೨ ॥
ಜಂಗುಮಾರ್ ಹುಡುಗೀ ಕಾವಲೂ ಕೋಲೇ
ಕಾಗಲ್ಲೊ ಕರಿಗಲ್ಲೊ ಕಟ್ಟೆ ಮ್ಯಾಗಿನ ಕಲ್ಲೊ
ಆ ಕಲ್ಲೀನ ಹೆಸರೂ ಹುಲಿಯಪ್ಪಾ ॥ ೩ ॥

▪ ಹೇಳಿದವರು: ಗಣಪ ಸುಬ್ಬಗೌಡ, ಮೊಳೇಸಾಲು

## ೪೩. ಕೋಲೂ ಸಿಂಗಾರಾಡುವಾ (ಕೋಲುಪದ)

ಹಕ್ಕೀ ವೋಡ್ಸೂ ನೆವನಾ ಮಾಡಿ ಕವಣೀ ಬೀಸಿದ್ಯಾ?
ಚಿಕ್ಕಾ ಹುಡಗೀ ಮಾತ ಕೇಳಿ ನಾಟಾ ಹೂಡಿದ್ಯಾ? ॥ ೧ ॥
ನವಲಾ ಬಂತೋ ನವಲಾ ನಮ ಸೋಗಿ ಬಣ್ಣದ ನವಲಾ
ನವಲಾ ಬಂದರೆ ಬರಲೀ ನಮ್ಮಗೆ ವಜ್ರದ ಬಣ್ಣದ ನವಲಾ ॥ ೨ ॥
ಸುಗ್ಗೀ ಸರ್ವತ್ತಾದಲ್ಲಿ ಹೂವಿನಂತಾ ಪಾರವಾ
ನಮ್ಮ ನಿಮ್ಮ ನಾಮದಿಂದ ಕೋಲ ಸಿಂಗಾರಾಡವಾ ॥ ೩ ॥
ಕರಿಯಾ, ಯೇರಿಯ ಮೇನೇ । ಬಿಳಿಯಾ ಸೋಳಿಯ ಕಂಡಾ
ಇಳಿಯಾ ಬೇಕಂದಾ ಕೊದುರಿಯಾ । ಲಾ ಜಾಣಾ
ವಲ್ಲೀ ಬೀಸದರಾ ಕರಿಯಂದಾ ॥ ೪ ॥

❖

## ೪೪. ಕೋಲು ಕೋಲೇ ಕೋಲೆನ್ನ ಕೋಲೇ

ಕೋಲು ಕೋಲೇ ಕೋಲೆನ್ನ ಕೋಲೇ
ಕೋಲು ಕೋಲೇ ಕೋಲೆನ್ನ ಕೋಲೇ ॥ ೧ ॥
ಪಾಂಡೋರ ಮಕ್ಕಳೂ ಆಡೂವ ಕೋಲೇ
ಕೊಡಚೀನ ಕೋಲು ದ್ಯೇವರ ಕೋಲೇ ॥ ೨ ॥
ಪಾಂಡೋರ ಮಕ್ಕಳೂ ಆಡೂವ ಕೋಲೇ
ಕೋಲು ಕೋಲೇ ಕೋಲೆನ್ನ ಕೋಲೇ ॥ ೩ ॥
ಕೊಡಚೀನೂ ಕೋಲೂ ಕೋಲೇಲೋ ಕೋಲೇ
ಕೋಲು ಕೋಲೇ ಕೋಲೆನ್ನ ಕೋಲೇ ॥ ೪ ॥
ಮಾನೋರ ಮಕ್ಕಳೂ ಆಡೂವ ಕೋಲೇ
ಪಾಂಡೋರು ಮಕ್ಕಳೂ ಆಡೂವ ಕೋಲೇ ॥ ೫ ॥

ಕೋಲು ಕೋಲೇ ಕೋಲೆನ್ನ ಕೋಲೇ
ಬೆಳ್ಳಿವಂದು ಕೋಲೇ ಕೋಲೆನ್ನ ಕೋಲೇ ॥ ೬ ॥
ಕೈಲೋರಾಡೂವ ಕೋಲೆನ್ನಾ ಕೋಲೇ
ಕನಸೀಲೊಂದು ಕೋಲೇ ಕೋಲೆನ್ನ ಕೋಲೇ ॥ ೭ ॥

▪ ಹೇಳಿದವರು: ಬುದ್ದು ಗೌಡ, ಬಿಣಗಾ

❖

# ೪೫. ಶಿರಿಯ ರಾಮರಾಡೂ ಕೋಲೇಲೋ ದ್ಯೇವರೇ

ಶಿರಿಯ ರಾಮರಾಡೂ ಕೋಲೇಲೋ ದ್ಯೇವರೇ
ಕೋಲು ಕೋಲೇಲೋ ಅದು ಕೋಲೇ ದ್ಯೇವರೇ ॥ ೧ ॥
ಶಿನ್ನದೊಂದು ಕೋಲೇಲೋ ಅದು ಕೋಲೇ ದ್ಯೇವರೇ
ರಾಜದೇವಿಂದ್ರಾಡೂ ಕೋಲೇಲೋ ದ್ಯೇವರೇ ॥ ೨ ॥
ಕೋಲು ಕೋಲೇ ಕೋಲೇಲೋ ದ್ಯೇವರೇ
ಹೊಂಗಿನೊಂದು ಕೋಲೇಲೋ ಅದು ಕೋಲೇ ದ್ಯೇವರೇ ॥ ೩ ॥
ಕೋಲು ಕೋಲೇ ಕೋಲೇಲೋ ದ್ಯೇವರೇ
ಕೃಷ್ಣದ್ಯೇವರಾಡೂ ಕೋಲೇಲೋ ದ್ಯೇವರೇ ॥ ೪ ॥
ವಜ್ಜಿರೊಂದು ಕೋಲೇಲೋ ಅದು ಕೋಲೇ ದ್ಯೇವರೇ
ದೀವರ ಮಕ್ಕಳಾಡೂ ಕೋಲೇಲೋ ದ್ಯೇವರೇ ॥ ೫ ॥
ಹಿಂದೀನೊಂದು ಕೋಲೇಲೋ ಅದು ಕೋಲೇ ದ್ಯೇವರೇ
ಗಾಡಿಗ್ರ ಮಕ್ಕಳಾಡೂ ಕೋಲೇಲೋ ದ್ಯೇವರೆ
ಕಾರೆವಂದು ಕೋಲೇಲೋ ಅದು ಕೋಲೇ ದ್ಯೇವರೇ ॥ ೬ ॥

▪ ಹೇಳಿದವರು: ಬುದ್ದು ಗೌಡ, ಬಿಣಗಾ

# ೪೬. ಕೋಲು ಕೋಲೆನ್ನ ಕೋಲೇ

## (ಅತ್ತೆ ಹೆಸ್ರು ಹರ್‌ಕು ಚಾಪೆ)

ಅತ್ತೆ ಹೆಸ್ರು ಹರ್‌ಕು ಚಾಪೆ ಮಾವನ ಹೆಸ್ರು ಮಂಚದ ಕಾಲೂ
ಕೋಲು ಕೋಲೆನ್ನ ಕೋಲೇ ॥ ೧ ॥
ರನ್ನದಾ ಬಣ್ಣದಾ ಚೆನ್ನದಾ ಬೆದುರಿನ
ಕೋಲು ಕೋಲೆನ್ನ ಕೋಲೇ ॥ ೨ ॥
ಚೆನ್ನದಾ ರನ್ನದಾ ಬಣ್ಣದಾ ಬೆದುರಿನ
ಕೋಲು ಕೋಲೆನ್ನ ಕೋಲೇ ॥ ೩ ॥
ಸುರಸೂರಂಬು ಹೆಣ್ಣೆ ಸುರಗೀ ಮೊಗ ಮುಚ್ಚಿ
ಕೇಳಿದೆಯೇ ಹೆಣ್ಣೇ ಹೊಸ ಸುದ್ದೀ? ರನ್ನದಾ
ಕೋಲು ಕೋಲೆನ್ನ ಕೋಲೇ ॥ ೪ ॥
ರನ್ನದಾ ಬಣ್ಣದಾ ಚೆನ್ನದಾ ಬೆದುರಿನ
ಕೋಲು ಕೋಲೆನ್ನ ಕೋಲೇ ॥ ೫ ॥
ಉದ್ದೀನ ಗೆದ್ದೀಯಲ್ಲಿ ಉದ್ದೀಸಿ ಬೇಲಿಯ ಮಾಡಿ
ವಳ್ಳೋಳ್ಳೆ ಪುಂಡಿರ ಏಳು ಮಾಡೀ । ಹೆರು ಮಾಡೀ ಕುಮಟಿಯ
ಕಾಗದ ಬಂದ್ ಹೊರ್‌ತೂ ಬಿಡುಬೇಡೀ
ರನ್ನದಾ ಬಣ್ಣದಾ ಚೆನ್ನದಾ ಬೆದುರಿನ
ಕೋಲು ಕೋಲೆನ್ನ ಕೋಲೇ ॥ ೬ ॥

▪ ಹೇಳಿದವರು: **ದಿ. ಪರಮೇಶ್ವರಿ ತಂದೆ ಯಂಕಣ್ಣ ಅಂಬಿಗ,** ೨೬/೦೨/೭೦

# ೪೭. ಬಾರೇ ಬಾರೇ ನನ್ನವಳೇ

ಆ ಹೂವ ಈ ಹೂವ ಕೊಯ್ಯುವಳೇ
ಆ ದಂಡಿ ಈ ದಂಡೀ ಕಟ್ಟುವಳೇ ‖ ೧ ‖
ಆ ಹೂವ ಈ ಹೂವ ಮುಡಿಯುವಳೇ
ಆ ಕುಣಿತ ಈ ಕುಣಿತ ಕೊಣಿಯುವಳೇ ‖ ೨ ‖
ಮಲಕೂ ಮಲಕೂ ನಡಿಯುವಳೇ
ಆ ಕುಣಿತ ಈ ಕುಣಿತ ಕೊಣಿಯುವಳೇ ‖ ೩ ‖
ಅತ್ತಾ ಇತ್ತಾ ನೋಡುವಳೇ
ಬಾರೇ ಬಾರೇ ನನ್ನವಳೇ ‖ ೪ ‖

▪ ಹೇಳಿದವರು: ದಿ. ಸಣಕೂಸ ಆಗೇರ

❖

# ೪೮. ಕೋಲಾಟದ ತುಂಡು ಪದಗಳು (೧)
## (ಹೂಂಗಾ ತರೋ ಮಲ್ಲಗೀರಣ್ಣಾ)

ಹೂಂಗಾ ತರೋ ಮಲ್ಲಿಗೀರಣ್ಣಾ
ಹೂಂಗಿನ ಬೆಲಿಯೇನೇಲ್ ಕೇಳ್ ಬಾರ್ ಚಿನ್ನಾ
ಕೋಲು ಕೋಲನ್ನ ಕೋಲ ಕೋಲನ್ನಾ
ಕೋಲು ಕೋಲು ಕೋಲನ್ನ ‖ ೧ ‖
ಸಂಪುಗೆ ಸಂಪುಗೆ ಯಾವೂರ ಸಂಪುಗೇ?
ದ್ಯೇವರಿಗೆ ಹೋಗ್ ಸಂಪಿಗೇ
ದ್ಯೇವರಿಗೆ ಹೋಗ್ ಮಿಂದಾ ಮಕ್ಳ
ತುರ್ವ ನೋಡ್ ಸಂಪಿಗೇ
ಕ್ಯೇದುಗೇ ಕ್ಯೇದುಗೇ ಯಾತರ ಕ್ಯಾದುಗೇ
ದೇವರಿಗೆ ಹೋಗ್ವ ಕ್ಯಾದುಗೇ ‖ ೨ ‖

ಮಲ್ಲುಗೇ ಮಲ್ಲುಗೇ ಯಾತರ ಮಲ್ಲುಗೇ
ದೇವರಿಗೆ ಹೋಗ್ ಮಿಂದಾ ಮಕ್ಳ
ತುರವ ನೋಡ್ ಮಲ್ಲುಗೇ
ಮಲ್ಲುಗೇ ಮಲ್ಲುಗೇ ಯಾತರ ಮಲ್ಲುಗೇ
ದ್ಯೇವರಿಗೆ ಹೋಗ್ವ ಮಲ್ಲುಗೇ
ದೇವರಿಗೆ ಹೋಗ್ವ ಮಲ್ಲುಗೇ ॥ ೩ ॥

ಅಳ್ಳದ ಹೂಗು ಬೆಳ್ಳಗಾದ್ರೆ ಮಲ್ಲಿಗೇನ ಮಾಡ್ವದೂ
ಚೆಲ್ವಿ ಗಂಡ ಚೆಲ್ವಿನಾದ್ರೆ ಜಾನಕೇನ್ ಸಲ್ವರೋ
ಕೋಲು ಕೋಲನ್ನ ಕೋಲ ಕೋಲನ್ನಾ
ಕೋಲು ಕೋಲು ಕೋಲು ಕೋಲನ್ನಾ ॥ ೪ ॥

ರೋಟ್ಟಿಯ ತಿಂದೆ ನೋಡೂ ತುಪ್ಪದಿಂದಾ
ನಾನ ಸೋಳಪ್ಪುದೂ ನಾನ್ ರೊಕ್ಕದಿಂದಾ
ಬಚುವನಾ ಬಚುವನ್ನಿರೇ ಬಚವನಾ
ಪಾದಕೆ ಚರಣೆನ್ನಿರೇ ॥ ೫ ॥

ಮೇನೆ ಮುತ್ತಿನ ಚತುಗೇ ಆದ ನನ್ನ
ಕಲ್ಲಾ ಪಾಂಡೋರ ಬಚುವೇ
ಕೋಲು ಕೋಲನ್ನ ಕೋಲ ಕೋಲನ್ನಾ
ಕೋಲು ಕೋಲು ಕೋಲು ಕೋಲನ್ನಾ ॥ ೬ ॥

ಕಾರಿಕಾಯಿ ಕಡಜಲಕಾಯಿ ಹೊಡೆದಾಟ
ವಳ್ಳೆ ಗಂಡಗೆ ಹೋಗು ಪುಂಡಿಗ್ಯೆಲ್ಲ ಹೊಡೆದಾಟ
ಕೋಲು ಕೋಲನ್ನ ಕೋಲ ಕೋಲನ್ನಾ
ಕೋಲು ಕೋಲು ಕೋಲು ಕೋಲನ್ನಾ ॥ ೭ ॥

❖

# ೪೯. ಕೋಲು ಪದ (ಬೆಂಕಿಗೆ ಬಂದ)

ಬೆಂಕಿಗೆ ಬಂದ ನಮನ ಮಾಡ್ದ
ಕಂಚನ ರೊಕ್ಕ ಕಯ್ಯಲ್ ಕೊಟ್ಟೆ
ಡುಂಕ ವೈಕೊಂಡ ಹೋದನೇ ‖ ೧ ‖

ಸೊಣ್ಣಕ್ಕೆ ಬಂದ ನಮನ ಮಾಡ್ದ
ಕಂಚನ ರೊಕ್ಕ ಕಯ್ಯಲ್ ಕೊಟ್ಟೆ
ಡುಂಕ ವೈಕೊಂಡ್ ಹೋದನೇ ‖ ೨ ‖

ನೀರಿಗೆ ಬಂದಾ ನಮನ ಮಾಡ್ದ
ಕಂಚನ ರೊಕ್ಕ ಕಯ್ಯಲ್ ಕೊಟ್ಟೆ
ಡುಂಕ ವೈಕೊಂಡ್ ಹೋದನೇ ‖ ೩ ‖

ಅಡಕೊಳ್ಕ್ ಬಂದಾ ನಮನ ಮಾಡ್ದ
ಕಂಚನ ರೊಕ್ಕ ಕಯ್ಯಲ್ ಕೊಟ್ಟೆ
ಡುಂಕ ವೈಕೊಂಡ್ ಹೋದನೇ ‖ ೪ ‖

ಕರ್ಯ ಕಾಗನ ಶೀರೀ ಉಟ್ಟಿಕೊಂಡ್
ಕೊಂಡಿ ಮೇನ್ ಶಿಟ್ಟು ಇಟ್ಟಿಕೊಂಡಿ
ಬಂದಳವ್ವಾ ಬಂದಳೇ
ಸೂಲಗಿರತೀ ಬಂದಳೇ ‖ ೫ ‖

❖

# ೫೦. ಗಿಡ್ಡೀ ಗಿಡ್ಡೀ ವಳಗ್ಯೇನ್ ಮಾಡ್ತೀ

ಗಿಡ್ಡೀ ಗಿಡ್ಡೀ ವಳಗ್ಯೇನ್ ಮಾಡ್ತೀ?
ಕಡ್ಲೀ ಹೊರಿತಿ ನನಗ್ಯೆಯ್ಡು ಕೊಡವೇ? ‖ ೧ ‖
ನಮ್ಮತೆ ಬವ್ದೇ ಅತ್ಯಲ್ ಹೋಗಿದೇ?
ಹೂಂಗ್ನ ಮಾಳಕೆ ಹೋಗಿದೇ ‖ ೨ ‖

ಗಂಡ ಯಲ್ಗೆ ಹೋಗ್ಯ?
ಹೂಂಗ್ನ ಮಾಳಕೆ ಹೋಗಿನೇ ॥ ೩ ॥
ಮೈದ್ನೆಲ್ಲಿಗ್ ಹೋಗಿನೆ?
ಗೆದ್ದೀಯ ಮಾಳಕೆ ಹೋಗಿನೇ ॥ ೪ ॥

❖

# ೫೧. ಕೋಲಾಟದ ತುಂಡು ಪದಗಳು

## (ಚಿತ್ತಾರ ಬೊಂಬೆ)

ಚಿತ್ತಾರ ಬೊಂಬೆ ನೀ ಯೆತ್ತಲಾಗ್ ಹೋದೇ?
ಯೆತ್ತಲಾಗಿ ಹೋದಾರೇನು? ಚಿತ್ತ ನಿನ ಮೇನೇ ॥ ೧ ॥
ಮೋವದಾ ಬೊಂಬೆ ನೀ, ಮೋಸ ಮಾಡಿ ಹೋದೇ
ಮೋಸ ಮಾಡಿ ಹೋದರೇನು? ದೇಸ ನಿನ್ನ ಮೇನೆ ॥ ೨ ॥
ಗೊಂಡಿ ಹೂಗಿಂನ ಮಾಲೀ, ಫುಂಡಿರ ತುರಬೀನ ಮೇನೇ
ನೋಡ್ ನನ್ ಕೋಲ್ ಪದನಾ ಚೆನ್ನದ ದುರೂಗದ ಮೇನೇ ॥ ೩ ॥
ಅಲ್ ಬಿತ್ ಮೂಗ್ತೀ ಇಲ್ ಬಿತ್ ಮೂಗ್ತೀ
ಬಾವನೋರ ಮೊಕ ನೋಡಿ ಬಾವಿಲ್ ಬಿತ್ತು ಮೂಗ್ತೀ ॥ ೪ ॥
ಅಕ್ನಮಂಡೆ ಸೋಗ್ ಮಂಡೆ ನನ್ನ ಮಂಡೆ ಗುಜರ್‌ಮಂಡೆ
ಅಕ್ನ ಬಿಟ್ ಹೋಗೋ ಬಾವಾ ನನ ತಕ ಹೋಗೋ ॥ ೫ ॥
ಫುಂಡಗಾರ ಹಣ್ಣೇ
ಉದುರಂಗೀ ಹೂಂಗೇ ಉದರೇ ನನ್ನಂಗಳಕೇ ॥ ೬ ॥
ಚದುರರು ಚೂಡುವರು ಬರುಹೊತ್ತು ಮಲ್ಲುಗಿ ಹೊಂಗೇ
ಉದುರೇ ನನ್ನ ಸಾಲೀ ಸೆರಗೀಗೆ ॥ ೭ ॥

▪ ಹೇಳಿದವರು: **ತಿಮ್ಮು ಮಾರಿ ನಾಯ್ಕ**, ತಾರಿಬಾಗಿಲ, ಹೆಗಡೆ ಊರು

# ೫೧. ಕೋಲಾಟದ ತುಂಡು ಪದಗಳು
## (ಕೊಳೂಲಾಟ ಕೊಳೂಲಾಟ)

ಕೊಳೂಲಾಟ ಕೊಳೂಲಾಟ ಮ್ಯಾಲೆ ತೆಂಗಿನ ತೋಟ
ಸಾರಂಗದಾಟ ನವಿಲಾಟ ಕೋಲೇ ‖ ೧ ‖
ಕೊಳೂಲಾಟ ಕೊಳೂಲಾಟ ಮ್ಯಾಲೆ ಬಾಳೆಯ ತೋಟಾ
ಸಾರಂಗದಾಟ ನವಿಲಾಟ ಕೋಲೇ ‖ ೨ ‖
ಕೊಳೂಲಾಟ ಕೊಳೂಲಾಟ ಮ್ಯಾಲೆ ಅಡಕೆಯ ತೋಟಾ
ಸಾರಂಗದಾಟ ನವಿಲಾಟ ಕೋಲೇ ‖ ೩ ‖
ನವಿಲಾಟ ನವಿಲಾಟ ಮ್ಯಾಲೆ ನಿಂಬೆಯ ತೋಟಾ
ಸಾರಂಗದಾಟ ಸಾರಂಗದಾಟ ಕೋಲೇ ‖ ೪ ‖

❖

# ೫೨. ಸುಳಿದೊಡೆದು ಹುಳಿದೊಡೆದು ದಿಟ್ಟಿ

ಸುಳಿದೊಡೆದೂ ದಿಟ್ಟಿ ಹೆಽರುಽಗಾಽಗಽಲೀಽಽ ತಾನಾ
ದಿಟ್ಟಿ ಹೇರುಗಾಗಲಿ ಹಡೆದಳೇ ತಾಯೀ ‖ ೧ ‖
ಹೋದರ್ ಬಂದರ ದಿಟ್ಟಿ ವಽಲಽಗಾಗಲೀ ತಂದಾ ತಾನಾ
ಆಚೆಮನೆ ಲಕ್ಕದಿರು ಇಚೆಮನೆ ತಂಗದೀರು ಓಡೋಡಿ ಬನ್ನೀರೋ ‖ ೨ ‖
ನಮ್ಮ ತಂಗೀ ಬಂದಾದಂದಿ ಹಾನಾ ತನ್ನಿರೋ
ಹಾನ ತನ್ನೀರಮ್ಮ ಬೋಕಳ ತನ್ನೀರೋ ‖ ೩ ‖
ಯಂದೆ ಬಳ್ಗೀರವಾ ಹಿಂದೆ ಚಲ್ಲೀರವಾ
ಕೋಲು ರನ್ನದಾ ಕೋಲೇ ‖ ೪ ‖

## ೫೪. ಕತೆಹೇಳ್ ಕತೆಹೇಳ್ ಯತ್ ಹಿಡಿತು

ಕತೆಹೇಳ್ ಕತೆಹೇಳ್ ಯತ್ ಹಿಡಿತು
ಬದ್ಕ ಬಾಲೆಲ್ಲಾ ನಾಯ ನೆರಿಪಾಲಾಯ್ತು ‖ ೧ ‖
ಮೊಲಕೊಂದೋನ್ ಶತ್ ಮೂರ್ ತಿಂಗಲಾಯ್ತು
ಮೊನ್ನಾಗ ಕೊಂದ್ ಮೊಲ ಇವತ್ ಪಲ್ದ್‌ಯಾಯ್ತು ‖ ೨ ‖

❖

## ೫೫. ಕರೆಯಾಲೇನೇ?

ಉಲಪೀ ಸುಂಗಾ ಬಿಟ್ಟೇದಾನೆ
ಜನಪಿನ ಪಂಜೀ ಉಟ್ಟೇದಾನೆ
ಕೈಲ ತೊವಲ ಕಟ್ಟಿಯದಾನೆ ‖ ೧ ‖
ವಾನರ್ಾಸ ಹಚ್ಚಿಯದಾನೆ
ಯೇನ ಮಾಡಲೇ ಅಕ್ಕಾ ನಾನ್
ಕರೆಯಾಲೇನೆ? ‖ ೨ ‖
ಕರದರ ಬಂದಾನೇನೇ?
ಬಂದರೆ ಜೋಲೀ ಹೋಡಿಯಾಲೇನೆ?
ಯೇನಾರ ಅಂದಾನೇನೇ? ‖ ೩ ‖

❖

# ೫೬. ಆವಾಗೆ ತೀರ್ಸುನೋ

ಕಲ್ಲ ಕಡದೇನೋ ಬಾವಾ?
ಕಬ್ಬ ನೆಟ್ಟೇ ನಾ
ಬೆಳಗಲ ಕಡದೇನೋ ಬಾವಾ? ॥ ೧ ॥
ಬಾವೀ ತೋಡದ್ಯೇನೋ?
ಕಬ್ಬಾ ನೆಟ್ಟೇನೇ ನಾನಾ
ಕಬ್ಬಾ ನೆಟ್ಟೇ ನಾ ॥ ೨ ॥
ಕಬ್ಬಾ ಕಡಕೊಡೋ ಬಾವಾ
ಕಬ್ಬಾ ಕಡಕೋಡೋ
ಇವತ್ತಾ ಕಬ್ಬಾ ಕಡಕೊಟ್ಟ ಮ್ಯಾಲ ॥ ೩ ॥
ಯಾವಾಗ ತೀರಿಸುವೇ ಮೈದ್ನಿ?
ಯಾವಾಗ ತೀರಿಸೂವೆ?
ಮುಂದೇ ಮೊಲೆ ಬರುವಾಗೇ ॥ ೪ ॥
ಹಿಂದೇ ತುರಬಾ ಕಟ್ಟೂವಾಗೇ
ಆವಾಗೇ ತೀರ್ಸುನೋ ಬಾವಾ
ಅವಾಗೆ ತೀರ್ಸುನೋ ॥ 5 ॥

❖

# ೫೭. ಕೋಲು ಮೇಲೆನ್ನಿರೇ

ಕೋಲು ಮೇಲೆನ್ನಿರೇ
ಅಜ್ಜ ಅಜ್ಜಿಗೆ ಲೇಸು । ಗೆಜ್ಜೆ ಕಾಲಿಗೆ ಲೇಸು
ಮಜ್ಜಿಗೆ ಅನ್ನ ಉಣಲೇಸು । ರನ್ನದಾ
ಕೋಲು ಕೋಲೆನ್ನಿರೇ ॥ ಕೋಲು ರನ್ನದಾ ಕೋಲು ಕೋಲೆನ್ನಿರೆ ॥ ೧ ॥

# ೫೮. ಚಂದ್ರ ಮೊಕಿ ಮಲ್ಲಿಗೆ

ಚಂದ್ರ ಮೊಕಿ ಮಲ್ಲಿಗೇ ಉದ್ರೇನಮ್ಮ ಅಂಗಳಕೇ
ಚದ್ರ್ಯವರು ಚಂಡಾಡೀ ಬರುವಗೇ ‖ ಮಲ್ಲುಗೆ
ಉದ್ರೆ ನನ ಸಾಲೀ ಸೆರಗೀಗೆ

❖

# ೫೯. ಅಲಪ (ಆಲಾಪ) (ಶ್ವಾಮಿಯ ನೆನದೇನೋ)

('ಹೌದೋ' ಹಾಕೂ ಕೊಬ್ಬ ಬೇಕಾತೀದು)
ತಂದನ್ನೇ ತಾನೋ ತಾನನಂದೇ ನಂದಾನ
ತಂದನ್ನೇ ತಾನೋ ತಾನನಾನಾ । ।೧‖
ಶ್ವಾಮಿಯ ನೆನದೇನೋ ಭೂಮಿಯ ನೆನದೇನೋ
ಶ್ವಾಮಿ ಶಂಕರನಾ ನೆನದೇನೋ ‖ ನೆನದರೆ ಭೂಮಿಯ ತಾಯೇ,
ಬಲ್ಲವ್ರೇ ನಿಮ್ಮ ನೆನೆದೇನೋ ‖ ೨ ‖
ಬಲ್ಲವ್ರ ನೆನದೇನೋ ಬಿಲ್ಲವ್ರ ನೆನದೇನೋ
ಹೆತ್ತಾ ಹೆರಿಯವ್ರಾ ನೆನದೇನೋ
ಹೆತ್ತಾ ಹೆರಿಯವ್ರಾ ನೆನದಲ್ ಬೂಮಲ ತಾಯೇ ‖ ೩ ‖
ಹುತ್ತಿನ ಮೇಲಿರುವಾ ದರಣೀಯೋ ‖ ನಾಗಪ್ಪಾನೇ
ತಪ್ಪದೇ ಬಾರೋ ಬೆಲೆಮುಂದೇ ‖ ನಾಗಪ್ಪಾನೇ
ನಾಗಮಂಡಲವಾ ಗೆಯುಕೊಡುವೆ ‖ ೪ ‖

❖

## ೭೦. ಗದ್ಯ (ಯೆಲಾ ಯೆಲಾ ವಂದೊಂದ)

ಯೆಲಾ ಯೆಲಾ ವಂದೊಂದ ಕಾಲದಲ್ಲಿ ಹಂದಿ ಹುಲಿಯಾಗಿ
ಹೆಗ್ಗನ ಬಂದೀ ಶುಲದೋದವಯ್ಯಾ, ಯೆಂತುಂಡರು
ಯೆತುಂಡರೇನಬೇಡೀ ಕುಂತಿನಂದನರೂ ತರತಂದಿ
ಉಂಡಿದಾರೇ ಮಿಕ್ಕವರೂ ಹಾಗುಂಡರೂ ದಮ್ಮಯ್ಯಾ
ಜೋರು ಕಲ್ಲಿನಲ್ಲೀ ಶಾವಿರಾ ಮೊಲಗಳು
ಬಿದ್ದು ಹೊಯ್ದಾಡಿದರೆ ಆ ಕಲ್ಲ ನೀರು ಕೊಂಬುವರೇನು
ಹಚಿಕಲ್ಲು ಅಡುಗಾಗೀ ಬಿದಿಕಲ್ಲು ಮೇನಾಗೀ
ಗಚ್ಚಗಿಚ್ಚನೇ ಹಚಿಮೆಂಚು ಅರವವೆಲಿಲಿ
ಅಶನೋಡೆಂದ ಚರವೇಜನ (ಸರ್ವಜ್ಞ) ॥ ೧ ॥
ಚಲದಲಿ ಪಾಂಡವ್ರು ಮೇಲು ಈ ಕತಿಯಲ್, ಹನುಮಂತ ಮೇಲು
ಬಕ್ತಿಯಲ್ ರಾಮದೇವರೆ ಮೇಲೂ ಮೂರುಲೋಕ
ಕೊಂಡಾಡ್ವಲ್ಲೀ, ಕೃಷ್ಣಮೂರುತಿಯೇ ತಾನೆ ಮೇಲೂ
ಹೇಳಿದ್ನಯ್ಯಾ ತಂದನೋ ತಾನಾ ॥ ೨ ॥

❖

## ೭೧. ಕೋಲಾಟದ ಪದಗಳು (ಕಂದ ನಂದನೋ)

ಕಂದ ನಂದನೋ ತಾನೆ ನಂದನಂದನಾ
ತಂದನ್ನೆ ತಾನೋ ತಾನಾನಾ ॥ ಪಲ್ಲವಿ ॥
ಜಾಗಡಿ (ಶೀತೆಗೆ ಎಂದು)
ಶೀತೆಗೋ ಶಿರರಾಮಾಗೋ ಮಕ್ಕಳಿಲ್ಲಾ ಮಾದೇವಾ
ಹುಟ್ಟಾದೆರಡು ಚಿಕ್ಕಮಕ್ಕಳು ತಾನೋ ತಂದನಾನಾ
ತಂದನೆನಾನೊ ತಾನಾನಂದೆ ತಾನತಾನ
ತಂದನೆನಾನೊ ತಾನಾನಂದೆ ತನನಾನಾ ॥ ೧ ॥

ಹಶವಿಲ್ಲಾದೋನಕೀಗೇ ನೇವಾಳಾದಾ ಬಲಗಟ್ಟು
ಸೊಸಮುದ್ದೂ ತೊಳಸುವಾ ತಾನನಂದನಾನಾ
ತಾನೆ ತಾನ ತಂದನಾ ತಾನಾ ತಂದನ್ನಾ ॥ ೨ ॥
ತುಂಬೇ ಹೂಗು ಕೊಯ್ದೀ ಬೆಲ್ಲೀ ಹರಮಣ ತುಂಬೀ
ಯಾವಾ ದ್ಯಾವರಿಗೇ ಕಳಗೂವಾ ॥ ೩ ॥
ನೆಟ್ಟನೆಟ್ಟ ಮಲ್ಲುಗೇ ನೆಟ್ಟಿದಂತ ಸಂಪೂಗೇ
ನೆಟ್ಟಾಂಗೆ ಬಾ ನಮ್ಮ ತುರಾಯಕೇ ॥ ೪ ॥

▪ ಹೇಳಿದವರು: **ತೊಲಶು ಹಮ್ಮು ಗೌಡ,** ಉಂಚಗಿ, ೮೫ ವರ್ಷ

❖

# ೬೨. ನಿನ್ನ ಹಾಲು ಬಲು ರುಚಿ

ಯಾವ ಹೆಣ್ಣಿಗಿಂದೂ ಜೇನು ಸಕ್ಕುರಿ ಮೇಲೂ
ವಾಲಾಡಿ ಬೆಳವಾ ರಸಬಾಳೇ | ಕಬ್ಬಿನ ಕೋಲು
ತಾಯೇ ನಿನ್ನ ಹಾಲೂ ಬಲು ರುಚಿ ॥
(ಅವರು ಕೋಲುಪದದ ಕಣಿಯ ಹಾಡುಗಳು ಎಂದಿದ್ದಾಳೆ)

▪ ಹೇಳಿದವರು: **ದಿ. ಗೊಯ್ದು ಕಣಿಯಾ ಮುಕ್ರಿ,** ಬಗ್ಗೋಣ, ೨೪/೨/೭೩

❖

# ೬೩. ಸಣ್ಣ ನಾಮದ ಹುಡಗಾ

ಯಾವ ನಾಡ ದೊರಿಯು ಬಂದು ರಸ್ತಿಯೊಳಗ ಮನಿಯಗಟ್ಟಿ
ಮುತ್ತಿನ ಚೆಂಡಾಡ್ವನಲ್ಲ, ಸಣ್ಣ ನಾಮದ ಹುಡುಗಾ ॥ ೧ ॥
ವೋಣಿ ವೋಣಿ ತಿರುಗುತಾನಾ ಜೋಡಕಿನ್ನುರೀ ಬಾರ್‌ಸು ಜಾಣ
ನಮ್ಮ ವೋಣೀಗೆ ಯಾಕ ಬರಲಿಲ್ಲಾ? ಸಣ್ಣ ನಾಮದ ಹುಡುಗಾ ॥ ೨ ॥

▪ ಹೇಳಿದವರು: **ದಿ. ನಾಗಿ ಮುಕ್ರಿ,** ಹೊನಗದ್ದೆ

# ೭೪. ಸುಗ್ಗಿ ಪದಗಳು: ತುಂಡು ಪದಗಳು

## (ಹೋಗತಿರಲೋ ಬಲಿಗಾರಣ್ಣಾ)

ಹೋಗತಿರಲೋ ಬಲಿಗಾರಣ್ಣಾ
ಹೋಗತರ ಬೇಲೆ ಮೇಲೆ
ಬಿಲ್ಲಿಗೆ ಮೂರ ಶಿನ್ನ ॥ ೧ ॥
ಚಂದ್ರ ನೋಡಿ ಚಾವಡಿ ನೀರ
ಮುದ್ದುರಾಮ ನನ್ನ ಮತ್ತುಗಾರ ॥ ೨ ॥
ಅತ್ತೆ ಮಾವ್ನ ಧರ್ಮದಿಂದಿ
ಹತ್ತು ಹೊನ್ನೊಂದ್ ಮೂಗತಿಯಾ ॥ ೩ ॥
ಬಾವಿಲ್ ಮೊಕ ನೋಡ್ಗಂಡು
ಅಲ್ಲೆ ಬಿದ್ದ ಮೂಗುತಿಯ
ಸತ್ತ ಗುರುವಿನ ಕೋಲೇ ॥ ೪ ॥
ಸೊಬಗುಣಿ ರಣದ
ಹತ್ತನ ಬೇಳೆ ಕಂಡ್ರು ಗುಬ್ಬಿಗೆ
ಸರುಣ ಸರುಣ ಸರುಣಂಬೊ ಸ್ವಾಮಿಗೆ
ಬೋಳಿ ದೇವರಿಗೆ ಸರುಣ ಬಾರೋ ॥ ೫ ॥
ಸರುಣ ಸರುಣ ಸರುಣಂಬ ಗುರುವಿಗೆ
ಗುರುವಿನ ಪಾದಕ್ಕೆ ಸರುಣೆಂಬರೋ ॥ ೬ ॥
ಮಾರುತಿ ಒಳಬೊಬ್ರು ದೇವರು
ಲೇರುತಿ ಒಳ ಬಾಗ್ಲ ಬೀರರು ॥ ೭ ॥
ಜುಟ್ಟೆ ಜುಟ್ಟಾಲ್ ಮೈ ಜೋಡಿನಂದಿ
ನಂದು ನಿಂದು ಹೊಯ್ಲ ಮೈ ಜೋಡಿನಂದಿ ॥ ೮ ॥
ಸತ್ಯವುಳ್ಳ ಜಟ್ಗ ದೇವ ಯತ್ತ ನೋಡಿಬಂದೆವು
ಯತ್ತಗೋಡಿ ಬಂದೆವು
ಯತ್ತಣ ದಾಸಫಲ ಸುಗ್ಗಿ ಕೋಲ್ ಬಂದವು ॥ ೯ ॥

## ೭೫. ಕೋಲು ಪದ (ಕೆಮ್ಮಣ್ಣ ಗುಡ್ಡಕೇ)

ಕೆಮ್ಮಣ್ಣ ಗುಡ್ಡಕೇ ಗೊಲ್ಲ ದನಗಳ ಬಿಟ್ಟಿದನೋ
ಕೆಮ್ಮಣ ರಾಜಾರ ಮಗಳು ನೀರಿಗೆ ಬಂದಿದಳೋ ॥ ೧ ॥
ಹೊರಸು ಬಾರಯ್ಯ ಗೊಲ್ಲ । ನೆಗಹು ಬಾರಯ್ಯಾ ।
ಹೆಣ್ಣೆ ಕೊಡವನು ಹೊರಿಸಿದರೇ ನನಗೇನು ಕೊಡುವಿಯೇ ॥ ೨ ॥
ನಮ್ಮ ಕೇರಿಗೆ ಬಂದಿದ್ದಾರೇ ಯೆಮ್ಮೆದಾನ ಕೊಡವೇನೇ
ನಿಮ್ಮಲ್ಲಿರುವ ಯೆಮ್ಮೆದಾನ ನಮ್ಮಲ್ಲೇನು ಕಡಮೇನೇ ॥ ೩ ॥
ನಮ್ಮ ಕೇರಿಗೆ ಬಂದಿದ್ದರೇ ಆಕಳದಾನ ಕೊಡವೇನೇ
ನಿಮ್ಮಲ್ಲಿರುವ ಆಕಳದಾನ ನಮ್ಮಲ್ಲೇನು ಕಡಮೇನೇ ॥ ೪ ॥
ಹೊರಸು ಬಾರಯ್ಯ ಗೊಲ್ಲ । ನೆಗಹು ಬಾರಯ್ಯಾ
ನಮ್ಮ ಕೇರಿಗೆ ಬಂದಿದ್ದಾದ್ರೆ ಬೆಳ್ಳಿದಾನ ಕೊಡುವೇನೂ
ನಿಮ್ಮಲ್ಲಿರುವ ಬೆಳ್ಳಿದಾನ ನಮ್ಮಲ್ಲೇನು ಕಡಮೇನೇ ॥ ೫ ॥

❖

## ೭೬. ನವಲ ಕಂಡೀರಾ ನವಲ

ನವಲ ಕಂಡೀರಾ ನಮ್ಮ ನವಲ ಕಂಡೀರ್ಯಾ?
ಕಡಲೀಯಾ ಹೊಲದಾಗ ಇತ್ತ ನಮ್ಮ ನವಲು ॥ ೧ ॥
ನವಲ ಕಂಡೀರ್ಯಾ ನಮ್ಮ ನವಲ ಕಂಡೀರ್ಯಾ?
ಗೋದಿಯಾ ಹೊಲದಾಗ ಇತ್ತ ನಮ್ಮ ನವಲು
ನವಲ ಕಂಡೀರಾ ನಮ್ಮ ನವಲ ಕಂಡೀರ್ಯಾ? ॥ ೨ ॥
ರಾಗೀಯ ಹೊಲದಾಗ ಇತ್ತ ನಮ್ಮ ನವಲು
ನವಲ ಕಂಡೀರಾ ನಮ್ಮ ನವಲ ಕಂಡೀರ್ಯಾ ॥ ೩ ॥
ಜೋಳಾದ ಹೊಲದಾಗ ಇತ್ತ ನಮ್ಮ ನವಲ
ನವಲ ಕಂಡೀರಾ ನಮ್ಮ ನವಲ ಕಂಡೀರ್ಯಾ? ॥ ೪ ॥

## ೬೭. ಬಳ್ಳೋಳ್ಳಿ

ಕನಕಾ ಬಾದುರ ಬೆಂಗಳೂರು
ಮನಕ ಮೆಚ್ಚಿದ ಬಳ್ಳೊಳ್ಳಿ
ಹತ್ತಾನೆ ಹರದಿ ಸೊಪ್ಪಿಗ್ ವಗ್ರಣಿಯಾದ ಬಳ್ಳೊಳ್ಳಿ
ಹೌದಲೇ ಬಳ್ಳೊಳ್ಳೀ ಸಾಂಬರಲೇ ಬಳ್ಳೊಳ್ಳಿ ॥ ೧ ॥
ಕನಕಾ ಬಾದುರ ಬೆಂಗಳೂರು
ಮನಕ ಮೆಚ್ಚಿದ ಬಳ್ಳೊಳ್ಳಿ
ಹಗ್ಗದಂತಾ ನುಗ್ಗೀಕಾಯಿಗೆ ವಗ್ರಣಿಯಾದ ಬಳ್ಳೊಳ್ಳಿ
ಹೌದಲೇ ಬಳ್ಳೋಳ್ಳಿ ಸಂಬಾರಲೇ ಬಳ್ಳೊಳ್ಳೀ ॥ ೨ ॥
ಹತ್ತ ದಿನದ ಬಾಣಂತಿಗೇ ಪತ್ಯವಾದೆ ಬಳ್ಳೊಳ್ಳಿ
ಕನಕಾ ಬಾದುರ ಬೆಂಗಳೂರು
ಮನಕ ಮೆಚ್ಚಿದ ಬಳ್ಳೊಳ್ಳಿ ॥ ೩ ॥

❖

## ೬೮. ಸಿದ್ದಾರೋಡಿ ಸದ್ಗುರು

ತಪ್ಪಿತು ತಾಗಿತು ಮತ್ತೊರಿ ಬಂದಿತು
ನಿಲ್ಲೊ ಸಲ್ಲದಾದರೆ ನಿಲ್ಲದಾದಿತು
ಸಿದ್ದಾರೋಡಿ ಸದ್ಗುರು ಉದ್ದಾರದೆ ನಿಮ್ಮಿಂದ್
ವಿದ್ಯಾ ಪಡೆದು ನಾನು ಉದ್ದಾರದೆ ನಿಮ್ಮಿಂದಾ
ಅಂಗಾರಾದು ಬಸವಾ
ಸಿದ್ದಾರೋಡ ಸದ್ಗುರು ಸಲುಗಾರೆ
ದೇಸಕೆಲಾ ಬಂದಾರೂ ಸಂಗ್ಯಾತಾ
ಸಿದ್ದಾರೋಡಿನ ಜೋಳಗೀ ದೇಸಕೆಲ್ಲಾ ಹೋಳಗೀ

# ೬೯. ಈ ಹೂವಿನ ಕೋಲೇ

ಕೋಲು ಕೋಲನ ಕೋಲಿನಾ ಈ ಹೂವಿನಾ ಕೋಲೇ
ಕೋಲೂ ಕೋಲೂ ಕೋಲನಾ । ಈ ಹೂವಿನಾ ಕೋಲೇ
ತಾತಾಯೆಂಬೋದು ತಂದಿ
ಚಿನ್ನಾಯೆಂಬೋದು ತಾಯಿ
ತಾಯಿ ತಂದಿ ಸತ್ತಮ್ಯಾಲೆ ತಬಲೀ ಕಾಣೋ ಮಾವಾಯ್ಯಾ
ಕೋಲೂ ಕೋಲನ ಕೋಲೋ । ಈ ಹೂವಿನಾ ಕೋಲು ॥
ಹಳ್ಳಿವಳಗೀ ಜನ
ಹಳ್ಳೆಯ ಹೊಯ್ದುಕೊಂಡು
ಕೊಳ್ಳಗೆ ಬೆಳಕಿನೊಳಗೇ
ತಿನ್ನತಾರೋ ಮಾವಯ್ಯಾ
ಕೋಲು ಕೋಲನ್ನ ಕೋಲಿನಾ । ಈ ಹೂವಿನ ಕೋಲೇ
ಕಾರಗೆಣಿಸು ಹೊಲವಾ
ಕಾವಲತ್ತು ಜಾಣಾ
ಹೋಗಿ ಹೊಲವಾ ಹೊಕ್ಯುವಲ್ಲೊ ಸಿವನೇ
ಹೊಲದಾವಾ ಮಡಿಕಾರು ಬಂಡಿ ಓಡಿ ಬಂದಾ
ಓಡಿ ಓಡಿ ಬಂದಾ ಹುಡ್ಗನ ಗೋಣಾ ಕೊಯ್ದಾ
ಆ ಪಾಪ ನಾನೇ ನೋಡಬಾರದು
ಹುಡ್ಗನ ತಾಯಿ-ತಂದೆ ಓಡಿ ಓಡಿ ಬಂದು
ಹಿಡೀ ಮಣ್ಣ ಕೊಟ್ಟೋ
ಅತ್ತು ಕರದೂ ಮಾಡಿ
ಹುಡ್ಗನ ಗುಡ್ಡಿ ಮ್ಯಾಲ ಬೀಳಿ ಸಸಿ ಹುಟ್ಟಿ

ಆಟಾತ್ ಈಟಾತ್ ಆಳ ದೊಡ್ಡದಾತೂ
ಆದ ಗಿಡವಾ ಕಡಸೀ ಬಂಡೀಸಾಲೀ ಮಾಡ್ಸಿ
ನಾಡ ನಡುವೇ ಕಡಸೀ ಅಚ್ಚವೇ ಮಾಡ್ಸೀ
ಹರೀಗಳ ಕಡಸೀ ಕೋಲಗಳ ಮಾಡೀ
ಅವು ಕೋಲ ಗೋಳಾ ಬಂಡೀ ಮ್ಯಾಲೆ ಹೇರಿ
ಸ್ವಾಮ್ಯಾ ಶಿವನಾ ಅನ್ನೋ ಯತ್ತನ್ನ ಕಟ್ಟಿ
ಚಹಾ ಅಂದ್ರ ಬಂಡೀ ಸಾಗಿನಲ್ಲ ದೋಶವೇ
ಯಾವ ಬೂಮಿ ತಾಯೀ ಬಂಡೀ ತರ
ನನ್ಗೆ ವಂದೆ ಹಬ್ಬಾ ‖ ಹೇಳಿಕೊಡೊ ಚೆನ್ನಾ ‖
ನಿನ್ಗೆ ವಂದ್ ಹಬ್ಬಾ ಶೀಗಿ ಹಣವೇ ಹಬ್ಬಾ
ಚಹಾ ಅಂದ ಬಂಡೀ ಸಾಗಿತಲ್ಲೋ ಸಿವನೇ ‖
ಹತ್ತಂಬಾಳ ಹಲಗೇ ಬಡ್ಡಿ (ಅಣೀ)
ಇವತ ಚವಿರಾ ಚವರಾ ಬೀಸಿ
ನಮ್ಮನ್ನ ಹಿಂಡ್ತಿ ನೀರೀಗೆ ಹೋಗೀ
ಇನ್ನೂ ಬರಲಿಲ್ಲಾ ಇನ್ನೂ ಬರಲಿಲ್ಲಾ ‖

❖

# ೭೦. ಹೊಡಿಬ್ಯಾಡಾ ಗಂಡಪ್ಪಾ

ಹೋಡೀಬ್ಯಾಡ ಗಂಡಪ್ಪಾ
ದೇವರಿಗೊಂದ ದತ್ತಾದೇನಿ ‖ ೧ ‖
ಮೂಲ್ದಗೊಡೀ ಹೆಣ್ಣಾನೀ
ಮೂಗ್ತೀಯಾ ವಲ್ಗಿಟ್ಟೇನೀ ‖ ೨ ‖
ಕಳ್ದಗಿಳ್ದದ ಹೋದೀತಂತ್ಯಾ
ವಲೆ ಬೂದ್ಯಾಗಿಟ್ತಿದ್ದೇ ‖ ೩ ‖

ಹೌದನನ್ನಾ ಹೆಣ್ಣಾ
ಹೊಯ್ಮ್ಯಾಲಿ ಹೆಣ್ಣಾ ॥ ೪ ॥
ಹೊಡಿಬ್ಯಾಡಾ ಗಂಡಪ್ಪಾ
ದ್ಯೆವರಿಗೊಂದ್ ದತ್ತಾದೀನೀ ॥ ೫ ॥
ತಾಳಗೇಡೀ ಹೆಣ್ಣಾ ನೀ
ತಾಳ್ಗೀ ಯಾವಲ್ಲಿಟ್ಟಿದ್ದೀ? ॥ ೬ ॥
ಕಳ್ದಗಿಳ್ದ ಹೋದೀತಂತಾ
ಕೋಣನಾ ಕಾಲಾಗಿಟ್ಟಿದೇ ॥ ೭ ॥
ಹೌದಲೆ ಹೆಣ್ಣಾ ಹೊಯ್ಮ್ಯಲಿ ಹೆಣ್ಣಾ
ಹೋಡಿಬೇಡಾ ಗಂಡಪ್ಪಾ ॥ ೮ ॥
ದ್ಯೆವರಿಗೊಂದ್ ದತ್ತಾದೀನೀ
ಮೂಳಗೇಡಿ ಹೆಣ್ಣಾ ನೀ ॥ ೯ ॥
ಮೂಗ್ತಿ ಯಾವಲ್ಲಿಟ್ಟಿದ್ದೀ
ಕಳದ ಸುಳದ ಹೋದೀತಂತಾ । ವಲ್ಲಿ ಚೂಡ್ಯಾಗಿಟ್ಟಿದ್ದೇ ॥ ೧೦ ॥
ದಿವಳಿ ನೋಡೀ ಹೆಣ್ಣಾ ನೀ ದೀಪಾ ಯಾವಲ್ಲಿಟ್ಟಿದ್ದೀ
ಕಳ್ದ ಗಿಳ್ದ ಹೋದೀತಂತಾ ಮನೀ ಸೂರಾಗಿಟ್ಟಿದ್ದೆ ॥ ೧೧ ॥
ಹೊವದಲೆ ಹೆಣ್ಣಾ ನೀ ಹೊಮ್ಮ್ಯಲಿ ಹೆಣ್ಣಾ
ತಳವಾರವ್ನ ಹೆಂಡ್ತೀ ಯೇವಗರತ್ಯಣಾ ಕೋಲೆನ್ನಾ ಕೋಲೇ ॥ ೧೨ ॥
ತಳವಿಲ್ದ ಕೊಡ ತಕೊಂಡ್ ನೀರೀಗೆ ಹೋದಳು ಕೋಲೆನ್ನಾ ಕೋಲೆ
ಜಲವಿಲದ ಬಾವ್ಯಾಗೆ ತರ ಬಿಟ್ಟಳೆ ಕೊಡವಾ ॥ ೧೩ ॥
ಶೀಲವಂತಾ ಶಿಂಬೀ ಕಳದು ಹೊತ್ತಾಳ ಕೊಡನಾ
ಕಲ್ಲಿಲ್ದ ನೆಲದಲ್ಲಿ ಎಡ್ಡಿ ವಗ್ದಾಳ ಕೊಡವಾ ॥ ೧೪ ॥
ಜಮನೇರ್ಲದ ಗಿಡವೊಂದ ಹುಟ್ಟಿತಣ್ಣಾ
ಜಮನೇರ್ಲದ ಗಿಡವೊಂದು ಹುಟ್ಟಿತಣ್ಣಾ ॥ ೧೫ ॥
ಹರಿ ಹರಿಗೆ ಗನಾ ದರಂಗಳಸ್ಯಾವು
ಕಾಲಿಲ್ದ ಜಣ ಬಂದು ಮರವೆರ್ದರಣ್ಣಾ ಕೋಲೆನ್ನ ಕೋಲೇ ॥ ೧೬ ॥

ಕೈಯಿಲ್ದ ಜಣ ಬಂದು ಮುಟ್ಟಿ ನೋಡ್ಯಾರ ಹಣ್ಣಾ
ರೊಕ್ಕಿಲ್ದಾ ಜಣ ಬಂದು ಲೆಕ್ಕಾ ಮಾಡ್ಯಾರ ಹಣ್ಣಾ ‖ ೧೭ ‖
ಆಗಾಗಲೆ ಜಣ ಬಂದು ನುಂಗಿ ನೋಡ್ದಾರ ಹಣ್ಣಾ

▪ ಹೇಳಿದವರು: ಸುಬ್ಬಾ ಗೌಡ

❖

# ೭೧. ಹೂವಿನಂತಾ ತೇರು

ಕಾಲ್ಗೆ ಕಾಲ್ಗೇ ಗೆಜ್ಜೆ ಕಟ್ಟಿ ಗೆಜ್ಜೆ ಕಟ್ಟಿ
ಹೂವಿನಂತಾ ತೇರ್‌ಗೆ ತೇರೋ ತೇರೋ ‖ ೧ ‖
ಹೂವಿನಂತಾ ತೇರೋ
ದಂಡು ಹೊನ್ನು ಹನ್ಮಯ್ಯಗೆ ವಂಬತ್ ಕಾಲ್ ಗಗ್ಗರಾ
ತುಂಬೇಯ ಕೋಡಿವಡ್ಡೂ ರಂಬೆ ರಾಜನಕೇ ‖ ೨ ‖
ತಾನನಾನ ತಾನನಂದನ್ನಾ
ತಂದನ್ನೇ ನಾನೋ ತಾನನಂದ್ರ ನಾನಾರೆ
ತಂದನ್ನೋತಾನೋ ತಾನ ನಾನಾಗೇ ‖ ೩ ‖

❖

# ೭೨. ಪದ ಬೇಟೆ (ಪಾಲು ಮಕ್ಕಲನೆ ಕರ್ದಾನೋ)

ಪಾಲು ಮಕ್ಕಲನೆ ಕರ್ದಾನೋ ಮಗರಾಯಾ
ಆಲು ಮಕ್ಕಲನೆ ಕರ್ದಾನೋ ಮಗರಾಯಾ ‖ ೧ ‖
ಹಲುವನಾ ಜನವೇ ಹಲವೆಗೆ ‖ ತೆಗದಿಟ್ಟೇ
ಜಡವಿನಾ ಜನವ (ಜಡವಿಗೇ)
ಜಡವೆತ್ತಿ ಹೊಡಿವಾಗೇ ‖ ೨ ‖

ಹಲುವಿನಾ ಜನವೇ ಹಲವೆದ್ದೇ
ಹಲುವಿನಾ ಜನವೇ ಹಲವೆದ್ದೇ ಹೊಡವಾಗ ॥ ೩ ॥
ಕೆಂದೇರೀ ಮೊಗದಾ ಹುಲಿರಾಯಾ
ಕೆಂದೇರೀ ಮೊಗದಾ ಹುಲಿರಾಯಾ ನೋಡಾನೆ ॥ ೪ ॥
ಮಗರಾಯನಿದ್ದಲ್ಲಿ ಬರುತಾನೇ
ಮಗರಾಯನಿದ್ದಲ್ಲಿ ಬರ್‌ವಂತಾ ಹೊತ್ತಿಗೇ ॥ ೫ ॥
ಅಂದಿನ ಮೋನಂಬು ಬಿಡುತಾನೇ
ಬಿಡವಂತಾ ಲೊತ್ತಿಗೆ
ಆಲು ಮಕ್ಕಲನೆ ಕರ್ದಾನೋ ಮಗರಾಯಾ ॥ ೬ ॥

❖

## ೭೩. ಕೋಲು ಪದ (ಹುಡುಗ ಬಂದಾ ದಾರೀಗೇ)

ಸುತ್ತೇಳು ಸಂದ್ರ ಬಾಲೀ ಸುತ್ತಿಗೆ ಬಾರೆ ಕೋಲೇ
ಮಾದೊಡ್ಡ ದರಿಯಾ ಮುಂದೆ ಆಡಿ ಬಾರ ಕೋಲೇ ॥ ೧ ॥
ಸರಣೂ ಸರಣೂ ಸರಣಂಬು ಸಾಮಿಗೆ
ಗಂಗೇಯ ದೇವರಿಗೆ ಸರಣಂಬುದಾ ॥ ೨ ॥
ಸರಣೂ ಸರಣೂ ಸರಣಂಬು ಸಾಮಿಗೆ
ಹಿಂದೀನ ದೇವರಿಗೆ ಸರಣಂಬುರಾ ॥ ೩ ॥
ವಳಗಿದ್ದ ಮೊದವುಲಿ ಹೆದರಿಸುಬೇಡಾ
ಉದರೀಸಿ ಕೊಡುವೇ ಕೆಂಡಗಳಾ ॥ ೪ ॥
ಅಂಗಾಳ ಸಾರಿಸಿ ಮಂಗಳಾ ಹೊಲಿ ಹೊಯ್ದೀ
ರಂಬೇ ನಿನ ಮಗಳಾ ಮದುವಿಗೆ ಕೋಲೇ ॥ ೫ ॥
ಯಂತಾಯಂತಾ ಜಾಣಿಯಂತಾ ಜಾಣಮ್ಮಾ
ಇಂತಾರ್ ಹುಡಗೀಯೇನ ಮೋಳ ಯೇನ ಸೋಗಣ್ಣಾ ॥ ೬ ॥

ಯಲ್ಲರ ಕತ್ರ ಮಲ್ಲರ ಜಾಣೆಯೆಲ್ಲಿಗೆ ಬಿತ್ತೇ ಮೂಗತೀ
ಬಾವನಾರ್ ಮೋರೀ ನೋಡಿ ಬಾವೀಲ್ ಬಿತ್ತೇ ಮೂಗತೀ ‖ ೭ ‖

ಹಳ್ಳಾ ಹರವಾದ ಕಂಡೆ ಗೊಳ್ಳೀ ಮ್ಯಾವಾದ ಕಂಡೇ
ವಳ್ಳೆ ವಳ್ಳೇ ಹುಡಗೀ ಕಂಡೆ ಅಲ್ಲೇ ಕೂತ್ಕಂಡೇ ‖ ೮ ‖

ಆರೂ ತಾಸಿನ ಬಿಸೀಲಲೀ ಹುಡಗೀ ಬಂದಳು ನೀರೀಗೇ
ಹುಡಗೀ ಬಂದಾ ಸಮಯಾ ನೋಡಿ ಹುಡಗಾ ಬಂದಾ ದಾರೀಗೇ ‖ ೯ ‖

❖

# ೭೪. ಹಾಲಕ್ಕಿ ಗೌಡರಿಗೆ ಕೊಡಬೇಕು

ಪಾಂಡವರು ಲೈದೇ ಜನಗೋಳೋ
ಕೌರವರು ನೂರೊಂದು ಜನಗೋಳೋ ‖ ೧ ‖

ವಟ್ಟು ಜಾನ ಲಣ್ಣಾಲತಮದೀರೂ
ವಂದಲ್ಲೇ ವಂದೂ ಹೊಸಾಲದಿನದಲ್ಲೀ ‖ ೨ ‖

ಯೇನಂದೀ ಮಾತೇಲಾಡಿದಾರೋ
ವಂದಾಳೇ ವಂದೂ ದಿನದಲ್ಲೀ ‖ ೩ ‖

ಹಾರೆ ವಂದು ಕೋಲಾನೆ ಕಡಿಬೇಕೋ
ಆಡೂವಂದು ಕನ್ನಾಕೆ ತಂದೀರೋ ‖ ೪ ‖

ಆಸಾರೀ ಚೆನ್ನಾನ ಕರೆದಾರೋ
ಹನ್ನೆರಡ ಗಂಡ್ಯಾನೆ ಗೆಸುವಾರೋ ‖ ೫ ‖

ಹನ್ನೆರಡ ಸಬ್ಬೆನೇ ನಯುದಾರೋ
ಹನ್ನೆರಡ ಕುಂಚಾನೆ ಕಡಿದಾರೋ ‖ ೬ ‖

ಹನ್ನೆರಡ ಜನವೇ ನಿಂತಾರೋ
ಗೋಕಾಲೇಳು ಮಾಬುಲೊಡೆಯನ ಮನೆಯಲ್ಲಿ ‖ ೭ ‖

ಹನ್ನೆರಡ ಜನವೇ ನಿಂತಾರೂ
ಕಮಲಸೂರ ಮೊದಲೇ ಹೊಡೆದಾನೂ ‖ ೮ ‖

ವಾರಂದ ಬಿಮಟೀಕೆ ಹೊಡೆದಾನೂ
ಅಕ್ಲನೋ ಹೊಯ್ಲಾನೆ ॥ ೯ ॥
ವಂದಂಬು ಕೊಣತಾನೇ ಕುಣದಾರೋ
ಯರಡಂಬು ಕೊಣತಾನೇ ಕುಣದಾರೋ ॥ ೧೦ ॥
ಮೂರಂಬು ಕೊಣತಾನೇ ಕುಣದಾರೋ
ಆಕಾಸ ಬೂಮಂಡಲ ಹೋಡಿಯೆದ್ದೂ ॥ ೧೧ ॥
ವಂದು ಮೊಣಕಾಟ ಬೂಮೀನೆ ಕುಸಿದಾವೂ
ಹಂದಿ ಮುರಗ ಬಿಟ್ಟಾಕ ಸೇರಹೊದೋ ॥ ೧೨ ॥
ಹಕ್ಕಿಪಕ್ಸಿ ಆಕಾಸಕೆ ಸೇರಾರೇ
ಗೋವು ಗೆಂಟಿ ಹುಲುನೀರಾನೆ ಬಿಡುವಾರೋ ॥ ೧೩ ॥
ಈವ ಸುಗ್ಗೀ ನಮಗೇ ತೆರವಲಾ
ಹಾಲಕ್ಕಿ ಗೌಡರಿಗೆ ಕೊಡಬೇಕೂ ॥ ೧೪ ॥

▪ ಹೇಳಿದವರು: **ಯಂಕಟ ರಾಮಕೃಷ್ಣ ಗೌಡ,** ಕಲ್ಕೋಡು, ಹೆಗಡೆ ಊರು

❖

# ೭೫. ಗೊಲ್ಲರ ಹುಡುಗ

ಚೆನ್ನದ ಗುದುರೆ ಗೊಲ್ಲರ ಹುಡುಗಾ ಕೋಲೆನ್ನ ಕೋಲೇ
ವಳೆ ಲಾಗಲೇ ಲೇನು ಮಾಡ್ಯಾನಾ ॥ ೧ ॥
ಅರಸೂನ ವನಗೆ ಲಾದರೆ ನಡುದ್ಯಾ
ವಳ್ಳೆಲಾಗಲೇ ಲೇನು ಮಾಡ್ಯನು ॥ ೨ ॥
ವಳ್ಳೆಲಾಗಲೇ ಅರಸಗೆಲಾದರ್ಯೇನು ಹೇಳುದು?
"ನಿಮ್ಮಲೆ ಮನುಗೆ ಸಾನಲೆ ಉಳುತೇ" ॥ ೩ ॥
ಅಂದಿ ಅರಸಗೆ ಲಾದರೆ ನುಡುದನು ಗೊಲ್ಲಾರ ಹುಡುಗಾ
ಚೆನ್ನದ ಗುದುರೆ ಗೊಲ್ಲಾರ ಹುಡುಗಾ ॥ ೪ ॥

ಲಾಗಲೆ ಲೇನು ಕೇಳ್ಯಾನು ಅರಸ?
ಮರಮನೆಲೆ ಯಾವ ಲಕ್ಕಿಲಾಸೋ ॥ ೫ ॥
ಯಲಗೊತ್ತುಲೆ ಕೇಳಿದ ಅರಸ
ಯಾವರೆ ಕೆಲಸಾ ಬೇಕಲ ಸ್ವಾಮಿ ॥ ೬ ॥
ಯಾವರೆ ಕೆಲಸಾ ಮಾಡಲು ಎಲ್ಲೇ
ಲಾಗಲೆ ಲೇನೂ ಮಾಡನೆ ಹುಡುಗಾ ॥ ೭ ॥
ಲಡುಗೆಲೆ ಮನೆಗೆ ಲಾದರೆನೋಡಿ
ಲಡುಗೆಲೇ ಲಾದರೆ ಮಾಡುಲಿಕೆ ಹಾಕ್ಯಾ ॥ ೮ ॥
ಗೊಲ್ಲರ ಹುಡುಗಾ ಯೇನಾರೆ ಮಾಡ್ಯಾ?
ಬೇಕಾದ ಲಡುಗೆ ಮಾಡಿರಿ ಇನ್ನೇ ॥ ೯ ॥
ತಾಸೀನ ಲೊಳಗೆ ಮಾಡುತ್ಯಾನು ಹುಡುಗಾ
ಒಳ್ಳೆ ಲಡಗೆ ಲೂಟಕಾದರೆ ಕರದಾ ॥ ೧೦ ॥
ಒಳ್ಳೆ ಅರಶಗೆ ಲಡುಗೇ ಮಾಡಿದ
ನಿತ್ಯದಂತೆ ದೇವರ ಪೂಜ್ಯೇ ॥ ೧೧ ॥
ಪೂಜೆನಲಾದರೆ ಮಾಡ್ಯಾನ ಲರಸ
ಊಟಕೆಲಾದರೆ ನಡೆದನು ಲರಸ ॥ ೧೨ ॥
ನಡೆದನೋ ಲರಸ ನೋಡಿರಿ ಶಿವನೆ
ಚೆನ್ನದ ಗುದುರೇ ಗೊಲ್ಲರ ಹುಡುಗಾ ॥ ೧೩ ॥
ಲರಸಗೆ ನೋಡಿ ಹೇಳ್ಯಾನೆಲಾದರೆ
ಬಟ್ಟಲದೊಳಗೆ ಹಾಕ್ಯಾನು ಲಿನ್ನೆ ॥ ೧೪ ॥
ಊಟದ ರುಚಿಯೇ ನೋಡ್ಯಾನು ಲರಸಾ
ಪಕವನಲಾದರೆ ಆಗಿದೊ ಶೀವನೆ ॥ ೧೫ ॥
ಊಟಕೆ ಆದರೆ ಬೆರಗ್ಯಾನೋ ಲರಸು
ಚೆನ್ನದ ಗುದುರೆ ಗೊಲ್ಲರ ಹುಡುಗಾ
ಬೇಕಾದ ಊಟ ಉಪಚಾರ ಮಾಡುತ್ಯಾ ॥ ೧೬ ॥

▪ ಹೇಳಿದವರು: **ಧಾಕು ದೇವು ನಾಯ್ಕ,** ಅರಗಾ ತಾಲೂಕು, ಕಾರವಾರ

# ೭೬. ಗೋವಿಂದ ರಾಯಾ ಲಂಬೋನೂ

ಗೋವಿಂದ ರಾಯಾ ಲಂಬೋನೂ
ಹೊತ್ತರೇಳು ಮೊದಲೇ ಲೆಳುವಾನೋ
ಹೊತ್ತೇಳೂ ಮುನ್ನೇ ಲೆದ್ದೇನೋ
ಕಯ್ಯು ಕಾಲು ಮೋರೆ ತೊಳೆದೇಲೋ
ಬಣ್ಣದೊಂದು ಚದರದ ಮೇನೇಲೋ
ಹೊನ್ನಿನ ಒಂದು ರಾಚೀ ಹೊಯ್ದಾನೋ
ಹೊನ್ನಿಗೊಂದು ರಾಶೀ ಹೊಯ್ದೊಲೇ
ಚಿನ್ನದ ಕೊಳಗ ತರವಾನೋ
ಬೆಳ್ಳಿಯ ಶಿದ್ದೇ ತರವಾನೋ
ಬೆಳ್ಳಿಯ ಶೀದ್ದೇ ತಂದೇಲೇ
ಹೊನ್ನಿನ ರಾಶೀಲಳೆದೇಲೇ
ಹೊನ್ನಳದೇ ದಣಿವೇಲಾಗಿತೋ
ಹೊನ್ನಳದೇ ದಣಿವೇ ಆದವ್ಯಾನೇ
ಯೇಳೂಪ್ಪರಗಿ ಶದರದ ಮೇಲೇಲೋ
ಬಣ್ಣದೊಂದು ವಲ್ಲಿ ಬಿಡಿಶ್ಯಾಲೋ
ಬಣ್ಣಗೊಂದು ವಲ್ಲಿ ಹಾಶೀಲೇ
ಮುಚ್ಚೋರಗೇ ಮಲಗೂತೈದಾನೋ
ಮುಚ್ಚೋರಗೇ ಮಲಗೂ ಶಮ್ಯದಲ್ಲಿ
ಚಿನ್ನದೊಂದು ಕೊಳಗ ತಲೆದಿಂಬು
ಬೆಳ್ಳಿಯ ಶಿದ್ದೆ ಬಗಲಲ್ಲೋ
ಬೆಳ್ಳಿತೊಂದು ಶಿದ್ದೆ ಬಗಲಲ್ಲೋ
ಮುಚ್ಚೆ ಹೊಡೆದೆ ಮಲಗೂತೈದಾನಲೋ
ಮುಚ್ಚೆ ಹೊಡದೆ ಸಮವಾದಲ್ಲೋ
ತೆಂಕಲ ದಿಕ್ಕಿನ ಗಾಳೆ ಕರೆದೇಲೋ

ಶುಕದಲ್ಲೇ ನಿದರೇ ಮಾಡುವಾಗೋ
ಏಳು ಜನ ನಂದನ ಗೋಪ್ಯವರು
ಗೋವಿಂದನ ಪಾದಾ ತಿಕ್ಕವಾರೋ
ಗೋವಿಂದನ ಪಾದಾ ತಿಕವಾಗೇ
ಸೂರ್ಯ ಮೂಡಿ ಉದಯಗ ಬಂದಾವೋ
ಸೂರ್ಯ ಮೂಡಿ ಉದಯಗ ಬರುವಾಗೋ
ಸೂರ್ಯ ಮೂಡಿ ಯಾಳೇ ಬಿಸಿಲೇಲೋ
ಗೋವಿಂದನ ಕಣ್ಣಿಗ್ಯೆದಾವೋ
ಗೋವಿಂದನ ಕಣ್ಣೀಗೆಸೆವಾಗೋ
ಗೋವಿಂದಗೆ ಎಚ್ಚರಾದವೋ
ಗೋವಿಂದಗೆ ಎಚ್ಚರಾಗವಾಗೇ
ಬಡ ಜನರಿಗೆ ದಾನ ಮಾಡಲಿಲವೋ
ಬಡ ಜನರಿಗೆ ದಾನ ಕೊಡಲಿಲವೋ
ಬಡ ಜನರಿಗೆ ಪಡಿಯ ಅಳೆಲಿಲವೋ
ಆರು ತಾಸು ಮಜ್ಞಾನ ಬಿಶಲಲ್ಲೋ
ಗೋವಿಂದಗೆ ಪೂಜೆ ಮಾಡುವಾರೋ
ಗೋವಿಂದಗೆ ಪೂಜೆ ಮಾಡುವಾಗೇ
ಆರು ತಾಸು ಮಜ್ಞಾನಾ ಬಿಶಲಲ್ಲೋ
ಬಂದವಲೂ ಮಂಗನ ಗೊಲೇಯೋ
ಹಿಡಿದವರು ಶಾರೂಗಂಟೇಯೋ
ನುಡಿದವಲು ಶಾರಾ ಗಂಟೇಯೋ
ಗೋವಿಂದಗೆ ಪೂಜೆ ಮಾಡುನಾರೋ
ಗೋವಿಂದಗೆ ಪೂಜೇ ಮಾಡುವಾಗೇ
ಗಳಗೊಂದೇ ರೂಪಾ ತೋರ್ಯಾನೋ ||

❖

# ೭೭. ರಂಗನ ಕಿನ್ನುರಿ

ಕೋಲೆ ಕೋಲೆ ಕೋಲು ಕೋಲೇನ್ನ ಕೋಲೇ
ಕೋಲು ಕೋಲೆನ್ನ ಕೋಲು ರನ್ನದಾ ಕೋಲು ಕೋಲೇ ‖ ಪ ‖
ಕೆನ್ನುರಿ ಕೇನ್ನುರಿಯೇಲೂ ಬಿದುರೂ ಬಾಬುಲು ಕೇನ್ನೂರಿಯಾ
ರಂಗ ಕೊಟ್ಟೆ ಬಿಶುಲಿಗೆ ವಣಿಶಿಯಾರೋ ಕೋಲೇ ‖ ೧ ‖
ರಂಗ ಕೊಟ್ಟೆ ಬಿಶುಲಿಗೆ ವಣಿಶೀರೊ ಕೇನ್ನುರಿಲೊ ರಂಗಾ
ರಂಗನೊಂದೇ ತಂಗೀ ಬರುವಾಳೋ ಕೋಲೇ ‖ ೨ ‖
ರಂಗನೊಂದೇ ತಂಗೀ ಬರುವಾಳೋ ಕೆನ್ನುರೀ ರಂಗಾ
ಬಂದೀ ರಾಜಂಗಳದಲ್ಲಿ ನಿಲೂತಾಳೋ ಕೋಲೇ ‖ ೩ ‖
ಬಂದೀ ರಾಜಂಗಳದಲ್ಲಿ ನಿಲೂತಾಳೋ ರಂಗನಾ ತಂಗೀ
ಕಿನ್ನುರಿ ಕಾಂಬುತಲೈದೋಲೋ ಕೋಲೇ ‖ ೪ ‖
ಕಿನ್ನುರಿ ಕಾಂಬುತಲೋ ಲೈದಾಲೋ ರಂಗನ ತಂಗೀ
ಕಿನ್ನುರಿ ತಡವುತೇ ಲೈದೊಲೋ ಕೋಲೋ ‖ ೫ ‖
ಕೆನ್ನೂರಿ ತಡವುತೆಲೋ ತಡಿದಾಳೊ ರಂಗನ ತಂಗೀ
ಕಿನ್ನುರಿ ಮೇನೆ ಕೈಯಾಡೀ ಹೊಡೀದಳೋ ಕೋಲೇ ‖ ೬ ‖
ಕಿನ್ನುರಿ ಮೇನೆ ಕಯ್ಯೋಲೇ ಹೊಡಿದಾಳೆ ರಂಗನಾ ತಂಗೀ
ಕೆನ್ನುರಿ ಮೇನೇಲೇ ನುಡುದಿಲವೋ ಕೋಲೇ ‖ ೭ ‖
ಕಿನ್ನುರಿಯೇನೇಲೇ ನುಡೂದಿಲ್ಲ ರಂಗನಾ ತಂಗೀ
ಏನಾರೇ ಹೇಳೂತೈದಾಳೋ ಕೋಲೇ ‖ ೮ ‖
ಯೇನನಾರೆ ಹೇಳುತೇ ಲೈದಾಳೋ ರಂಗನ ತಂಗೀ
"ನನ್ನ ಕಯ್ಯಾಲ್ಲೇನೇ ನೀನೂ ನುಡಿದಿಲವೋ ಕೋಲೇ ‖ ೯ ‖
ನನ್ನ ಕಯ್ಯಲ್ಲೇಲೋ ನುಡೂದಿಲ್ಲ ಕೀನ್ನುರಿಯೇ ಕೇಳೇ"
"ನಿನ್ನ ನಲ್ಲನ ಕಯ್ಯಲೇ ನೀನೇ ನುಡೂವ್ಯಲ್ಲೇ ಕೋಲೇ" ‖ ೧೦ ‖
ಅಟ್ಟೊಂದು ಹೇಳುತೇಲೇ ಲೈದಾಳು ರಂಗನ ತಂಗೀ
ತಂಗೀವಂದು ಮಾತೇಲೇ ಕೇಳಿಯಾನೋ ಕೋಲೇ
ಆಗೇಲೋ ರಂಗಾನೂ ಬಾಳೆ ಬಂದೇ ಶಿಟ್ಟೇಬಂದೊ ‖ ೧೧ ‖

# ೭೮. ನಿಲ್ಲು ನಿಲ್ಲಯ್ಯ ರಾಜ

"ನಿಲ್ಲು ನಿಲ್ಲಯ್ಯ ರಾಜ ನಿಜಗುಣ ನಾ ಬಲ್ಲೆ
ಮಲ್ಲಿಗೆ ಸೂರಾಡಬಹುದೇನೋ ॥ ನಿಲ್ಲಯ್ಯ ರಾಜಾ" ॥ ೧ ॥
ಠಾಕಠೀಕ ಜೋಕ "ನಾರೀ ಜೋರಲಿಂದ ಹೋಗುವಾಗ
ಕರಗ ಬಿದ್ದಿತೆ ನಾರೀ, ಹೌದಲ್ಲೇ ರಮಣೀ ॥ ೨ ॥
ಹೌದಲ್ಲೇ ರಮಣೀ? ಕರಗು ಬಿದ್ದಿ ನಾರೀ
ನೀ ನೀರೀಗೆ ಹೋಗುವಾಗೆ ನಾ ಬಂದೆ ನಿಲ್ಲೇ ಬಾಲೇ ॥ ೩ ॥
ಬೊಗರೀ ಕುಚದ ಹೆಣ್ಣೇ ಮಿಗರಿ ಮಾತಾಡಬ್ಯಾಡಾ"
"ವಗರಿನ ಮಾತ್ಯಾಕೇ?" ಹೌದಲ್ಲೇ ರಮಣೀ ॥ ೪ ॥

❖

# ೭೯. ಪಟ್ಟಣಶೆಟ್ಟಿ ಪಟ್ಟಣದಲ್ಲಿ

ತಂದನಾನ ತಂದನಾನ ಗುರುವೇ ತಂದನಾನ
ತಂದನಾನ ತಂದನಾನ ದೇವರ ತಂದನಾನ ॥ ೧ ॥
ಪಟ್ಟಣಶೆಟ್ಟಿ ಪಟ್ಟಣದೊಳಗೆ ತಂದನಾನ
ಅಲ್ಲಿ ಇದ್ದನೊಬ್ಬ ಪಟ್ಟಣದೊಳಗೆ ತಂದನಾನ ॥ ೨ ॥
ಅಲ್ಲಿ ಏನ ಏನ ಐಸರ್ಯ ನೋಡ್ವೇ? ತಂದನಾನ
ಏನ ಏನ ಸೋಜಿಗವ ನೋಡ್ವೇ? ತಂದನಾನ ॥ ೩ ॥
ಮುತ್ತಿನ ಕಂಬಿಗೆ ಮುತ್ತಿನ ಜಲ್ಲೆ ತಂದನಾನ
ಓಹೋ ಪಟ್ಟಣಶೆಟ್ಟಿ ಪಟ್ಟಣದಲ್ಲಿ ತಂದನಾನ ॥ ೪ ॥
ಹಗಲು ಇರುಳು ಆದಂಗೇ ತಂದನಾನ
ಅಲ್ಲಿ ಹಗಲು ಬತ್ತಿ ನೋಡಿದರೇ ತಂದನಾನ ॥ ೫ ॥
ಮದ್ದುಗುಂಡು ಏನ ನೋಡ್ದೇ ತಂದನಾನ
ಆಕಾಶ ಬಾಣ ಏನ ನೋಡ್ದೇ ತಂದನಾನ ॥ ೬ ॥

ವಜ್ರದ ಕಂಬಿಗೆ ವಜ್ರದ ಜಲ್ಲಿ ತಂದನಾನ
ಮುತ್ತಿನ ಕಂಬಿಗೆ ಮುತ್ತಿನ ಜಲ್ಲೆ ತಂದನಾನ
ತಂದನಾನ ತಂದನ್ನ ಗುರುವೇ ತಂದನಾನ ‖ ೭ ‖

- ಹೇಳಿದವರು: **ಸಣ್ಣತಮ್ಮ ತಮ್ಮಣ ಗುನಗ,** ಹೊನ್ನಳ್ಳಿ, ಹೆಗ್ಗಾರ ಮಕ್ಕಿ. ೧೨/೧/೧೯೬೯

❖

# ೮೦. ತನ ಬಾವ ತನ ಗುರುತಾ ಹಿಡಿದಾನೆಯಾ

"ತನ ಬಾವ ತನ್ ಗುರುತಾಆಆ ಹಿಡಿದಾನೆಯಾಅಅ ತಾನಾ"ಅಅಅಅಅಅ
ಲಂದೀ ತಾಅಅ ನೀಗೇಏಏ ಹೇಳುತನೆಯೊ ತಾನಾ ‖ ೧ ‖
"ಅಯ್ಯೋ ನನ ತಮ್ಮಾ ನೀ ಕೇಳೋ ಲೀಗಿನ್ನು
ನಿನ ಬಾವ ನಿನ್ನ ಗುರುತಾ ಹಿಡಿದಿದುರೇ ತಾನಾ ‖ ೨ ‖
ಲಾಗಳು ನನಗೀಗೇ ಮೋಸಾಲಾಆ" ತಾನಾ
"ಅಣ್ಣಾ ನಾ ಬರಣ್ಣಾ ತಟುಕಂಡೀ ವೀಗಿನ್ನು ‖ ೩ ‖
ನಿನ್ನಾ ಆಬರ್ಣ ಅಣ್ಣಗೆ ದರುಸಿದಿಯಾ ತಾನಾ"
"ಅಂದ್ಹೇಳರು ಶೀಟ್ಟೇ ಬಕ್ಕಾಲಾ ವೀಗಿನ್ನು" ‖ ೪ ‖
ಅಂದ್ಹೇಳೂ ತಾನೇ ನುಡಿತಳೆಯೊ ತಾನಾ
"ಅಯ್ಯೋ ನನ್ನಕ್ಕಾ, ನೀ ಕೇಳೇ ವೀಗಿನ್ನು ‖ ೫ ‖
ಹೊಡುದುರು ವಂದು ಪೆಟ್ಟೇ ತಿನುತೇನೇ ತಾನಾ
ಬಯ್ದಾರೊಂದು ವಾಕ್ಸೀ ಕೇಳುತೇನೇ ವೀಗಿನ್ನು ‖ ೬ ‖
ನಿನ್ನ ಆಬರ್ಣ ತನಗಾಲಾ ತಾನಾ
ಹೆಣ್ಣೊ ಯೇಸಾನೇ ಕೊಡುಬೇಕೇ ಲೀಗಿನ್ನು" ‖ ೭ ‖
ಲಂದ್ಹೇಳು ತಾನೀಗೇ ನುಡಿತನೆಯೇ ತಾನಾ
ತಮ್ಮನ ಹನುಟೀನೇ ತಾಳುಲಾರದೇ ಲೀಗಿನ್ನು
ತನಾಲಾಬರಣಾ ಕೊಟ್ಟಿದಳೋ ತಾನಾ ‖ ೮ ‖

- ಹೇಳಿದವರು: **ಗೊಂಡ**

# ೮೧. ದುಃಖ ಮಾಡ್ಯಾಳೆ ಗೌರೀ

ತಂದನಾನ ತಾನ ನನ್ನ ತಾನನ ತಂದೇನಾನಾ
ತಾನನ ತಂದೇನಾ ತಂದನ್ನಾನಾ ‖ ೧ ‖
ಮಕ್ಕಳ ಇಲ್ಲೇಂದೆ ದುಕ್ಕ ಮಾಡ್ಯಳೆ ಗೌರೀ
ದುಕ್ಕ ಮಾಡ್ಯಾಳೆ ಗೌರೀ ‖ ೨ ‖
ಮಕ್ಕಳ ಬೇಡಿದಳೇ ಶಿವನಲ್ಲಿ ಪಾಪಿಯ ಗೌರೀ
ತಾನಂದನ್ನ ತಾನನಾಽ ತಂದೋನಾನಾ ‖ ೩ ‖
ರೊಟ್ಟೀ ಸುಟ್ಟಳೆ ಗೌರೀ । ಶಿಕ್ಕದ ಮೇಲ್ ಮಡಗ್ಯಾಳು
ಅಕ್ಕನ ಮಕ್ಕಳು ಮನೆಗೆ ಬಂದೋ । ಪಾಪಿಯ ಗೌರೀ ‖ ೪ ‖
ಅವರಕೆ ಸೂರ ಕೊಡನಿಲ್ಲ । ತಂದನಾ ತಾನಾ
ಅಕ್ಕನ ಮಕ್ಕಳಿಗೆ ಸೂರಕೊಡನಿಲ್ಲ । ಪಾಪಿಯ ಗೌರೀ ‖ ೫ ‖
"ನಿನಗ್ಯಾಕೆ ಮತ್ತರು ಸಂತನವೇ" ತಾನಂದನ್ನಾ
"ಕುಂಟ ನನಗೆ ಬೇಡ ಕುರುಡ ನನಗೆ ಬೇಡ ‖ ೬ ‖
ಗೆಜ್ಜೆಕಾಲ ಕೊಮರನ ಕೊಡೊವನಗೆಂದಳು । ಪಾಪಿಯ ಗೌರಿ
"ಕುಂಟನೂ ನಾನೇನು ಕೋಡೇ ಕುರುಡಾನೂ ನಾನೇನು ಕೋಡ ‖ ೭ ‖
ಗೆಜ್ಜೆಕಾಲ ಕೊಮರನ ಕೊಡ್ವೇ ನಿನಗೇ" । ಪಾಪಿಯ ಗೌರಿ
"ಬಾಳೆ ನೆಟ್ಟಿಕೋಳೆ ನೀನು । ಬಾಳೆಗೆ ನೀರೆರಕೋಳೇ ಗೌರಿ ‖ ೮ ‖
ಬಾಳಿಗೆ ಸಾವಿರ ಸಂತಾನ ಬರತೀದೇ । ಪಾಪಿಯ ಗೌರಿ
ಆದರಕಂಡ ಜಾನ ಮರಕೋಳೆ" ತಾನಂದನ್ನಾ ‖ ೯ ‖
ತೆಂಗ ನೆಟ್ಟಿಕೋಳೇ ನೀನೂ ತೆಂಗಿಗ್ ನೀರೆರಕೋಳೆ
ತೆಂಗು ಸಾವಿರದು ಫಲ ಬರತೀದೇ ತಾನಂದನಾ ‖ ೧೦ ‖
"ಕುಂಟನು ಬೇಡ ನನಗೆ ಕುರುಡನು ಬೇಡ ನನಗೆ
ಬಂಜೆಯೆಂಬಂಥ ಶಬದ ಮರಕೋಡೋ" ತಾನಂದನಾನ್ನ ‖ ೧೧ ‖

▪ ಹೇಳಿದವರು: **ತೊಳಶು ನಾಗು ಗುನಗ,** ಅಡಲೂರು ತಾಲೂಕ: ಅಂಕೋಲಾ

# ೮೨. ಹೆಣ್ಣೀಗೆ ಹೆಣ್ಣಾಗಿ ನಿತ್ತಳಂತೆ

ಕೋಲೂ ಕೋಲಣ್ಣ ಕೋಲೇ ‖ ರಣ್ಣದಾ
ಕೋಲೂ ಕೋಲಣ್ಣ ಕೋಲೇ ‖ ಪ ‖
ಊರಾನ ಗೌಡನ ಮಗಳು. ಊರಾನ ಗೌಡಾನಾ ಮಗಳೂ
ನೀರಿಗೆ ಹೋಗಳ್ಯಂತೆ ನೀರೀಗೆ ಹೋದಲ್ಲಿ ‖ ೧ ‖
ಕಟ್ಟೀ ಮೇನೋಂದು ಜಾಣಾ । ಕಟ್ಟೀ ಕೈಹಚ್ಚೀ ವಗ್ದನಂತೇ । ರಣ್ಣದಾ ‖ ೨ ‖
ಕೋಲೂ ಕೋಲಣ್ಣ ಕೋಲೇ ‖ ರಣ್ಣದಾ
ಕೋಲೂ ಕೋಲಣ್ಣ ಕೋಲೇ ‖ ೩ ‖
ರಟ್ಟೀ ಕೈಹಚ್ಚೀ, ವಗ್ದನಂಬೂ ಶಮ್ಯದಲ್ಲಿ
ಹಾರೂ, ಹದ್ದಾಗಿ, ಹಾರದಂತೆ ಹೆಣ್ಣೂ, ‖ ೪ ‖
ಹಾರೋ ಹದ್ದಾಗಿ ಹಾರಾಳಂಬೂ ಶಮ್ಯದಲ್ಲಿ
ಉಕ್ಕಿನಾ ಬಿಲ್ಲಿಟ್ಟೀ ಹೊಡ್ದನಂತೆ ಜಾಣಾ ‖ ೫ ‖
ಉಕ್ಕಿನ ಬಿಲ್ಲಿಟ್ಟೀ, ಹೊಡ್ದನಂಬೂ ಶಮ್ಯದಲ್ಲಿ
ಇಂಬೀ ಹಣ್ಣಾಗೀ ಉದ್ರಳಂತೆ ಹೆಣ್ಣೂ ‖ ೬ ‖
ಇಂಬಿರಿ ಹಣ್ಣಾಗೀ ಉದ್ರಳಂಬ ಶಮ್ಯದಲ್ಲಿ
ಉಕ್ಕಿನ ಚೂರೀಟ್ಟೀ ಕೊರ್‌ದನಂತೆ ಜಾಣಾ ‖ ೭ ‖
ಉಕ್ಕಿನ ಚೂರೀಟ್ಟೀ ಕೊರದನಂಬು ಶಮ್ಯದಲ್ಲಿ
ರಾಗೀ ಕಾಳ್ಯಾಗೀ, ಉದ್ರಳಂತೆ ಹೆಣ್ಣೂ ‖ ೮ ‖
ರಾಗೀ ಕಾಳ್ಯಾಗೀ ಉದ್ರಳಂಬು ಶಮ್ಯದಲ್ಲಿ
ಕೂಗೂ ಹುಂಜಾಗೀ ಕೊರ್ಕನಂತೆ ಜಾಣಾ ‖ ೯ ‖
ಕೂಗೂ ಹುಂಜಾಗೀ ಕೊರ್ಕನಂಬೂ ಶಮ್ಯದಲ್ಲಿ
ಹರ್ವಾ ಹಳ್ಳಾಗೀ ಹರ್‌ದಳಂತೆ ಹೆಣ್ಣೂ ‖ ೧೦ ‖
ಹರ್ವಾ ಹಳ್ಳಾಗೀ ಹರ್‌ದಳಂಬೂ ಶಮ್ಯದಲ್ಲಿ
ಶೀತಗಟ್ಟೂ, ಜಾಣ ಹೊಡ್ದನಂತೆ ರಣ್ಣದಾ ‖ ೧೧ ‖

ಶೀತಗಟ್ಟೂ ಜಾಣ ಹೊಡ್ದನಂಬೂ ಶಮ್ಯದಲ್ಲಿ
ಹರವಾ ಶರಪಾನಾಗಿ ಹರ್ದಳಂತೆ ಹೆಣ್ಣೂ ॥ ೧೨ ॥
ಹರ್ವಾ ಶರ್ಪಾಗೀ ಹರ್ದಳಂಬೂ ಶಮ್ಯದಲ್ಲಿ
ಮುಂಗ್ರೀ ಮರ್ಯಾಗೀ ಮುರ್ದನಂತೆ ಜಾಣಾ ॥ ೧೩ ॥
ಮುಂಗ್ರೀ ಮರ್ಯಾಗೀ ಮುರ್ದನಂಬೂ ಶಮ್ಯದಲ್ಲಿ
ಮದ್ದಿನ ಗಿಡವಾಗೀ ನಿತ್ತಳಂತೆ ಹೆಣ್ಣೂ ॥ ೧೪ ॥
ಮದ್ದಿನ ಗಿಡವಾಗೀ ನಿತ್ತಳಂಬೂ ಶಮ್ಯದಲ್ಲಿ
ಬುಡ್ಕೀ ಕೈಹಾಕೀ ಜಾಣ ವಗ್ದನಂತೆ ॥ ೧೫ ॥
ಬುಡ್ಕೀ ಕೈಹಾಕೀ ವಗ್ದನಂಬೂ ಶಮ್ಯದಲ್ಲಿ
ಹೆಣ್ಣೀಗ ಹೆಣ್ಣಾಗೀ ನಿತ್ತಳಂತೆ ರಣ್ಣದಾ ॥ ೧೬ ॥
ಕೋಲೂ ಕೋಲಣ್ಣ ಕೋಲೇ ॥ ರಣ್ಣದಾ
ಕೋಲೂ ಕೋಲಣ್ಣ ಕೋಲೇ

❖

# ೮೩. ಕೋಲೆಂಬೂ ಗೀಜಗನೇ

ಶೆಟ್ಟೀ ಬೆಟ್ಟದ ಮೇನೇ
ಹುಟ್ಟಿದೊಂದು ಬಿದುರಾ
ಕೋಲೇ ಕೋಲೆಂಬೂ ಗೀಜಗನೇ ॥ ೧ ॥
ಹುಟ್ಟಿತೊಂದು ಬಿದ್ರ ಕೋಲು
ಜಾಡಕಾರ ಕತ್ತ್ಯೋ
ಜಾಡಕಾರ ಕತ್ತಿಗೇ
ಲಾಗಿತ್ತೊಂದು ಗೊಡ್ ಮೊರಾ ಕೋಲೂ ॥ ೨ ॥

ಆಗಿತ್ತೊಂದು ಗೂಡ್‌ಮೊರಕೇ
ಖಿಂಡ್ಗ ಖಿಂಡ್ಗ ಬತ್ತ
ಚಿನ್ಮಾಯಂತಾ ಯೇಲಿಯೋ
ಚಿನ್ಮಯಂತಾ ಯೆಲಿಗೇ
ರಾವ್ ಗಣ್ ಬೆಕ್ಕೋ ‖ ಕೋಲೂ ‖ ೩ ‖
ರಾವ್ ಗಣ್ ಬೆಕ್ಕಿಗೇ
ಜಾಲ್ ಮಾವ್ ಕುನ್ಯೋ
ಜಾಲ್ ಮಾವ್ ಕುನ್ನಿಗೇ
ಗೇರ್ ಕಾರ್ಯ ಪಟ್ಟಿ ಹುಲಿಯೋ
ಗೇರ್ ಕಾರ್ಯ ಪಟ್ಟಿ ಹುಲಿಗೇ
ಬೆಳ್ಳಿ ಕಟ್ನ ಕೋವ್ಯೋ ಕೋಲೂ ‖ ೪ ‖
ಬೆಳ್ಳಿ ಕಟ್ನ ಕೋವಿಗೆ
ಇಜ್ಜಾ ನಾಗರ ಮದ್ದೋ
ಇಜ್ಜಾ ನಾಗರ ಮದ್ದೀಗೇ
ಬಂಕಾಪೂರ್‌ದ ಬೆಂಕ್ಯೋ ‖ ಕೋಲೂ ‖ ೫ ‖
ಬಂಕಾಪೂರದ ಬೆಂಕಿಗೆ
ಹರ್‌ವಾ ಜಲದಿ ನೀರೋ ‖ ಕೊಲೂ
ಹರ್‌ವಾ ಜಲದಿ ನೀರಿಗೇ
ವಕ್ರ ಕಾಲ್ ಯೆಮ್ಮ್ಯೋ
ವಕ್ರ ಕಾಲ್ ಯೆಮ್ಮಿಗೇ ‖ ಕೋಲೂ ‖ ೬ ‖
ಪಾವ್ ಶೇರ್ ಹಾಲೋ
ಪಾವ್ ಶೇರ್ ಹಾಲಿಗೇ
ಬೆಳ್ಗಲ್ಲಂತಾ ಬೆಣ್ಣ್ಯೋ
ಪಾವ್ ಶೇರ್ ಬೆಣ್ಣಿಗೇ
ತಾಗಿದೊಂದು ಹಣವೋ ‖ ಕೋಲೂ ‖ ೭ ‖
ತಾಗಿದೊಂದು ಹಣವಕ್ಕೇ

ಇಪ್ಪತ ಮೊಳ್ನ ಸಾಲ್ಯೋ
ಇಪ್ಪತ ಮೊಳ್ನ ಸಾಲಿಗೇ
ಹದ್ನಾರೆ ವರ್ಸನ ಹುಡಗ್ಯೋ ‖ ಕೋಲೂ ‖ ೮ ‖
ಹದ್ನಾರೆ ವರ್ಸನ ಹುಡ್ಗಿಗೇ
ಹದ್ನೆಂಟ್ ವರ್ಸನ ಹುಡ್ಗನೋ ‖ ೯ ‖

▪ ಹೇಳಿದವರು: **ಶಿವಿ ಜೆಟ್ಟಿ ಮುಕ್ರಿ**, ಹೊಲನಗದ್ದೆ

❖

# ೮೪. ಬಣ್ಣದಾ ಹಕ್ಕಿಯೇ

ಉದ್ದಿನ ಗದ್ದಿಯಲ್ಲೇ ಉರಿದೋಲೋ ಬಣ್ಣದಾ ಲಕ್ಕಿಯೇ
ಉದ್ದಿನ ಗದ್ದಿಯಲ್ಲೇ ಉರಿದೋಲೋ ಕೋಲೇ ‖ ೧ ‖
ಕಾಲೂ ನೋಡಿದರೇ ಕಡಗೆಂಪೂ ಬಣ್ಣದಾ ಲಕ್ಕಿಗೇ
ರಟ್ಟೇ ಮೇನೇ ಪಟ್ಟೇ ಹೊಳೀದೋಲೋ ಕೋಲೇ ‖ ೨ ‖
ಕಣ್ಣ ನೋಡಿದರೇ ಗುರುಗುಂಜೀ ಬಣ್ಣದ ಲಕ್ಕಿಗೇ
ಕಣ್ಣು ನೋಡಿದರೇ ಗುರುಗುಂಜಿಯೋ ಕೋಲೇ ‖ ೩ ‖
ಯೆಲ್ಲಿಂದೇ ಯೆಲ್ಲೀಗೇ ಹಾರೂರೂ ಬಣ್ಣದಾ ಲಕ್ಕಿಯೇ
ಮೇಲೇಳೂ ಗಗನಕ್ಕೇ ಹಾರಿದವೋ ಕೋಲೇ ‖ ೪ ‖
ಅಲ್ಲಿಂದೇ ಯೆಲ್ ಹೋಗೇ ಕುಂತೋರೋ ಬಣ್ಣದಾ ಲಕ್ಕಿಯೇ?
ಆಲಾದಾ ಮರಕೆ ಹೋಗೇ ಕುಳೀತೋರೋ ಕೊಲೇ ‖ ೫ ‖
ಕಾಯ್ ಬಿಟ್ಟ್ ಹಣ್ಣಾ ಮೆಲವೊಲೇ ಬಣ್ಣದಾ ಲಕ್ಕಿಯೇ
ಹಣ್ಣ ತಿಂದಿ ಬೀಜಾ ಉಗೂಳಿದವೋ ಕೋಲೇ ‖ ೬ ‖
ಬಿದ್ದಾ ಬೀಜ್ಯಾಲ್ಲಾ ಬೆರಗಂಡೂ ಬಣ್ಣದಾ ಲಕ್ಕಿಯೇ
ಬಿದ್ದಾ ಬೀಜ್ಯಾಲ್ಲಾ ಬೆರಗಂಡೋ ಕೋಲೇ ‖ ೭ ‖

ಅಲ್ಲಿಂದೆ ಯೆಲ್ಲೀಗೇ ಹಾರ್ಯೋರೂ ಬಣ್ಣದಾ ಲಕ್ಕಿಯೇ
ಕಡಲೇಳೂ ಸಮುದೂರಕೇ ಹಾರಿದವೋ ಕೋಲೇ ॥ ೮ ॥
ಬೇಲೆಮೇನ್ ಹೋಗೇ ಕುಳಿತೋರೂ ಬಣ್ಣದಾ ಲಕ್ಕಿಯೇ
ಲಾಸುರು ದಾವಿರನೇ ಕುಡಿದೋರೂ ಕೋಲೇ ॥ ೯ ॥

❖

# ೮೫. ಬಾರೇ ಗೀಜಗತೀ

ಆಡ ಬಂದಿದೇ ಬಾರೇ ಗೀಜಗತೀ
ಓಡ ಬಂದಿದೇ ಬಾರೇ ಗೀಜಗತೀ ॥ ಪಲ್ಲವಿ ॥
ಗೀಜಗ್ತಿ ಮನೆಯಲ್ಲಿ ಶ್ರೀಗಂಧ ಪರಿಮಳ
ಆಡ ಬಂದಿದೇ ಬಾರೇ ಗೀಜಗತೀ ॥ ೧ ॥
ತೂಕದ ಹಾರವ ಹಾಕೀದ ಬಳಗವ
ನಾರೀಯೋರೆಲ್ಲ ಕೂಡಿಲಿಡ ಬಂದಿದೇ
ಆಡ ಬಂದಿದೇ ಬಾರೇ ಗೀಜಗತೀ ॥ ೨ ॥
ಮಣಿಮಯ ಹಾರವ ಪಣಿಯಲ್ಲಿ ದರಿಸಿ
ಆಡ ಬಂದಿದೇ ಬಾರೇ ಗೀಜಗತೀ ॥ ೩ ॥
ಕೋಲೂ ಕೋಲೆಂಬದು ಕೈಯಲ್ಲಿ ನಿತ್ತಿತು
ಚೇಣಿ ಕೋಲಿನಾಟಾನಾಡಿ ಬಂದಿದೇ
ಆಡ ಬಂದಿದೇ ಬಾರೇ ಗೀಜಗತೀ ॥ ೪ ॥
ಹಾರವ ಹಾಕಿದ ಮಾನವರಿಗೆ
ನಾರಿಯರೆಲ್ಲರು ಬಂದಿ ಓಡಾಡಿ ಬಂದಾಗೆ
ಆಡ ಬಂದಿದೇ ಬಾರೇ ಗೀಜಗತೀ ॥ ೫ ॥
ಬಳಗವ ಕೂಡಿಕೊಂಡು ಮಣಿಹಾರ ಹಾಕಿಕೊಂಡು
ಬಳಗವ ಬಾಚಿಕಿ ವರಬೇಡೇನಂದಳೂ
ಆಡ ಬಂದಿದೇ ಬಾರೇ ಗೀಜಗತೀ ॥ ೬ ॥

ಗೀಜಗ್ತಿ ಮನಿಯಲ್ಲಿ ಶ್ರೀಗಂಧ ಪರಿಮಳ
ಆಡ ಬಂದಿದೇ ಬಾರೇ ಗೀಜಗತೀ ॥ ೭ ॥
ಕಂಕಣ ಹಾರವ ಕೈಯಲ್ಲಿ ದರಸೀ
ಕಾಲಗೆಜ್ಜೆ ನೋಡಕಂಡು ಓಡ ಬಂದಿದೆ
ಆಡ ಬಂದಿದೇ ಬಾರೇ ಗೀಜಗತೀ ॥ ೮ ॥
ಸರ್ಪವ ಸುತ್ತಿಕೊಂಡು ಹಾರವ ಹಾಕಿಕೊಂಡು
ಹಣಿ ಮೇಲೆ ಮೇಲಚಾವಟ್ಟು ಹಾಕಿಕೊಂಡಿದೇ
ಆಡ ಬಂದಿದೇ ಬಾರೇ ಗೀಜಗತೀ
ಓಡ ಬಂದಿದೇ ಬಾರೇ ಗೀಜಗತೀ ॥ ೯ ॥

▪ ಹೇಳಿದವರು: **ಧಾಕು ನಾಯ್ಕ**, ಅರಗಾ

❖

# ೮೬. ಆಹಾ! ಯಂತಾ ಶುಂದರಿ!

ಆಹಾ! ಯಂತಾ ಶುಂದರಿ! ನಾನ ನೋಡಿ ಬಂದೇ
ಯಾವರ್ ದನುವೇನ ಶಂದ ಕಾನೂಶ್ತ ನಮ್ಮ ತಂಗೀ
ಯಾವರ್ ದನುವೇನ ಡೌಲು ತೋರುಶತನೇ ॥ ೧ ॥
ಬಂಗರ ಜುಲೇ ನಿಟ್ಟಿದಾನೆ ಕೆಂಪದ ಕಪ್ಪ ಲತ್ತಿದಾನೆ
ಯಾವರ್ ದನುವೇನ ಶಂದ ಕಾನೂಶತ ನಮ್ಮ ತಂಗೀ ॥ ೨ ॥
ಇಲ್ಲಿ ದಾರಿಯಲ್ಲಿ ಕುಂತಿ ಇಂತಾ ಶಲುವಿ ಯೆಲ್ಲುಕಾನೆ
ಕಲ್ಲಿನಂತಾ ದೇಯ ಕರಗಿ ನೀರಾ ನೀರಾ ॥ ೩ ॥
ಮುಂಡ್ಗಿ ಮುಂಡಾಸ್ ಕಟ್ಟಿದ್ದನೆ ಮುತ್ತಿನ ತೂರಾಯ್ ಇಟ್ಟಿದಾನೆ
ಹನ್ಯ ಮೇನೆ ನ್ಯಾಮದ್ ಬೊಟ್ಟು ತಲ್ಯುಮೇನೆ ಜುಟ್ಟು ಬಿಟ್ಟಿ ॥ ೪ ॥
ಬೆಲ್ಲದಂತಾ ಮುತ್ತುಕಟ್ಟಿ ಗಲ್ಲಗಲ್ಲವ ಕೊನಶಿದ್ದೆ
ಕಲ್ಲುಶಕ್ರೆ ಕಡ್ಡಂಗಾಯ್ತು ಕರಾತರಾ ॥ ೫ ॥

# ೮೭. ಮೋಟಾರಿನ ಆಕೃತಿಯ ರಚನೆ ಮಾಡಿ ತಂದು ಹೇಳುವ ಪದ

ಬೇಲೀ ಮಗಿನ ಗಂಡ ನಾನು ಮೊಟರದಾಯ್ವರಾ
ಹೆಣ್ತಿತಂಗಿ ಮಾರಕಂಡು ಕಾರಮೋಟಾರಾ
ಮೋಟರ ಮೇನೆ ಕೂತಕಂಡು ಬೇಕಾದ ಮಜಮಾಡ್ತೇ ‖

❖

# ೮೮. ಗಂಡನಿಲ್ಲದ ಗರತಿ

ಸಾಣಿಕಟ್ಟಿನ ಸಣ್ಣತಂಗಿ ಮಗುಲೇ
ಶುಣ್ಣ ಕೊಡುವಿಯೇನೇ ‖ ೧ ‖
ಸುಣ್ಣ ಕೊಟ್ಟರೂ ಸೂಳೆ ಮನೆ ಬರುತ್ಯೋ?
ನಾ ಗಂಡನಿಲ್ಲದ ಗರತಿ ‖ ೨ ‖
ನಾನೀಗೆ ನಿಚ್ಚ ಹಾದರಗಿತ್ತೀ
ನೀ ಇರುವ ಜಾಗ ತೋರು ‖ ೩ ‖
ಶಣ್ಣ ಕೋಣೇಲಿ ಶಾಲೆಯ ಮಂಚದ ಮೇನೆ
ನೆಣಿಯ ಬೆಳಕಿನಲ್ಲಿ ‖ ೪ ‖

▪ ಹೇಳಿದವರು: **ಕುಟ್ಟಪ್ಪ ಹಾಣಿ ಗೌಡ,** ವಂದೂರು

❖

# ೮೯. ಕೋಲೂ ಮೇಲಾಟ (ಮುದ್ಕರ ಕೋಲಾಡೀ)

ಮುದ್ಕರ ಮುದ್ಕರ ಕೋಲೂ ಮುದ್ಕರ ಕೋಲಾಡೀ
ಮುದ್ಕರ್ ಕೋಲ್ ಯಾತಕೇ | ಕವಲಾ ಜಪ್ಪುಕೇ ‖ ೧ ‖
ಮುದ್ಕಿರ ಮುದ್ಕಿರ ಕೋಲೂ ಮುದ್ಕಿರ ಕೋಲಾಡಿ
ಮುದ್ಕಿರ್ ಯಾತಕ್ ಮೇಲೂ ಶಾಡೀ ಹೋಲೂಕೆ ‖ ೨ ‖
ಪುಂಡಿರ್ ಪುಂಡಿರ್ ಕೂಡೀ ಪುಂಡಿರ್ ಕೋಲಾಡಿ
ಪುಂಡಿರ್ ಯಾತಕ್ ಮೇಲೂ ಉಂಡೇ ತಿಂಬೂಕೇ ‖ ೩ ‖
ಪುಂಡಗಾರ್ ಪುಂಡಗಾರ್ ಕೂಡೀ ಪುಂಡ್ಗಾರ್ ಕೋಲಾಡೀ
ಪುಂಡಗಾರ್ ಯಾತಕ್ ಮೇಲೂ ಹಾಣೀ ಯೇಶೂಕೇ ‖ ೪ ‖
ಕೋಲು ಕೋಲಾಟಾ ಕೋಲೂ ಮೇಲಾಟಾ
ನಾರೀ ನಿನ್ನಾಟ ಕಬ್ಬಿನಗದ್ದೇಲೀ ‖ ೫ ‖

▪ ಹೇಳಿದವರು: **ಕರಿಯಮ್ಮ ರಾಮಕೃಷ್ಣಗೌಡ,** ಕಲ್ಕೋಡು, ಹೆಗಡೆ ಊರು

❖

# ೯೦. ಸುಗ್ಗಿ ಕುಣಿತ

ರಂಬೆ ಚಾರೂಚೀ ರಂಗೋಲೀ ಹೊಯ್ದೇವೆ
ರಂಬೆ ನಿನ ಮಗಲ ಮದವೀಯೇ ‖ ಮದವೀ ಶುದ್ದಿಕೆಲೀ
ರಂಗೋಲಿ ಪತ್ರಕನ ಬರದಿದ್ದೆ ‖ ತಂಗೀ, ಕೇಲೇ ‖ ೧ ‖

ತೆಂಗೂ ಲನ್ಯೆಯ್ದೂ ಹೆ(ಯೆ)ಡೆ ಕಡುದೇ ‖ ಹೆದ್ಯಕಡದೀ
ಗುಡುಗಾರಾ ಮನೆಗೇ ಹೋಗೂ ಬೇಕೇ ‖ ಹೋಗೂಬೇಕಂದೇಲೀರೋ
ತೂರಾಯದಾ ಕರ್ಯೇ ಮಾಡುಬೇಕೋ ‖ ೨ ‖

"ಕೆಲರೆ ಕೇಲಾಲೇ ಗುಡುಗಾರರೆ, ನೀವು ಕೇಲೀ
ತೂರಯ್ದು ಲನೈಡ ಕಡ್ಡಿಬೇಕs"
ಅಷ್ಟೆಲ್ಲಾ ಮಾತೇ ಕೇಲೀರೆ ಗುಡುಗಾರರೇ ‖ ೩ ‖
ಬೆಂಡಿನ ಕೊಣೀಗೇ ನೆಡದೀರೇ ‖ ನೆಡುದೀರು ಗುಡುಗಾರರೇ,
ಚಣ್ಣಿಂದೇ ಬೆಂಡ ಕೊರ(ರು)ದೀರೇ ಗುಡುಗಾರರೇ
ಕಡ್ಯಲ್ಲೇ ಆದರೂ ಸುರುದೀರೇ ಗುಡುಗಾರುರೇ ‖ ೪ ‖
ಚಣ್ಣೆಂದೇ ಬನ್ನಾ ಬಡದೀರೋ
ಹಚರೂ ಕೆಂಪ ಬಣ್ಣಾ ಹಲದೀ ನೀಲ ಬರದಾ
ಮೇನೇ ಚಕ್ಕರದು ಹೂವಾ ಬಿಡುದೇ ‖ ಗುಡುಗಾರುರೇ ‖ ೫ ‖
ಮೇನೇ ಚಕ್ಕರದಾ ಲೂವಾ ಬಿಡ್ತೆಲೆತ್ತರೇ
ಚಣ್ಣಿಂದೆ ಗಿಳಿಯೂ ಬರದೀರೇ ‖ ಬಿಡುಬೇರೇ ಗುಡುಗಾರುರೇ
ತುರಾಯಿ ಚಂದ ಹಲೀಬಣ್ಣಾ ‖ ೬ ‖
ಅದುರಾ ಲಲಿಬಣ್ಣ ಬಿಡುಚಲೆ ಕಂಡ
ಗೌಡನ ಕೂಡೆ ಲದುರಾ ಕೊಡುವೋರೇ ‖ ಕೊಡುವೋನೇ ಗುಡುಗಾರ
ತಾಗಿದರ ಹಣವೇಲ್ಲಿಡೂದೀನೆ ‖ ೭ ‖
ತಾಗಿದ್ದರ ಹಣವೇ ಕೊಡುವೋನೇ ‖ ಎಲೆಗೌಡ
ಹಿಂ(ಲಂ)ದಕೂ ಮನೆಗೇ ಬರುವೋನೇ ‖ ಎಲೆಗೌಡ
ಬಾಗೀಲಲೆ ಬಂದೇ ನಿಲುವೋನೇ ‖ ೮ ‖
ಬಾಗಿಲಲೆ ಬಂದೇ ನಿಲ್ಲೂ ಹೊತ್ತಿನಲ್ಲೀ
ನೀರ ಹಾಕೇ ಕಾಲತೊಲದೀನೇ ‖ ಎಲೆಗೌಡ
ದೇವರ ನೆಡುಗೆ ಹೋಗೇ ಮಡಗೀದ ‖ ಮಡಗೂ ಹೊತ್ತೀನಲ್ಲಿ ‖ ೯ ‖
ಯೇನಂದೇ ಮಾತ ನುಡುದದೀನೇ?
ಕೇಲಲೆ ಕೇಲಾಲೇ ಯೆಲೆಮಡುದೀ ನೀ ಕೇಲೇ
ಹಲಗಾಯಿ ವಡದ ಹಾಲಲೇ ತಗದೀಡೇ ‖ ಮಡುದೀಕೇಲೇ ‖ ೧೦ ‖

ಸುಗ್ಗೀ ಶಟುವತ ದಿನವಾಲೇ ॥ ಮಡುದೀ ಕೇಲೇ
ಬೆಲ್ಲಾಕೆ ಪಾಯಾಸ ಮಾಡೂಬೇಕೇ । ಮಡುದೀ ಕೇಲೇ
ಎಲ್ಲೂ ಜೀರಿಗಿಯೇ ಹೊಡೀಗ್ಯೆದ ॥ ಮಡುದೀ ಕೇಲೇ ॥ ೧೧ ॥

ಪಾಯ್ಚಕೂ ಪರಮಲ ಬರಬೇಕೇ । ಮಡುದೀ ಕೇಲೇ
ಲಲ್ಲೀ ಮಾಡಿದ ಪಾಯ್ಚ ಮಾಲುಗಿಯಲ್ ಪರಿಮಾಲs ॥ ಮಡುದೀ ಕೇಲೇ
ಮೇಲಿಂದ ಉ(ಲು)ಪುರುಗಿಗೇ ಪರಿಮಾಲ ॥ ಪರಿಮಾಲದ ಪಾಯ್ಚ ॥ ೧೨ ॥

ಹಚ್ಚರುದೇ ನೀನೇ ಬಡಚೇಡೇ ॥ ಬಡಚೇಡು ಮಡುದೀ ಕೇಲೇ
ವಬ್ಬರು ತಪ್ಪದೇ ಮರೆಬೇಡ ॥ ಮಡದೀ ಕೇಲೇ
ಊರಕೇರ್ಯಾಗೇ ಬಡಚೇಡೇ ॥ ೧೩ ॥

ಊರಕೇರ್ಯಾರಿಗೇ ಚಡುಬೆಟ್ಟ ಮಡುದೀ ಯೆಲೆ ಮಡದಿ
ಮದ್ದುದಾತುರೀಗೇ (ಯೇ) ಚಮನಾಗೇ ॥ ಯೆಲೆ ಮಡದಿ
ಚುಗ್ಗೀ ಕೊನಿವಾಕೇ ಹೊರಟೀದೇ ॥ ೧೪ ॥

ಡೊಲಕ ದಮುಟ್ಯೇ ಲೆರ್ಡ ಕೈಯಗು ತಾಲ ಲಿಡುದ
ಬಗ್ಗೇ ಮಾಲುಗೀಯೇ ಹೆರಟೀನೆ ॥ ಹೆರಟರೆ ಗಂಡುಮಕ್ಕಲೇ
ಕಯ್ಯ್ಯಾಲಿ (ಲೆ) ಬಣ್ಣದ ವಲ್ಲೀ ಹಿಡುದ ॥ ಹಿಡುದಲೆ ಕಂಡೀ ॥ ೧೫ ॥

ರಾಜಂಗುಲದಲ್ಲೇ ನೆಡದೀನೇ ॥ ಹೋಗೂ ಹೊತ್ತಿನಲ್ಲೀ
ನೂರೊಂದೂ(ದ) ಜನರೇ ನೆರದೀರೇ ॥ ನೆರುಗೂ ಹೊತ್ತಿನಲೇ
ಯೇನಂದೇ ಮಾತ ನುಡುದೀದೇ? ॥ ೧೬ ॥

ಚುಗ್ಗೀ ಕಣ್ಣನಲ್ಲೇ ಕುಲ್ಲೂ ಹೊತ್ತಿನಲ್ಲೀ
ಲುಕ್ಕೀನಾ ಕತ್ತೀ ಲಿಡೂಕಂಡ ॥ ಗಂಡುಮಕ್ಕಲೇ
ಬಂಗರದ ಕೋಲ ಲಿಡುದೀರೇ ॥ ೧೭ ॥

ಬಂಗರದ ಕೋಲ ಕಯ್ಯಲ್ಲೇ ಲಿಡುಕಂಡೀ
ಚಣ್ಣಿಂದೇ ಲದರ ಕಡದೀರೋ ॥ ಕಡದೀರೆ ಗಂಡುಮಕ್ಕಲೇ
ಬೆತ್ತದ ಚಲುಕೇ ಬೇಗುದೀರೇ ॥ ಗಂಡುಮಕ್ಕಲೇ ॥ ೧೮ ॥

ಕೋಟೇಯರು ಕೋಲೂ ಚೆಗುದೀರೇ ॥ ಚೆಗುದೀರೋ ಗಂಡುಮಕ್ಕಲು
ಬನ್ನಾದರ ಕುಂಚ ಗೆಯದೀರೇ ॥ ಗಂಡುಮಕ್ಕಲೂ
ಬೆಟ್ಟದನ ನವಲ ಗಿರೀತಂದೆ ॥ ಗಂಡುಮಕ್ಕಲೂ ॥ ೧೯ ॥

ಬಣ್ಣದಾ ಕುಂಚ ಗೆಯದೀರೇ ‖ ಗಂಡುಮಕ್ಕಲೂ
ಲನ್ನೈಡ ಚಾಜಾ ನೆಯದೀರ
ಲನ್ನೈಡ ಕುಂಚಾಕೇ ಲನ್ನೈಯ್ದು ತೂರಾಯ ‖ ೧೦ ‖
ಲನ್ನೈಡ ಜನರೇ ನಿಲುವೋರೇ ‖ ನಿಲ್ಲೂ ಹೊತ್ತಿನಲ್ಲಿ
ಮಲ್ಲೂಗಿ ಹೂಂಗ ಬಿಡೀಚೂರೆ ।
ಲನ್ನೈಡ ಕುಂಚಾಕೇ ಲನ್ನೈಡ ಮಲ್ಲುಗಿ ಜಲ್ಲಿ ‖ ೧೧ ‖
ಲನ್ನೈಡ ಜನರ ತುರುವೀಗೇ ‖ ತುರುವೀಗಿಟ್ಟಲೇಕಂಡೀ ಗಂಡುಮಕ್ಕಲೂ
ರಾಜಂಗಲನಲ್ಲೇ ನಿಲೂತೀರೇ । ನಿಲ್ಲೂ ಹೊತ್ತಿನಲ್ಲೀ
ಮುರುದಂಗು ದಮಟೇ ಲಿಡದೀರೇ ‖ ಗಂಡುಮಕ್ಕಲೇ ‖ ೧೨ ‖
ಡೋಲೂಕಿ ತಾಲಂಡೂದೀರೇ ‖ ಹಿಡಿವಂತಾ ಹೊತ್ತೀನಲ್ಲೀ
ಮುಂಗೈಯಾ ಮುರುದೇ ಲೊಡದೀರೋ ‖ ಹೊಡಿವಂತಾ ಹೊತ್ತೀಗೇ
ಹೊಯ್ಲುದ ಮೇಲಿ ಕುಣಿತ ಕೋಣಿದೀರೇ ‖ ೧೩ ‖
ಹೊಯ್ಲುದ ಮೇನೆ ಕೊನುತ ಕೊನವಂತ ಹೊತ್ತೀಗೇ
ಕನಕಾಲ ಮುರುದೇ ಕೊನೀವಾರೋ ‖
ಕಾಲಗುರುಗೆಜ್ಜೆಲಿಟ್ಟ ಹನ್ನೈಡ ಹೊಯ್ಲು ಹೊಡಿದ ‖ ೧೪ ‖
ಲನ್ನೈಡ ಹೊಯಿಲ ಹೊಡ್ದು ಗಂಡ ಮಕ್ಕಲೇ
ಲನ್ನೈಡ ದೇವರಿಗೆ ಲ್ಫಿತುವಾದ ‖ ನಮ್ಮೂ್ರಾ
ಯಾರೂ ಕೊನುದದುರ ‖ ೧೫ ‖
ಯಾರೂ ಹೊಡದೀದ ಹೊಯ್ದು ಚುಗ್ಗೀಕುಣಿತ
ಈ ಊರ ಮುಂದೇ ಕೊಣದೀರೇ ‖ ನಮ್ಮೂ್ರ್‌ನ
ಬೂಮೀ ತಗ್ದಿ ಬೂಮಿ ನೆಲ ಚೋಕೇ ‖ ಕಲ್ಕೊಡೂರ ‖ ೧೬ ‖
ಚುಗ್ಗೀ ಕೊನ್ದ ಬಾಲ ನೆಲೂನಂಪೇ ಕಲ್ಕೊಡೂರ
ಯಾವೂರ ಚುಗ್ಗೀ ಕೊನುದರಿಯಾ?
ದಿಕ್ಕೂದಿಕ್ಕೇಗೂ ಹದಿನೆಂಟ ಚೀಮ್ಯಾಗೂ ‖ ೧೭ ‖
ನಮ್ಮೂ್ರ ಚುಗ್ಗೀ ಕೊನುದೀರೇ ‖ ಕೊನುದಾಂಗೆ ಕಲ್ಕೊಡೂರ
ದೇಮಾಟೀ ತಾಲ ಬೂರೂಗ ಹಾಂಗೇ
ಯಾವೂರ ಚುಗ್ಗೀ ಬಂದೀದೆ? ‖ ಮುಂದಾಗಿ ಕುಲುವೋರೇ ‖ ೧೮ ‖

ನಮ್ಮೂರ ಚುಗ್ಗಿ ಕೂನುದಾಂಗೇ
ನಮ್ಮೂರ ಚುಗ್ಗಿ ಬಂದರೇ ಮಂದೀ ಬಂದು ನೋಡೂರೂ
ನಮ್ಮೂರ ಚುಗ್ಗಿಯಟ್ಟು ಬೇರಿಯಿಲ್ಲ ॥ ೧೯ ॥
ಚಾವಿರಚಂಗೋಲಿಗೇ ಕುಮಟೀಯ ಪೆಟೀಗೇ
ಯಾರೂ ಮಾಡೀದ ತೂರಾಯವ?
ಯಾರೂ ಮಾಡೀರದುರೇ ಇಟ್ಟ ಉಂಚೆಲ್ಲವೋ ॥ ಕುಮಟೀಯ ॥ ೨೦ ॥
ಯಾರೂ ಮಾಡೀದ ತೂರಾಯವ? ॥ ತೂರಾಯ ಕುಮ್ಮೈಪೇಟೇ
ಗುಡುಗಾರ ಮಾಡೀದಾ ಗಿಲಿಬಣ್ಣಾ ॥
ಗಾಲೀಗೆ ಹಾರುವದಿಲ್ಲ ನೀರೀಗೆ ಲದ್ದುವದಿಲ್ಲ ॥ ೨೧ ॥
ಈ ಬೆಂಡ ಯಾರೂ ಕೊರದೀರೇ? ॥ ಕೊರ್ದಿ ಕೊಟ್ಟ ತೂರಾಯ
ಕುಂತೀ ನೋಡಿದರೇ ಲರಗಲಿಗೇ ॥
ಯೆಟ್ಟೂ ತುರಾಯ ನೋಡ್ದೇ ॥ ಯೆಟ್ಟೂ ಚುಗ್ಗಿಯ ನೋಡ್ದೇ ॥ ೨೧ ॥
ಈ (ಲೀ) ತೂರಾಯದ ಮೇನೇ ಮನುಚಾದಲಿ ॥ ಕಣ್ಣಿಗ್ ದಿಟ್ಟೀ ಹತ್ತೇ
ಯಾರೂ ಕೊಣದಿದುರ ಕೊಣತವ? ॥ ಕಲ್ಕೊಡೂರ
ಹುಡುಗಾರ ಕೊಣದ ಕೊಣತವ ॥ ೨೨ ॥
ಲಿಲ್ಲೀ ಗಲ್ಲೀಗೆ ಬೆಂಗ್ಳೂರ ಪೇಟೇಗೂ
ಅಲ್ಲೀದೇ ಬಂತೂ ಕರೆಯಲ ಗಂಡಮಕ್ಕಲೇ
ನೀವು ಕಟ್ಟಿದ ಚುಗ್ಗೀ ಮನಚಾಗೇ ॥ ಗಂಡುಮಕ್ಕಲೇ ॥ ೨೪ ॥
ನೀವ್ ಹೇಲೀದಾಡ ಚರೀಯಾಗೇ
ಲಿಲ್ಲೀದೆಲ್ಲೀಗೇ ಹೆಗ್ಗಡೇ ಪೇಟೇಗೇ
ಲಿಲ್ಲೀದೇ ಫೋನ ಬರತೀದ ॥ ಗಂಡುಮಕ್ಕಲೇ ॥ ೨೫ ॥
ನೀವ್ ಹೇಳಿದ ಪದ ಲರಗೀದ ಗಂಡುಮಕ್ಕಲೇ
ಪೇಟೆಲೆ ಕೊಣದರೇ ಪೇಟೆಲಿಜನ ವದಗೀದ
ಪೇಟೇಲಿ ಜನರೇ ವದಗಿದ ಗಂಡುಮಕ್ಕಳೇ ॥ ೨೬ ॥
ನೀವ್ ಕೊಣಿದ ಕೊಣಿತ ಗಚ್ಚಾದ । ಗಜ್ಜಿನ ಮೇಲಿರುವಾಗೇ
ಕೆಮಿಕೊಟ್ಟಲದುರ ಕೇಲೂವರೆ

ಲಿಲ್ಲೀದಲ್ಲೀಗೇ ಲದನೆಂಟು ಬೆಮಿಯಾ ॥ ೩೭ ॥

ಈ ಊರೇ ಚುಗ್ಗೀ ಹೆರೂದಂದ ॥ ಗಂಡುಮಕ್ಕಲೇ

ನೀವ್ ಹೇಲಿದ ಹಾಡೂ ನುಣೂಪಂದ ॥ ನುಣುವಿನ ಮೇನಿಟಕಂಡಿ

ಮತ್ತೊಂದರ ವಡಿಯ ಕರೇದರ ॥ ೩೮ ॥

ಆಚೆಯಲಿ ಕೊನುದರ ಬಿಟ್ಟ ಈಚೆಯಲಿ ಕೊನುದರ ಬಿಟ್ಟ

ಗುಡ್ಡೇ ಮೂರು ಶುತ್ತೇ ಹೊಡದೀರೇ ॥ ಗಂಡುಮಕ್ಕಲೇ

ಕೊನುದಾರೂ ತಾಮೇ ನಿಲುತೀರ ॥ ನಿಲುತಿರ ಗಂಡುಮಕ್ಕಲೇ । ೩೯ ॥

ಬೆಲ್ಲದ ಪಾನಕವ ಕುಡೀತೀರೆ । ಗಂಡುಮಕ್ಕಲೇ

ಲಿಂತಿರುಗೇ ತಾಮೂ ಬರುವರೇ

ಲಿಂತಿರುಗೇ ಮನೆಗೇ ಬರುವಂತ ಹೊತ್ತೀಗೇ ॥ ೪೦ ॥

ದೊಡ್ಡ ಕಣುನಲ್ಲೇ ನಿಲೂತೀರ ॥ ನಿಲ್ಲೂ ಹೊತ್ತೀನಲ್ಲೇ

ದಮಟೀ ದನಿ ಮೇನೇ ಲೊಡದೀರೇ ॥ ಲೊಡೆವಂತ ಹೊತ್ತೀಗೇ

ಮದುದಾತುರಿಯಾ ನಿದುರೆಲ್ಲೇ ॥ ನಿದುರೇ ಮೇನಿರುವಾಗೇ ॥ ೪೧ ॥

ಶುಗ್ಗಿ ಬಂದೆ ನಮಗೆ ನೊಣಪಿಲ್ಲ

ನಾದೀ (ಹಾದೀ) ನೋಡೀ ತಾಯೀ ನಾದೀ ನೋಡುತಿ ಕುಲ್ಲೇ

ಅಡಗೀ ಮಾಡಡುಗೀ ಮಡುಗಿಟ್ಟೇ ॥ ತಾಯವ್ವಿಯೇ ॥ ೪೨ ॥

ಮಗದಿರ ಬಂದ ಬರವ ಗುರುತಿಲ್ಲ ತಾಯವ್ವಿಯೆ

ಗಿಂಡ್ಯಲ್ಲೇ ನೀರ ಕೊಡವಲೇ ॥ ತಾಯವ್ವಿಯೆ

ಚುಗ್ಗೀ ಕೊನ ಮೋರೇ ತೂದೀನೇ ॥ ನಿನ್ನ ಮಗನೇ ॥ ೪೩ ॥

ಲಾಟಕೆ ಲವನೇ ಕುಲೂವನೇ ॥ ಕುಲ್ಲೂ ಹೊತ್ತಿನಲ್ಲಿ

ಯೆಲಿಯ ಮೇನನ್ನಾ ಬಡಚೇರೇ ।

ಇಂದುಂಡ ಲೂಟ ಹೊತ್ತಾರಂದೂಟ, ಚಂಜಬಂದುಡೀದೇ ॥ ೪೪ ॥

▪ ಹೇಳಿದವರು: **ದಿ. ದೇವಿ ಮಾರು ಗೌಡ,** ಕಲ್ಕೋಡು

❖

# ೯೧. ತಳವಾರ ಹುಡುಗಿ

ತಿಂಗಳ ಬೆಳಕಾ ಅಂಗಳ ಬೆಳ್ಗತಲೆ ಕೋಲಣ್ಣಾಕೋಲ |
ತಾಟಗಿತ್ತೀ ತಳವಾರ ಹುಡಗೀ
ಪ್ಯೇಟೆ ವಳಗೇ ಲಾಟೀನ ನೆಯತೆತಿ
ತಾಟಗಿತ್ತೀ ತಳವಾರ ಹುಡಗೀ ||
ರೊಕ್ಕಾದಾಗೆ ವಕ್ಕಲಗಿತ್ತೀ
ಕತ್ಲೆ ಕೋಣ್ಯಾಗೆ ಲೆಕ್ಕಾ ಯೆಣಸ್ತಳೆ ||
ತಾಟಗಿತ್ತಿ ತಳವಾರ್ ಹುಡುಗೀ |
ವಳ್ಳೆ ರೊಕ್ಕದಾಗ ವಕ್ಕಲಗಿತ್ತಿ
ವಳ್ಳೇ ಲೇಪೆ ತಡಿ ಹಾಸಿದಾಳ
ಕತ್ಲೀಕೋಣೀಗ ಕರೆತಾಳೆ ||
ವಳ್ಳೆ ಕೋಣ್ಯಾಗೆ ರೊಕ್ಕಾ ಎಣಿಸ್ತಳೆ
ಲೆಕ್ಕಾಯೆಣಿಸಿ ಮಡ್ಲಾಗೆ ಹಾಕ್ತಾಳೆ
ತಾಟಗಿತ್ತಿ ತಳವಾರ ಹುಡುಗೀ |
ಜಾತಿ ವಳಗೇ ಗಾಣಿಗರ ಹುಡಗೀ
ತಾಟಗಿತ್ತಿ ತಳವಾರ ಹುಡಗೀ ||

▪ ಹೇಳಿದವರು: **ಪುಟ್ಟು ಪುಟ್ಟ ಗೌಡ,** ಬಂಗಣೆ ಊರು, ೨೨/೫/೭೯

❖

# ೯೨. ಸ್ವಾಮಿ ಶಂಕರನಾ ನೆನೆದೇವೂ
## (ಅಡ್ಡ ಗುಣತದ ಪಡ)

ತಂದನಾನೋ ತಾನನಂದ್ರನಾನಾ
ತಂದನಾऽನೋ ತಾನನಾ ॥ ೧ ॥
ನವ್ಲ ರಾಯರ ಪಟ್ಣಕೇ ಬಂದರಿಬ್ರ ಕಲ್ಲಾರೂ
ನೆವಲಂತಿ ಕರ್‌ದಾರೋ ಯೆಮ್ಮೆ ದಿಂಬವಾಗೇ ॥ ೨ ॥
ನಾಗಪ್ಪಾ ನಾದಾಗೇ ಹೋಗಪ್ಪಾ ಗುತ್ತೀಗೇ
ಬಾರಪ್ಪಾ ಶುಗ್ಗೀ, ಬೆಲೆ ಮುಂದೇ
ನಾಗಮಂಡಲವೇ ಗಯಸೂನೋ ॥ ನಾಗಪ್ಪಾ
ಮಂಡಲಕೇ, ನೀರಾ ಯರೆಶೂನೋ (ಯೆರೆಶೂನೆ) ॥ ನಾಗಪ್ಪಾ
ಹುಲ್ಲಾನಾದೆಲ್ಲೀ ಬಯವಿಲ್ಲಾ ॥ ೩ ॥
ದಾಟಿರದಕೇ ವಿಶವಿಲ್ಲಾ ॥ ನಾಗಪ್ಪಾ
ನಾಗಮಂಡಲವೇ ಗೆಯಸೂನೋ ॥ ೪ ॥
ತಂದನಂದಾನೋ ತಾನನಂದೆ, ನಾನಾರ
ತಂದನಂದಾನೇ ತಾನನಾನಾ ॥ ೫ ॥
ಸ್ವಾಮೀ, ನೆನವೆನೋ ಬೂಮಿಗೊಂದ ನೆನಿಯೋ
ಶಿವನೇ ಶಿವನಿಂಗಾ ಶರಣೋ ॥ ೬ ॥
ತಂದನ್ನೋ ನಾನೇ ತಾನನಂದೆ ನಾನಾರ
ತಂದನ್ನೇ ತಾನೇ ತಂದನಾನಾ ॥ ೭ ॥
ಸ್ವಾಮಿ ನೆನವೆನೋ ಬೂಮಿಯ ನೆನವೆನು
ಸ್ವಾಮಿ ಶಂಕರನಾ ನೆನೆವೆನೊ ॥ ೮ ॥
ಸ್ವಾಮಿ ಶಂಕರನಾ ನೆನದಿಟ್ಟಲಾದೀದರೆ
ಬರದೀದ ಹಾಡೇ ಬರಲಂದೋ ॥ (ಬೋರೆದ್ದೀ) ಬಂದಾರೇ ॥ ೯ ॥

ಶಲ್ಪ ಕೋಲು ಶಮನಾ ಮಯಲಲ್ಲಿ ॥ ಮಯ್ಲಲ್ಲೀ ಶಲ್ಲೀದಾರೆ
ಮಲ್ಲಿಗೂವೊಂದೇ ಮುಡಿಯುವೆನೂ ॥ (ಮುಡಿಯುವೆ) ಕಲವೇರಾ ಕಲವೇರಾ ॥ ೧೦ ॥
ಹಾಡು ತಪ್ಪಿದರೇ ನಗಬೇಡಿ ॥ (ನಗಬೇಡಿ) ಕಲಬೇರಾ
ಹಾಡೀಗೆ ಜೆನಿಯಾ ಜನವಿಲ್ಲಾ ॥ ಬಾವಾದೀರ ॥ ೧೧ ॥
ಹಾಡು ತಪ್ಪಿದರೇ ನೆಗಬೇಡೀ ॥ ಕಲಬೇರಾ
ಹಾಡಿಗೆ ಜೆನಿಯಾ ಮೂದಲಿಲ್ಲ ॥ ಬಾವಾದೀರೇ
ಜೋಡಿನಾ ಜನವೇ ಬರಲಿಲ್ಲಾ ॥ ೧೨ ॥
ಇಂದನಂದಾನೋ ತಾನನಂದೆ ನಾನಾರ
ತಂದ ನಂದಾನೋ ತಾನನಾನಾ ॥ ೧೩ ॥

▪ ಹೇಳಿದವರು: **ಕುಪ್ಪ ಬೇಡು ಗೌಡ**, ಕಲವೇ

❖

# ೯೩. ಸುತ್ತುಗೋಲೂ (ಸರುಣೆಂದೆ ಸಿವನೀಗೂ)

ಸೆರುಣೆಂದೆ ಸಿವನೀಗೂ
ಸೆರುಣೆಂದೇ ಗುರುವೀಗೂ
ಸರುಣೆಂದೇ ಸಿವನಾ ಪಾರವತಿಗೂ ಕೋಲೇ ॥ ೧ ॥
ಇನ್ಯಾದೇವರಾ ಬಲಗೊಂಡೇ ಕೋಲೇ
ಇನ್ಯಾದೇವರಾ ಬಲಗೊಂಡೇ........ ಕೋಲೇ ॥ ೨ ॥
ಇನ್ಯಾದೇವರಾ ಬಲಗೊಂಡೇ । ಕೋಲೇ?
ತಳದಾ ಚೊಡ್ಯಮ್ಮನಾ ಬಲಗೊಂಡೇ । ಕೋಲೇ ॥ ೩ ॥
ಇನ್ಯಾದೇವರಾ ಬಲಗೊಂಡೇ । ಕೋಲೇ
ತಳದಾ ಮಂಜನಾ ಬಲಗೊಂಡೇ । ಕೋಲೇ? ॥ ೪ ॥
ಇನ್ಯಾ ದೇವರಾ ಬಲಗೊಂಡೇ । ಕೋಲೇ?
ತಳದಾ ಗಣಪತೀ ಬಲಗೊಂಡೇ । ಕೋಲೇ ॥ ೫ ॥

ಇನ್ನ್ಯಾ ದೇವರಾ ಬಲಗೊಂಡೇ ಕೋಲೇ?
ತಳದಾ ಈಸ್ವಾರಾನಾ ಬಲಗೊಂಡೇ ಕೋಲೇ ॥ ೬ ॥
ದೇಸ ದೇಸಾ ನಾ ತಿರಗೀನಾ
ಮೂರು ದಾಸಾಳಾ ಹೂವ ತಂದೇ ॥ ೭ ॥
ದಾಸಳಾ ಹೂವ ಮುಡಿಯೇ ಜಾಣೆ
ದಾಸರೀ ದಾಕಾಗಿ ಹೋದ ॥ ೮ ॥

▪ ಹೇಳಿದವರು: **ಗಣಪ ಸುಬ್ಬಗೌಡ, ಮೊಳೇಸಾಲು**

❖

# ೯೪. ಬಂಗಾರದ ಎಲೆ ಮೇಲೆ ಸಿರಿ ಬರಲಿ

ತಾನ ತಂದ್ರನಾನಾ ನಾನಾ ತಂದ್ರನಾನಾ
ತಂದನೊಂದಾನೋ ತಂದಾನಂದ್ರನಾನಾ
ಮೊಲೆಗಾಲ ಪೂರೆ ಹೊಯ್ಲಿ ಭೂಮಿತನು ಯೆಲ್ಲೀ
ಚಿಂಗಾರೆಲೆ ಮೇನೇ ಶಿರಿ ಬರ್‌ಲೋ ತಾನಾ
ದಕ್ಕನ ಮೈಮುದರೀ ಯದ್ದಿ ಕುಲ್ಲಾ ನಾರಾಯಣಶ್ವಾಮೀ
ಶಲ್ದ ಶಂಡುಕೀ ಕಟ್ಟನೆ ನಾರಾಯಣ ಸ್ವಾಮೀ
ಹಾರನೇ ಪೊಗಡೇ ಕಟ್ಟನೆ ನಾರಾಯಣ ಸ್ವಾಮೀ
ಕೈಕಾಲ್ ಮೊರೇನೇ ತೊಲ್ದ ನಾರಾಯಣ ಸ್ವಾಮೀ
ಕಟ್ಟಿಗೆ ಹಾಶೆ ಮೇನೇ ಕುಂತ ನಾರಾಯಣ ಸ್ವಾಮೀ
ಪಟ್ಟೆಶಂಚೀಯಾ ಬಿಡ್ಯಾನ ನಾರಾಯಣ ಸ್ವಾಮೀ
ರಾಯರೆ ಹಣ್ಣಡಕ್ಕೇ ತೆಗ್ದಾ ನಾರಾಯಣ ಸ್ವಾಮೀ
ಉಕ್ಕಿನಾ ಶೂರೀ ತೆಗ್ದಾ ನಾರಾಯಣ ಸ್ವಾಮೀ
ವಡ್ಡಿ ಮೂರೆ ಹೋಲಾ ಮಾಡನೆ ನಾರಾಯಣ ಸ್ವಾಮೀ
ನಾಗಬಲ್ಲೀಯಾ ಶರೆತಿಗ್ದೀ ನಾರಾಯಣ ಸ್ವಾಮೀ
ಹಾಲಲೇ ಚಂದಾ ಹಣೆಸುಣ್ಣ ತೆಗ್ದೀ ನಾರಾಯಣ ಸ್ವಾಮೀ

ಈಲೆದೊಂದು ಕಲ್ಲಾ ಮೇದಾ ನಾರಾಯಣ ಸ್ವಾಮೀ
ಕತ್ರೆಸ್ ಕರೀ ರುಂಡಾ ಉಲ್ಲಾನ ನಾರಾಯಣ ಸ್ವಾಮೀ
ಕಂಬುಲೀ ಹಾಶುಗಿ ಮಾಡನು ನಾರಾಯಣ ಸ್ವಾಮೀ
ಯೆಣ್ಣಗಂಬುಲೀ ಹೊದ್ಕೆಯ ಮಾಡ್ಕಂಡೀ
ಶಯನ ಮಾಡಿನ್ನೇ ವರ್ಗಾನೆ ನಾರಾಯಣ ಸ್ವಾಮೀ
ಹಿಮದಾ ಗಾಲೀ ಬೀಸದ ನಾರಾಯಣ ಸ್ವಾಮೀ
ಮಾಯದಾ ನಿದ್ರೀ ಬೀಲ್ವದೆ ನಾರಾಯಣ ಸ್ವಾಮೀ
ತಾನ ತಂದ್ರನಾನಾ ನಾನಾ ತಂದ್ರನಾನಾ

▪ ಹೇಳಿದವರು: **ದಿಂಬೆ ಕುಪ್ಪ ಗೌಡ** ಮತ್ತು **ಕುಪ್ಪ ಮಾಟುಗೌಡ, ಕೂಜಳ್ಳಿ**

❖

# ೯೫. ರನ್ನದಾ ಕೋಲು ಕೋಲಣ್ಣಾ

ಹೂಗ ತರವೋ ಮಾಲಿಂಗರಣ್ಣಾ
ಹೂಗೀನ ಬೆಲಿ ಮೇಲ್ ಕೇಳ ಬಚ್ಚಣ್ಣಾ ‖ ೧ ‖
ತಟ್ಟಾನ ಕ್ಯಾದುಗೀ ಬಟ್ಟಾನ ಮಲ್ಲುಗೀ
ಪಟ್ಟಣಕೇ ಬಾ ನಮ್ಮ ತುರಾಯಕ ‖ ೨ ‖
ಹೂಗಿನ ಕೋಲು ಕೋಲಣ್ಣಾ
ರಣ್ಣದಾ ಕೋಲು ಕೋಲಣ್ಣಾ ‖ ೩ ‖
ಪಾರಂಬ ಪಾರಂಬ ಪಾರಂಬ ದಿನದಲಿ
ತಾಲಿಟ್ಟು ಮದಲೀ ಕುಣಿದಾಡು ಕೋಲೇ ‖ ೪ ‖
ಯೇ ತಟ್ಟನ ಕ್ಯಾದುಗಿ ಬಟ್ಟಾಣ ಮಲ್ಲುಗಿ
ಪಟ್ಟಣಕೆ ಬಾ ನಮ್ಮ ತುರಾಯಕೇ ‖ ೫ ‖
ಹೂಗಿನ ಕೋಲು ಕೋಲಣ್ಣಾ
ರಣ್ಣದಾ ಕೋಲು ಕೋಲಣಾ ‖ ೬ ‖

ಸುಗ್ಗಿಮಕ್ಕಳ ಬಂದೀ ನುಗ್ಗಿಕಾಯ್ ಕೊಯ್ದೀ
ನುಗ್ಗಿರಜ್ಜಿಮೂಗೂ ಮೊಳನೀಟಾ || ೭ ||
ಓಹೋ ಹೋಹೋ ಹೌದೇ
ತಂದನಾ ತಾನಾ ತಾನನಂದ್ರನಾನಾ || ೮ ||
ಅಳ್ಳಡೋಗಿ ಬೆಳ್ಳಗಾದ್ರ ಮಲ್ಲಿಗೇನೆ ಮಾಡ್ವದೋ?
ಚೆಲ್ವಿಗಂಡಾ ಚೆಲ್ವಿನಾದ್ರ ಜನ ಕೇನ ಸಲ್ವದೋ? || ೯ ||

▪ ಹೇಳಿದವರು: **ದಿ. ಸಣಕೂಸ ಅಗೇರ**

❖

# ೯೬. ರಣ್ಣದಾ ಕೋಲು ಮೇಲೆಣಿರೋ

ಕೋಲು ಕೋಲಣಿ ಕೋಲೇ ರಣ್ಣದಾ ಕೋಲು ಮೇಲಣಿರೋ || ಪಲ್ಲವಿ ||
ಗದ್ಯ || ನಿನಗೆ ಯೆಲ್ಲಾಯ್ತೊ ಬಾವಾ, ನಮ್ಗ್ ಕಂಟ್ರ ಕೋಣಾಯ್ತೊ ಬಾವಾ
ಯೆಂತಾ ಬಂದ್ರೋ ಗುಮಟಿಸಬ್ದಾಗಿ ಬಂದ್ರು
ಗುಮಟೆನಾದ್ರೂ ಹೊಡಿರೋ
ಹಕ್ಕೀಗೆ ಹಣ್ಣಿನಾಸೆ ನುಕ್ಕಿಗದ್ದೆಗೆ ನೀರಾಸೆ
ಕೋಲು ................ || ೧ ||
ಹಕ್ಕೀಗೆ ಹೆಗೆಯಾಕೋ ಕೋಡಗೆ ನೆಗೆಯಾಕೋ?
ಕೋಡನ ಕಯ್ಯೀಗೆ ಬಳೆಯಾಕೊ ರಣ್ಣದಾ
ಕೋಲು ................ || ೨ ||
ಹಕ್ಕೀಗೆ ಹಲ್ಲಿಲ್ಲ ಕೆಪ್ಪೇಗೆ ಕೆಮಿಯಿಲ್ಲ
ಹತ್ತೂ, ಕಾಲೆಸಡೀಗೆ ತಲೆವಿಲ್ಲ ರಣ್ಣದಾ
ಕೋಲು ................. || ೩ ||
ಬಾಳೆಯ ಸುಳಿ ಚೆಂದ ಸೂಳೇರ ತಲೆಚೆಂದ
ಕಂಚೂಗಾರ ಹುಡುಗೀ ಮೊಲೆ ಚೆಂದ ರಣ್ಣದಾ
ಕೋಲು ................. || ೪ ||

ಬಸಳೇಗೆ ಮುಳ್ಳಿಲ್ಲ ಬಾಳೇಗೆ ಕೆಂಚಿಲ್ಲ
ಬಾಳೆಗೆ ಮುಂಚಿನ್ನಾಗೆ ಹೆಡೆವಿಲ್ಲ ರಣ್ಣದಾ ‖ 5 ‖
ಕೋಲು ಕೋಲಣಿ ಕೋಲೇ ರಣ್ಣದಾ
ಕೋಲು ಮೇಲಣಿರೋ ‖ 6 ‖

❖

# ೯೭. ಸುತ್ತುಮುತ್ತು ಸೂರಣ ಕಟ್ಟೆ

ಸುತ್ತು ಮುತ್ತು ಸೂರಣ ಕಟ್ಟೆ ನಿಂತು ನೋಡಿದರೆ ದಾವಣಗೇರಿ
ಯೆತ್ತು ಕಟ್ಟುಕೇ ಜಾಗಾನಿಲ್ಲ ಹೇರೂರಾಗಾ ‖ ೧ ‖
ಮಂಚದಡಗೆ ನಿತ್ತುಕೊಂಡು ಲಂಚವನ್ನು ಕೇಳುತ್ತಾರೆ
ಯಂತ ಚೇರವರಾರೂ ರಪ್ಪ ಈನಾರಾಗಾ ‖ ೨ ‖

❖

# ೯೮. ಕತೆ ಕತೆ ಕಾರಣವೋ..

ಕತೆ ಕತೆ ಕಾರಣವೋ ಬಾವಾ ಬೆಕ್ಕೀಗೆ ತೋರಣವೋ
ಬೆಕ್ಕೀಗೆ ತೋರಣವೋ ಬಾವಾ ಶಿದ್ದೆಲ್ಲಿ ದಬ್ಬಣವೋ ‖ ೧ ‖
ಶಿದ್ದೆಲ್ಲಿ ದಬ್ಬಣವೋ ಬಾವಾ ಅಟ್ಟದ ಮೇಲೆದಡ್ಡಬಂಡೋ
ಅಟ್ಟದ ಮೇಲೆ ದಡ್ಡ ಬುಡ್ಡವೋ ಬಾವಾ ಬೆಕ್ಕೀಗೆ ಜಗಳಾವೋ ‖ ೨ ‖

▪ ಹೇಳಿದವರು: **ಕೋಡಿಗದ್ದೆ ಕುವರಿ ಮರಾಟಿಗಳು, ಕೋಡಿಗದ್ದೆ ಶ್ರೀ ರಾಮಭಟ್ಟರ ಸಂಗಡ** ಅವರ ಕೇರಿಗೆ ಹೋಗಿ ಬರೆದು ಕೊಂಡಿದ್ದು. ೯೬, ೯೭, ೯೮ ಮೂರನ್ನೂ ಹೇಳಿದ್ದಾರೆ.

ಮಿತ್ರಮಾಧ್ಯಮ
ನೋಂದಾಯಿತ ಟ್ರಸ್ಟ್
ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ
mitramaadhyama.riverthoughts.com
beluru@beluru.com

# ಮಿತ್ರಮಾಧ್ಯಮದ ಸಾಮಾಜಿಕ ಚಟುವಟಿಕೆಗಳು

MITRAMAADHYAMA

## ಈಗ ನಡೆಯುತ್ತಿರುವ ಚಟುವಟಿಕೆಗಳು

- **ಮಿತ್ರಮಾಧ್ಯಮದ ಟ್ರಸ್ಟೀ ಶ್ರೀ ಬೇಳೂರು ಸುದರ್ಶನ ಅವರಿಂದ ಕರ್ನಾಟಕ ಸರ್ಕಾರದ ಜಾಲತಾಣಗಳಲ್ಲಿ ಕನ್ನಡ ಬಳಕೆ, ಏಕರೂಪತೆ ಸುಲಭಗ್ರಾಹ್ಯತೆ ಕುರಿತಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಮಗ್ರ ವರದಿ ಸಲ್ಲಿಕೆ (2017). ಈ ವರದಿಯ ಆಧಾರದಲ್ಲಿ ಸರ್ಕಾರವು ಸರ್ಕಾರದ ಏಕೀಕೃತ ವೆಬ್ ಮಾಹಿತಿ ಸಂಗ್ರಹಣಾ ವ್ಯವಸ್ಥೆಯನ್ನು ರೂಪಿಸಿದೆ (2019)**
- **ಕನ್ನಡವೂ ಸೇರಿದಂತೆ ಭಾರತೀಯ ಭಾಷೆಗಳ ತಂತ್ರಾಂಶಗಳನ್ನು ಕಡ್ಡಾಯವಾಗಿ ಭಾರತೀಯ ಮಾರುಕಟ್ಟೆಗೆ ಬರುವ ಮೊಬೈಲ್ ಸಹಿತ ಎಲ್ಲಾ ಐಟಿ ಸಾಧನಗಳಲ್ಲಿ ಮಾರಾಟಕ್ಕೆ ಮುಂಚಿತವಾಗಿಯೇ ಅಳವಡಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿ ಸಹಿ ಸಂಗ್ರಹ, ಮನವಿ ಸಲ್ಲಿಕೆ. (2016)**
- ಸಿದ್ಧ ಪೊಟ್ಟಣಗಳ ಮೇಲೆ ಭಾರತೀಯ ಭಾಷೆಗಳಲ್ಲಿ ಉತ್ಪನ್ನದ ಶೀರ್ಷಿಕೆ, ಮಾಹಿತಿ ಮುದ್ರಿಸಲು ಒತ್ತಾಯಿಸಿ ಅಭಿಯಾನ. (2016)
- ಕನ್ನಡದ ಓಸಿಆರ್‌ನ್ನು ಮುಕ್ತ ತಂತ್ರಾಂಶವಾಗಿ ಬಿಡುಗಡೆ ಮಾಡುವಂತೆ ಭಾರತೀಯ ವಿಜ್ಞಾನ ಸಂಸ್ಥೆಗೆ ಸೂಚಿಸಲು ಕೇಂದ್ರ ಸರ್ಕಾರಕ್ಕೆ ಒತ್ತಾಯ (2016)
- ಕನ್ನಡವೂ ಸೇರಿದಂತೆ ಕೇಂದ್ರ ಸರ್ಕಾರದ ಐಟಿ ಇಲಾಖೆಯಿಂದ ರೂಪಿಸಿರುವ ವಿವಿಧ ತಂತ್ರಾಂಶಗಳನ್ನು ಸಮಕಾಲೀನಗೊಳಿಸಿ ಮುಕ್ತ ತಂತ್ರಾಂಶಗಳಾಗಿ ಬಿಡುಗಡೆ ಮಾಡಲು ಒತ್ತಾಯ (2016)

## ಈವರೆಗೆ ಕೈಗೊಂಡ ಚಟುವಟಿಕೆಗಳು

- ವಿವಿಧ ಸೇವಾಕಾರ್ಯಗಳಿಗೆ ಧನಸಹಾಯ (2016,2018)
- ರಾಜ್ಯ ಸರ್ಕಾರಕ್ಕೆ ಮಾಹಿತಿ ನೀಡಲು ಓಸಿಆರ್ ಕುರಿತು ಒಂದು ದಿನದ ಕಾರ್ಯಾಗಾರ ಸಂಘಟನೆ (2015)
- **ಕ್ರಿಯೇಟಿವ್ ಕಾಮನ್ಸ್ ಎಂಬ ಮುಕ್ತ ಹಕ್ಕುಸ್ವಾಮ್ಯದಡಿ ಕನ್ನಡದ ಮೊಟ್ಟಮೊದಲ ಪುಸ್ತಕ 'ಕಂಪ್ಯೂಟರ್ ಮತ್ತು ಕನ್ನಡ' ಪ್ರಕಟಣೆ (2014) ಉಚಿತ ಪುಸ್ತಕ ಸಂಸ್ಕೃತಿ ಅಭಿಯಾನ (freebookculture.com/ freebookculture.riverthoughts.com)**
- 'ಇಂಟೆಗ್ರೇಟಡ್ ಪವರ್ ಪಾಲಿಸಿ' ಕುರಿತ ಪುಸ್ತಕದ ಬಿಡುಗಡೆ ಕಾರ್ಯಕ್ರಮ, ಪ್ರಚಾರ (2013)
- ಎಂಡೋಸಲ್ಫಾನ್ ಸಂತ್ರಸ್ತರಿಗೆ ಸೂಕ್ತ ಪರಿಹಾರ ಕೊಡುವಂತೆ ಒತ್ತಾಯಿಸಿ ರಾಜ್ಯ ಸರ್ಕಾರಕ್ಕೆ ಮನವಿ, ವಿಶೇಷ ಮಾಹಿತಿ ಸಭೆ (2011)
- ರಾಜ್ಯದ ಇಂಧನ ನೀತಿಯಲ್ಲಿ ಪರಿಸರ ಸಂರಕ್ಷಣೆಗೆ ಒತ್ತು ನೀಡಲು ಮುಖ್ಯಮಂತ್ರಿಯವರಿಗೆ ಒತ್ತಾಯ; ಕನ್ನಡದ ಪ್ರಮುಖ ದಿನಪತ್ರಿಕೆಗಳಲ್ಲಿ ಹಿರಿಯ ಸಾಹಿತಿ, ಕಲಾವಿದರ ಸಹಿಯ ಬಹಿರಂಗ ಪತ್ರ ಪ್ರಕಟಣೆ (2010)
- ವಿದ್ಯುತ್ ತಜ್ಞ ಶ್ರೀ ಶಂಕರ ಶರ್ಮ, ಮಕ್ಕಳ ಮನೋವಿಜ್ಞಾನಿ ಡಾ॥ ಮಾಳವಿಕಾ ಕಪೂರ್ ಮುಂತಾದವರಿಂದ ಮಾಹಿತಿ ಸಭೆಗಳು.

# ಡಾ॥ ಎಲ್ ಆರ್ ಹೆಗಡೆ

ಅಪ್ರಕಟಿತ ಸಂಗ್ರಹ ಮಾಲೆ

೫೭ ಕೋಲಾಟದ ಪದಗಳು



ಉತ್ತರ ಕನ್ನಡದ ನಶಿಸಿಹೋಗುತ್ತಿರುವ ಜಾನಪದ ಸಂಪತ್ತನ್ನು ಸಂಗ್ರಹಿಸಿ, ಉಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ಮಹಾಚೇತನ. ಅಧ್ಯಾಪನದಿಂದ ನಿವೃತ್ತಿಯಾದ ನಂತರ ತಮ್ಮೆಲ್ಲ ಸಮಯವನ್ನು ಜಾನಪದ ಸಾಹಿತ್ಯ ಸಂಗ್ರಹ ಮತ್ತು ಸಂರಕ್ಷಣೆಯ ಕೆಲಸಕ್ಕೇ ಮೀಸಲಿಟ್ಟಿದ್ದ ಸಮಾಜಜೀವಿ. ಜಾನಪದ ಕ್ಷೇತ್ರದಲ್ಲಿ ಅವರ ಸಾಧನೆ ಅಪೂರ್ವ. ಅವರಿರುವಾಗ ಪ್ರಕಟವಾದ ಪುಸ್ತಕಗಳು ಹಾಗೂ ಅವರೇ ಬರೆದ ಪಾಂಡಿತ್ಯ ಪೂರ್ಣ ಪೀಠಿಕೆ, ಮುನ್ನುಡಿಗಳು ಜಾನಪದ ಕ್ಷೇತ್ರದಲ್ಲಿ ಅವರ ಆಳವಾದ ಅಧ್ಯಯನವನ್ನು ಎತ್ತಿ ತೋರಿಸುತ್ತವೆ. ಉತ್ತರ ಕನ್ನಡದ ಬುಡಕಟ್ಟು ಜನಾಂಗಗಳ ಕುರಿತ ಅವರ ಅಧ್ಯಯನಗಳು ಅನನ್ಯ; ಸಂಶೋಧನಾ ಪ್ರಬಂಧಗಳು, ಭಾಷಣಗಳು, ಜಾನಪದ ಲೇಖನಗಳು ಅಸಂಖ್ಯ.

ಈಗಾಗಲೇ ಅವರ 84 ಕೃತಿಗಳು ಪ್ರಕಟಣೆ ಕಂಡಿವೆ. ಅವರ ಅಪಾರ ಸಂಗ್ರಹದಲ್ಲಿ ಪ್ರಕಟವಾಗದ ಜಾನಪದ ಸಾಹಿತ್ಯ ಇನ್ನೂ ಸಾಕಷ್ಟಿದೆ. ಅವುಗಳಲ್ಲಿ ಕೆಲವನ್ನು ಆಯ್ದು ಅಪ್ರಕಟಿತ ಸಾಹಿತ್ಯ ಸರಣಿಯನ್ನು ಈ ಮೂಲಕ ಆರಂಭಿಸಲಾಗಿದೆ. ಅವರ ಪುತ್ರಿ ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ ಅವರು ಈ ಸಂಗ್ರಹಗಳನ್ನು ನಾಡಿಗಾಗಿ ಸಂರಕ್ಷಿಸಿ, ಸಂಪಾದಿಸಿ ಕೊಟ್ಟಿದ್ದಾರೆ.

ಉಚಿತ ಪುಸ್ತಕ

ಮಿತ್ರಮಾಧ್ಯಮ
ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ